ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 7 ಫೆಬ್ರವರಿ 8-14, 1999 ರೂ. 2.00

ಫೆಬ್ರವರಿ 9: ದೇಶಾದ್ಯಂತ ಪ್ರತಿಭಟನೆ

ಜನಗಳ ಸಂಕಟಗಳಿಗೆ ಸ್ಪಂದಿಸಲಾರದ ಈ ಬಿಜೆಪಿ ಸರಕಾರ

ಉತ್ತರದ ಮೂರು ರಾಜ್ಯಗಳ ಜನಸಮುದಾಯ ಬಿಜೆಪಿ ಸರ್ಕಾರದ ಕೇವಲ ಏಳೆಂಟು ತಿಂಗಳಲ್ಲಿ ಆದ ಬೆಲೆ ಏರಿಕೆಯ ಬೇಗೆಯಲ್ಲಿ ಬೆಂದು ಈ ಬೇಗೆಗೆ ಕಾರಣರಾದವರಿಗೆ ತಕ್ಕ ಉತ್ತರವನ್ನು ನೀಡಿತು. ಇಡೀ ದೇಶದಲ್ಲಿಯೇ ಉಂಟಾಗಿದ್ದ ಬೆಲೆ ಏರಿಕೆಗೆ ತಕ್ಷಣವೇ ಪ್ರತಿಕ್ರಿಯಿಸಲು ಆ ರಾಜ್ಯಗಳಿಗೆ ಅವಕಾಶವಾಯಿತು. ಈ ಪ್ರತಿಕ್ರಿಯೆ ಇಡೀ ದೇಶದ ಸಾಮಾನ್ಯ ಜನರ ಭಾವನೆಗಳ ಸೂಚಿಯಾಯಿತು. ಆದರೆ ಜನ ಜೀವನದ ಸಂಕಟಕ್ಕೆ ಹಾಗೂ ಅವರ ತೀವ್ರ ಭಾವನೆಗಳಿಗೆ ಸ್ಪಂದಿಸುವಪ್ರಜಾಸತ್ತಾತ್ಮಕ ಸತ್ಸಂಪ್ರದಾಯ ಬಿಜೆಪಿ ಕೂಟದ ಸರ್ಕಾರಕ್ಕೆ ಬಹಳ ದೂರವೆಂಬುದು ಮುಂದಿನ ದಿನಗಳ ಅವರ ವರ್ತನೆ ಹಾಗೂ ಕ್ರಮಗಳು ತೋರಿಸಿವೆ. ಕೆಲದಿನಗಳ ಹಿಂದೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ವಿತರಿಸುವ ಗೋಧಿ, ಅಕ್ಕಿ ಸಕ್ಕರೆಯ ಬೆಲೆಗಳನ್ನು ಶೇ. 29 ರಿಂದ 44 ರಷ್ಟು ಏರಿಸಲಾಗಿದೆ. ಇದರಲ್ಲಿ ನಂತರ ಬಡತನದ ರೇಖೆಯ ಕೆಳಗೆ ಇರುವ ಜನ ವಿಭಾಗಕ್ಕೂ ಕೂಡ ಮಾಡಿದ ಬೆಲೆ ಏರಿಕೆಯನ್ನು ದೇಶದಲ್ಲಿ ಬಂದ ಸಾರ್ವತ್ರಿಕ ಪ್ರತಿಭಟನೆ, ತಮ್ಮದೆ ಮಿತ್ರ ಕೂಟದ ಇತರ ಪಕ್ಷಗಳ ಕಡುವಿರೋಧಗಳ ಹಿನ್ನೆಲೆಯಲ್ಲಿ ಹಿಂದೆಗೆದುಕೊಂಡರೂ ದೇಶದ ಜನರ ದೊಡ್ಡ ವಿಭಾಗಕ್ಕೆ ಇದು ತಡೆದುಕೊಳ್ಳಲಾರದ ಹೊರೆ. ಏಕೆಂದರೆ ಬಡತನದ ರೇಖೆಯ ಕೆಳಗಿರುವ ಬಡವರಿಗೆ ಈ ರಿಯಾಯಿತಿ ಬೆಲೆಯಲ್ಲಿ ನೀಡಲಾಗುತ್ತಿರುವುದು ಕೇವಲ 10 ಕೆ.ಜಿ. ಅವರ ಕುಟುಂಬಗಳಿಗೆ ಬೇಕಾಗುವ ಮೂರು ನಾಲ್ಕು ಪಟ್ಟು ಆಹಾರ ಧಾನ್ಯಗಳನ್ನು ಮಾರುಕಟ್ಟೆಯಲ್ಲಿ ಕೊಳ್ಳಬೇಕಾಗಿದೆ. ಅಲ್ಲದೆ ಬಳಕೆದಾರರ ಬೆಲೆ ಸೂಚ್ಯಂಕದಲ್ಲಿ ಆಗುತ್ತಿರುವ ಏರಿಕೆಯ ಬಹಳ ಭಾಗ ಧಾನ್ಯಗಳದ್ದೆ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಆಹಾರಧಾನ್ಯಗಳ ಬೆಲೆ ಏರಿದರೆ ಅದು ಕೇವಲ ಈ ವ್ಯವಸ್ಥೆಯನ್ನು ಬಳಸುವವರಿಗೆ ಮಾತ್ರವೇ ಅಲ್ಲದೆ ಸರ್ವತ್ರ ಬೆಲೆ ಏರಿಕೆಗೆ ಕಾರಣವಾಗುತ್ತದೆ. ಅಲ್ಲದೆ ಬಡತನದ ರೇಖೆ ಎಂಬುದೇ ಅತ್ಯಂತ ಕೆಳಗಿರುವ, ಜೀವನದ ಬೇರೆ ಯಾವ ಅಗತ್ಯಗಳನ್ನೂ ಪರಿಗಣಿಸದೆ ಕೇವಲ ಕನಿಷ್ಟ ಮಟ್ಟದ ಆಹಾರದ ಬಳಕೆಯನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುವ ಒಂದು ರೇಖೆ. ಹೀಗಾಗಿ ಬಡತನ ರೇಖೆಯ ಮೇಲೆ ಕೂಡಾ ದೊಡ್ಡ ಪ್ರಮಾಣದಲ್ಲಿ ಗುಡಿಸಲು ನಿವಾಸಿ ಬಡವರು, ಕೆಳಮಧ್ಯಮ ವರ್ಗದವರು, ಮಧ್ಯಮವರ್ಗದವರಿದ್ದಾರೆ. ಇವರಿಗೆಲ್ಲಾ ಆಹಾರಧಾನ್ಯಗಳ ಬೆಲೆ, ಅವುಗಳ ಜೊತೆಗೆ ನಂತರ ಏರಿಸಿದ ಅಡುಗೆ ಅನಿಲದ ಬೆಲೆ ಜೀವನದ ಮಟ್ಟದ ಮೇಲಿನ ತೀವ್ರ ಹೊಡೆತ.

ಇವುಗಳ ಜೊತೆಗೆ ಯೂರಿಯಾ ಬೆಲೆಯನ್ನು ಒಂದು ಮೂಟೆಗೆ 17 ರೂ. ಏರಿಸಿದೆ. ಈಗಾಗಲೇ ರೈತ ಉತ್ಪಾದನಾ ವೆಚ್ಚದ ಏರಿಕೆ ಅದಕ್ಕಾಗಿ ಪಡೆಯುವ ಸಾಲದ ದುಬಾರಿ ಬಡ್ಡಿಯ ಭಾರದಲ್ಲಿ ತೊಳಲುತ್ತಿದ್ದಾನೆ. ಈ ಹಿನ್ನೆಲೆಯಲ್ಲಿ ಯೂರಿಯಾ ಬೆಲೆ ಏರಿಕೆ ಒಂದು ಕಡೆ ರೈತನ ಕಷ್ಟಕ್ಕೆ ಮತ್ತೊಂದು ಕಡೆ ಕೃಷಿ ಉತ್ಪನ್ನಗಳ ಬೆಲೆ ಏರಿಕೆಗೆ ಕಾರಣವಾಗುತ್ತದೆ.

ವಾಜಪೇಯಿ ಸರ್ಕಾರದ ತಪ್ಪುದಾರಿಯಲ್ಲಿ ತೀವ್ರವೇಗದಲ್ಲಿ ಚಲಿಸುತ್ತಿರುವ ಆರ್ಥಿಕ ನೀತಿಗಳ ಫಲವಾಗಿ ಭಾರತದ ಆರ್ಥಿಕ ಉತ್ಪಾದನೆ, ರಫ್ತು ಕುಸಿದೆ. 1991 ರಲ್ಲಾದಂತೆ ಮತ್ತೆ ವಿದೇಶಿ ವಿನಿಮಯದ ಬಿಕ್ಕಟ್ಟಿನ ಕಡೆಗೆ ಸಾಗುತ್ತಿದೆ. ಇದೇ ಸಂದರ್ಭದಲ್ಲಿ ಹಿಡಿತವಿಲ್ಲದೆ ಏರಿದ ಹಣಕಾಸು ಕೊರತೆಯನ್ನು ತುಂಬಲು ಬಡ ಹಾಗೂ ಸಾಮಾನ್ಯ ಜನರಿಗೆ ನೀಡುತ್ತಿದ್ದ ಸಹಾಯ ಧನಗಳನ್ನು ತೀವ್ರವಾಗಿ ಕಡಿತಗೊಳಿಸಲಾಗುತ್ತಿದೆ. ಆದರೆ ಅದೇ ಸಮಯದಲ್ಲಿ ದೇಶದ ಶ್ರೀಮಂತ ವರ್ಗಗಳಿಗೆ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತಷ್ಟು ಇನ್ನಷ್ಟು ವಿನಾಯಿತಿಗಳನ್ನು ನೀಡಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ದೇಶದಲ್ಲಿ ಎಡಪಕ್ಷಗಳು ಫೆಬ್ರವರಿ 9 ರಂದು ದೇಶಾದ್ಯಂತ ಸಾರ್ವತ್ರಿಕ ಮುಷ್ಕರ ಮತ್ತು ಹರತಾಳ ಮೊದಲಾದ ಕ್ರಮಗಳ ಮೂಲಕ ದೇಶಾದ್ಯಂತ ಪ್ರತಿಭಟನಾ ದಿನವನ್ನು ಆಚರಿಸಲು ಕರೆ ನೀಡಿವೆ. ಜೊತೆಗೆ ಇತರ ಜಾತ್ಯಾತೀತ, ಪ್ರಜಾಸತ್ತಾತ್ಮಕ ಪಕ್ಷಗಳಿಗೂ ಈ ಪ್ರತಿಭಟನೆಯಲ್ಲಿ ಕೈಜೋಡಿಸಲು ನೀಡಿದ ಕರೆಗೆ ಡಿ.ಎಂ.ಕೆ. ಮೊದಲಾದ ಪಕ್ಷಗಳಿಂದಲೂ ಸ್ಪಂದನೆ ಬಂದಿದೆ.

ನಮ್ಮ ರಾಜ್ಯದಲ್ಲಿ ಸಿಪಿಐ, ಸಿಪಿಐ(ಎಂ), ಇತರ ಪಕ್ಷಗಳು ಪ್ರಜಾಸತ್ತಾತ್ಮಕ ಪಕ್ಷಗಳೊಂದಿಗೆ ಸಂಪರ್ಕಸಾಧಿಸಿವೆ.

ಡಿ.ವೈ.ಎಫ್.ಐ. ಕರೆ

ಜನಸಾಮಾನ್ಯರು ಬೆಲೆ ಏರಿಕೆಯ ಭಾದೆಯಿಂದ ತತ್ತರಿಸುತ್ತಿರುವಾಗಲೇ. ಗಾಯದ ಮೇಲೆ ಬರೆ ಎಳೆದಂತೆ ಕೇಂದ್ರ ಸರ್ಕಾರವು ಜೀವನಾವಶ್ಯಕ ಪಡಿತರ ವಸ್ತುಗಳ ಹಾಗೂ ಅಡಿಗೆ ಇಂಧನದ ಬೆಲೆಗಳನ್ನು ಹೆಚ್ಚಿಸಿರುವ ಆಜ್ಞೆಯನ್ನು ಕೂಡಲೇ ರದ್ದುಪಡಿಸಬೇಕೆಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ)ನ ಕರ್ನಾಟಕ ರಾಜ್ಯ ಸಮಿತಿಯು ಆಗ್ರಹಿಸಿದೆ.

ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್‌ನ ನಿರ್ದೇಶನಗಳಿಗೆ ಗುಲಾಮವಾಗಿರುವ ವಾಜಪೇಯಿಯವರ ಬಿಜೆಪಿ ಮೈತ್ರಿಕೂಟದ ಸರ್ಕಾರವು ಜನತೆಯನ್ನು ಪೂರ್ಣವಾಗಿ ದಿವಾಳಿಯೆಬ್ಬಿಸತೊಡಗಿದೆ. ಇದು ಖಂಡನೀಯ ಎಂದಿರುವ ಡಿವೈಎಫ್‌ಐ ಈ ಬೆಲೆ ಏರಿಕೆಯ ವಿರುದ್ಧ ಫೆಬ್ರವರಿ 9 ರಂದು ರಾಜ್ಯದಾದ್ಯಂತ ಉಗ್ರವಾದ ಪ್ರತಿಭಟನೆಯನ್ನು ನಡೆಸಲು ನಿರ್ಧರಿಸಿದೆ.

ಧೈರ್ಯವಿಲ್ಲದ ಬಿಜೆಪಿ ಮಿತ್ರಪಕ್ಷಗಳಿಂದ ಮುಖವುಳಿಸಿಕೊಳ್ಳುವ ಪ್ರಯತ್ನ

ಎಡಪಕ್ಷಗಳು ಪಡಿತರ ವ್ಯವಸ್ಥೆಯಲ್ಲಿ ಅಕ್ಕಿ, ಗೋಧಿ, ಸಕ್ಕರೆಗಳ ಬೆಲೆಗಳನ್ನು, ಅಡುಗೆ ಅನಿಲದ ಬೆಲೆಯನ್ನು ಏರಿಸಿರುವ ಬಿಜೆಪಿ ನೇತೃತ್ವದ ಸರಕಾರದ ಕ್ರಮಗಳ ವಿರುದ್ಧ ಫೆಬ್ರವರಿ 9 ರಂದು ದೇಶವ್ಯಾಪಿ ಪ್ರತಿಭಟನೆ ಸಂಘಟಿಸಲು ನಿರ್ಧರಿಸಿವೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಫೆಬ್ರವರಿ 1 ರಂದು ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಪ್ರಕಟಿಸಿದರು. ಜನವರಿ 30-31 ರಂದು ನಡೆದ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸಭೆ ಹಾಗೂ ಫೆಬ್ರವರಿ 1 ರಂದು ಎಡಪಕ್ಷಗಳ ಸಭೆಯ ನಂತರ ಈ ಪತ್ರಿಕಾ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು.

ಕೇಂದ್ರ ಸರಕಾರ ಮತ್ತೆ-ಮತ್ತೆ ಕೈಗೊಳ್ಳುತ್ತಿರುವ ಜನ-ವಿರೋಧಿ ನಿರ್ಧಾರಗಳ ವಿರುದ್ಧ ಮುಖವುಳಿಸಿಕೊಳ್ಳುವ ಹೇಳಿಕೆ ಗಳನ್ನು ನೀಡುತ್ತಾ ಬಿಜೆಪಿ ಸರಕಾರದಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳಲು ಅಸಮರ್ಥ ರಾಗಿರುವ ಬಿಜೆಪಿಯ ಮಿತ್ರ ಪಕ್ಷಗಳನ್ನು ಬಲವಾಗಿ ಖಂಡಿಸುತ್ತಾ ಸುರ್ಜಿತ್‌ರವರು ಈ ಪಕ್ಷಗಳು ತಮ್ಮ ಜನ ಬೆಂಬಲವನ್ನು ಕಳಕೊಳ್ಳಲು ಸಿದ್ಧರಾಗಬೇಕು, ಏಕೆಂದರೆ ಅವರು ಜನಸಾಮಾನ್ಯರ ಮೇಲಿನ ಹೊರೆ ಹೆಚ್ಚಿಸುವ ಎಲ್ಲಾ ಕೃತ್ಯಗಳಲ್ಲಿ ಭಾಗೀದಾರರು, ಯಾವುದೇ ಬಲವಾದ ನಿಲುವು ತಳೆಯುವ ಧೈರ್ಯ ಅವರಿಗಿದ್ದಂತಿಲ್ಲ ಎಂದು ಅವರು ಎಚ್ಚರಿಸಿದರು. ಉದಾಹರಣೆಯಾಗಿ ಅವರು ಇತ್ತೀಚಿನ ಬಿಹಾರ ವಿಧಾನಸಭೆಯ ಉಪ ಚುನಾವಣೆಗಳಲ್ಲಿ ಸಮತಾ ಪಾರ್ಟಿಯ ಶೋಚನೀಯ ಪ್ರದರ್ಶನವನ್ನು ಪ್ರಸ್ತಾಪಿಸಿದರು. ಬಿಜೆಪಿ-ಸರಕಾರಕ್ಕೆ ಸಮತಾ ಪಾರ್ಟಿ ನೀಡಿದ ಬೆಂಬಲದ ಪರಿಣಾಮ ಇದು ಎಂದು ಅವರು ಹೇಳಿದರು.

ಬಿಜೆಪಿ ನೇತೃತ್ವದ ಸರಕಾರದ ಕ್ರಮಗಳು ಸರಕಾರದ ವಿಶ್ವಾಸಾರ್ಹತೆ ಯನ್ನು ಕುಂದಿಸಿವೆ, ಸರಕಾರವೆಂಬುದೇ ಅಸ್ತಿತ್ವದಲ್ಲಿಲ್ಲ ಎಂಬ ಜನಸಾಮಾನ್ಯರ ಭಾವನೆಗಳನ್ನು ಬಲಪಡಿಸಿದೆ ಎಂದು ಸುರ್ಜಿತ್‌ರವರು ಈ ಹಿಂದೆ ಗುಜರಾತಿನಲ್ಲಿ ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ನೇರ ಧಾಳಿಗಳು, ಒರಿಸ್ಸಾದಲ್ಲಿ ಆಸ್ಟ್ರೇಲಿಯನ್ ಧರ್ಮ ಪ್ರಚಾರಕನ ಹತ್ಯೆ, ನಂತರ ಅದನ್ನು ಮುಚ್ಚಿಕೊಳ್ಳಲು ಕೇಂದ್ರ ಸರ್ಕಾರದ ಪ್ರಯತ್ನಗಳು ಇವೆಲ್ಲಾ ಅಲ್ಪಸಂಖ್ಯಾತರ ಬಗ್ಗೆ ಈ ಸರಕಾರದ ದುರಭಿಪ್ರಾಯವನ್ನು ತೋರಿಸುತ್ತದೆ ಎಂದರು.

ಎಡಪಕ್ಷಗಳು ಸಿಪಿಐ(ಎಂ) ಪೊಲಿಟ್‌ಬ್ಯೂರೋದ ಮುತುವರ್ಜಿ ಯಿಂದ ದೇಶದ ಜಾತ್ಯಾತೀತ ಹಂದರವನ್ನು ಕಾಪಾಡಲು ಒಂದು ರಾಷ್ಟ್ರೀಯ ಸಮಾವೇಶವನ್ನು ನಡೆಸಲು ನಿರ್ಧರಿಸಿವೆ ಎಂದ ಸುರ್ಜಿತ್ ಈ ಬಗ್ಗೆ ಸಂಯುಕ್ತ ರಂಗದ ವಿಭಿನ್ನ ಘಟಕಗಳೊಡನೆ ಮಾತುಕತೆ ಆರಂಭವಾಗಿದೆ ಎಂದರು. ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ ಆರ್.ಜೆ.ಡಿ. ಯನ್ನು ಈ ಸಮಾವೇಶಕ್ಕೆ ಆಹ್ವಾನಿಸಲಾಗುವುದೇ ಎಂಬ ಪ್ರಶ್ನೆಗೆ ಹೌದೆಂಬ ಸೂಚನೆ ನೀಡಿದರು. ಈ ಸಮಾವೇಶ ಫೆ.20 ರಂದು ನಡೆಯಲಿದೆ.

ಬಿಜೆಪಿ ನೇತೃತ್ವದ ಸರಕಾರದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಟಿಪ್ಪಣಿ ಮಾಡುತ್ತಾ ಸುರ್ಜಿತ್ ಆಳುವ ಪಕ್ಷಗಳಿಗೆ ಹಿಂದುತ್ವದ ವ್ಯಾಖ್ಯೆಯ ಬಗ್ಗೆ ಇರುವ ಎರಡು ಕಣ್ಣೋಟಗಳ ನಡುವೆ ನಡೆಯುತ್ತಿರುವ ತಿಕ್ಕಾಟವನ್ನು ಪ್ರಸ್ತಾಪಿಸಿದರು. ಇದರ ಒಂದು ಪರಿಣಾಮವಾಗಿ ಮದನ್ ಲಾಲ್ ಖುರಾನಾ ಆಗಲೇ ರಾಜೀನಾಮೆ ನೀಡಿದ್ದಾರೆ. ಹಿಂದುತ್ವ ಸಿದ್ಧಾಂತವನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕೇ ಅಥವಾ ಕೇಂದ್ರದಲ್ಲಿ ಅಧಿಕಾರಕ್ಕೆ ಜೋತು ಬಿದ್ದಿರಬೇಕೇ ಎಂಬುದೇ ಈ ಎರಡು ಕಣ್ಣೋಟಗಳು ಎಂದು ಸುರ್ಜಿತ್ ವಿವರಿಸಿದರು.

ಬಿಜೆಪಿ ಸರಕಾರ ನವೆಂಬರ್ ಚುನಾವಣೆಗಳ ಫಲಿತಾಂಶದಿಂದ ಯಾವುದೇ ಪಾಠ ಕಲಿತಂತಿಲ್ಲ ಎಂದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಈ ಸರಕಾರ ಅಭೂತಪೂರ್ವ ಬೆಲೆಯೇರಿಕೆಗಳನ್ನು ಮಾಡಿ ಜನಸಾಮಾನ್ಯರ ಮೇಲೆ ಇನ್ನಷ್ಟು ಹೊರೆ ಹೇರಲು ಕಟಿಬದ್ಧವಾಗಿರುವಂತೆ ಕಾಣುತ್ತದೆ ಎಂದರು. ಬಿಜೆಪಿ ನೇತೃತ್ವದ ಮೈತ್ರಿಕೂಟಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿದ್ದಂತಿಲ್ಲ, ಸಂಸತ್ತನ್ನು ಬದಿಗೊತ್ತಿ ಸುಗ್ರೀವಾಜ್ಞೆಗಳ

ಪುಟ 8 ನೋಡಿ

ಕೋಮುವಾದದ ವಿರುದ್ಧ ರಾಷ್ಟ್ರೀಯ ಸಮಾವೇಶ

ಎಡಪಕ್ಷಗಳ ಮುತುವರ್ಜಿಯಿಂದ ದೇಶದ ರಾಜಧಾನಿಯಲ್ಲಿ ಫೆಬ್ರವರಿ 20 ರಂದು ಕೋಮುವಾದದ ವಿರುದ್ಧ ಒಂದು ರಾಷ್ಟ್ರೀಯ ಸಮಾವೇಶ ನಡೆಯಲಿದೆ. ಒಂದೆಡೆ ಶಿವಸೇನೆಯ ರಂಪಾಟಗಳ ಮುಂದೆ ಶರಣಾಗಿ ಅವರನ್ನು ಸಂತೃಪ್ತಗೊಳಿಸುವ ನಿಲುಮೆ ತಳೆದಿರುವ, ಇನ್ನೊಂದೆಡೆ ಗುಜರಾತ್, ಮಹಾರಾಷ್ಟ್ರ, ಒರಿಸ್ಸಾಗಳಲ್ಲಿ ಕ್ರೈಸ್ತರ ವಿರುದ್ಧ ಹಿಂಸಾಚಾರ, ಸಜೀವ ದಹನಗಳಲ್ಲಿ ತೊಡಗಿರುವ ವಿ.ಹೆಚ್.ಪಿ., ಭಜರಂಗದಳ ಇತ್ಯಾದಿಗಳನ್ನು ಖಂಡಿಸಲು ನಿರಾಕರಿಸುತ್ತಿರುವ ಬಿಜೆಪಿ ಕೇಂದ್ರ ಸರ್ಕಾರದಲ್ಲಿ ಮುಂದುವರೆಯುವುದು ರಾಷ್ಟ್ರೀಯ ಐಕ್ಯತೆಗೆ, ಅಲ್ಪಸಂಖ್ಯಾತರ ಒಳಿತಿಗೆ ಹಾಗೂ ನಮ್ಮ ಸಮಾಜದ ಜಾತ್ಯಾತೀತ ಆಧಾರಕ್ಕೊಂದು ಬೆದರಿಕೆ ಎಂದಿರುವ ಎಡಪಕ್ಷಗಳು ಇಂತಹ ಸನ್ನಿವೇಶದಲ್ಲಿ ಎಲ್ಲಾ ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳು ಒಂದುಗೂಡಿ ಹಿಂದುತ್ವ ಮತ್ತು ಕೋಮುವಾದಿ ಪ್ರತಿಗಾಮಿ ಶಕ್ತಿಗಳ ವಿರುದ್ಧ ಒಂದು ಐಕ್ಯ ಚಳುವಳಿ ನಡೆಸುವ ಅಗತ್ಯವಿದೆ ಎಂದಿವೆ.

ಈ ಉದ್ದೇಶದಿಂದ ಎಡಪಕ್ಷಗಳು ಇತರ ಎಲ್ಲಾ ಜಾತ್ಯಾತೀತ, ಪ್ರಜಾಸತ್ತಾತ್ಮಕ ಶಕ್ತಿಗಳೊಡನೆ ಸಮಾಲೋಚನೆ ನಡೆಸಿ ಈ ರಾಷ್ಟ್ರೀಯ ಸಮಾವೇಶ ನಡೆಸಲು ನಿರ್ಧರಿಸಿವೆ. ಈ ಸಮಾವೇಶದೊಂದಿಗೆ ಕೋಮುವಾದೀ ಅಪಾಯದ ವಿರುದ್ಧ ಜನಗಳನ್ನೆಲ್ಲಾ ಒಟ್ಟಾಗಿ ಅಣಿನೆರೆಸುವ ಕೆಲಸ ಆರಂಭವಾಗಬೇಕು ಎಂದು ಅವು ಅಭಿಪ್ರಾಯ ಪಟ್ಟಿವೆ.


ಕಳೆದ ಮೂರು ತಿಂಗಳಿಂದ ತಮ್ಮ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ನಡೆಸಿರುವ ಬಿಪಿಎಲ್ ಕಾರ್ಮಿಕರ ಹೋರಾಟ ಫೆಬ್ರವರಿ 4 ರಂದು ಇನ್ನೂ ತೀವ್ರಗೊಂಡಿತು. ಅಂದಿನ 'ಜೈಲ್ ಭರೋ' ಕಾರ್ಯಕ್ರಮದಲ್ಲಿ ಸರಕಾರ ಹಾಕಿರುವ ನಿಷೇದಾಜ್ಞೆಯನ್ನು ಉಲ್ಲಂಘಿಸಿ ಬಂಧನಕ್ಕೊಳಗಾಗುತ್ತಿರುವ ಕಾರ್ಮಿಕರು. ವರದಿ ಪುಟ 3 ನೋಡಿ



ಬಡವರ ಉದರಕ್ಕೇ ಬೆಂಕಿ ಇಟ್ಟ ಕೋಮುವಾದಿ ಸರ್ಕಾರ

ಬಡತನ, ಹಸಿವು ಕೋಮುವಾದಕ್ಕೆ ಇಂಬು ಕೊಡುತ್ತವೆ ಎಂಬುದು ಸಮಾಜ ಶಾಸ್ತ್ರಜ್ಞರ ಅಂಬೋಣ. ಕೇಂದ್ರದ ಬಿಜೆಪಿಯ ಸರ್ಕಾರ ಕೋಮು ದಳ್ಳುರಿ ಹೆಚ್ಚಿಸಲೆಂದೇ ಆಹಾರ ಧಾನ್ಯಗಳ ಬೆಲೆ ಏರಿಸುವ ಕೆಲಸ ಮಾಡಿದೆಯೇ?

ಬಂಡವಾಳಿಗರ ಸಾಮ್ರಾಜ್ಯಶಾಹಿಗಳ ಲಾಭಕ್ಕಾಗಿ ಕೆಲಸ ಮಾಡುತ್ತಿರುವಂತಿರುವ ಬಿಜೆಪಿ ಸರ್ಕಾರ ರೇಷನ್ ಸಕ್ಕರೆ ಮತ್ತು ರೇಷನ್ ಆಹಾರ ಧಾನ್ಯಗಳ ಬೆಲೆಗಳನ್ನು ವಿಪರೀತವಾಗಿ ಏರಿಸಿದೆ. ಹಣಕಾಸು ಕೊರತೆಯನ್ನು ಕಡಿಮೆ ಮಾಡಲು ಈ ಕ್ರಮ ಎಂದು ಹೇಳಿರುವ ಬಿಜೆಪಿ ಸರ್ಕಾರ ಬಡವರ ಉದರದ ಬೆಂಕಿಯನ್ನು ಹೆಚ್ಚಿಸುವ ಈ ಒಂದೇ ಕ್ರಮವನ್ನು ಹಣಕಾಸು ಕೊರತೆ ಕಡಿಮೆ ಮಾಡಲು ಆಯ್ಕೆ ಮಾಡಿಕೊಂಡಿದೆ. ಈ ಕ್ರಮಗಳನ್ನು ನೋಡಿ-ರೇಷನ್ ದರಗಳನ್ನು ಶೇ. 30 ರಿಂದ ಶೇ. 50 ರಷ್ಟು ಏರಿಸಲಾಗಿದೆ. ಯೂರಿಯಾ ಬೆಲೆಯನ್ನು ಟನ್ನೊಂದಕ್ಕೆ ರೂ 3600 ರಿಂದ ರೂ 4000 ಕ್ಕೆ ಅಂದರೆ ಶೇ. 11 ರಷ್ಟು ಏರಿಕೆ. ಸಕ್ಕರೆ ಬೆಲೆಯನ್ನು ಕಿಲೋ ಒಂದಕ್ಕೆ ರೂ 11.40 ರಿಂದ ರೂ 12.00ಕ್ಕೆ ಏರಿಸಿರುವುದು ಇದರಿಂದ ಈ ಬಾಬ್ತಿನ ಸಹಾಯ ಧನವನ್ನು 3000 ಕೋಟಿ ರೂಪಾಯಿಗಳಷ್ಟು ಉಳಿಸಿದ್ದು (1999-2000 ಸಾಲಿಗೆ) ಕಾಳಸಂತೆಕೋರರಿಗೆ ಸಮಾಧಾನ ದಂತಹ ಯೋಜನೆಗಳ ಮೂಲಕ ತೆರಿಗೆ ರಿಯಾಯಿತಿ ನೀಡಿದ, ಶ್ರೀಮಂತರ ಭೋಗ ವಸ್ತುಗಳ ಆಮದಿನ ಮೇಲೆ ಸುಂಕಗಳನ್ನು ತೆಗೆದು ಹಾಕಿದ ಸರ್ಕಾರ ಬಡವರ ಹೊಟ್ಟೆಯ ಮೇಲೆ ಹೊಡೆಯುವ ಕ್ರಮವೊಂದೇ ಉಳಿದಿರುವ ದಾರಿ ಎಂಬಂತೆ ವರ್ತಿಸಿರುವುದು ಈ ಸರ್ಕಾರದ ನಿಜ ಸ್ವರೂಪವನ್ನು ಎಲ್ಲರಿಗೂ ಮನದಟ್ಟು ಮಾಡಿಕೊಟ್ಟಿದೆ. ಬಿಜೆಪಿ ಸರ್ಕಾರ ಜನಪರ ಕೆಲಸಗಳನ್ನು ಮಾಡುತ್ತದೆಂಬ ಭ್ರಮೆ ಯಾರಿಗಾದರೂ ಉಳಿದಿದ್ದರೆ (ಹಾಗೆ ಉಳಿದಿರಲು ಸಾಧ್ಯವಿಲ್ಲ) ಈ ಒಂದೇ ಕ್ರಮ ಅಂತಹ ಭ್ರಮೆಯನ್ನು ತೊಡೆದು ಹಾಕಿರುತ್ತದೆ. ಅಲ್ಲವೆ?



ದೇಶ ಮಾರಿದವರ ಪೋಸು

ಸಂಘ ಪರಿವಾರದ ಸ್ವದೇಶೀ ಜಾಗರಣ ಮಂಚವೆಂಬ ಸಂಘಟನೆಯೊಂದಿದೆ. ಅದು ಬಿಜೆಪಿಯಲ್ಲಿ ಸ್ವದೇಶೀ ಸಿದ್ಧಾಂತವನ್ನು ಪ್ರತಿಪಾದಿಸುವ ಸಂಘಟನೆ. ಈ ಸಂಘಟನೆಯು ಜನಪರವಾದ ಸ್ವದೇಶೀ ಸಿದ್ಧಾಂತವನ್ನೇನೂ ಪ್ರತಿಪಾದಿಸುವುದಿಲ್ಲ. ಆ ಮಾತು ಬೇರೆ. ಆದರೆ ಈ ಸಂಘಟನೆ ಬಿಜೆಪಿ ವಿಮೆ ವಿಷಯದಲ್ಲಿ ದೇಶವನ್ನೇ ಮಾರ ಹೊರಟಿದೆ ಎಂದು ಹೇಳಿಕೆ ನೀಡಿತು. ಇದೇ ರೀತಿ ಪೇಟೆಂಟ್ಸ್ ವಿಷಯ ದಲ್ಲೂ ಸಹ. ಈ ಸಂಘಟನೆಯ ಒಂದು ಅಂಗವಾದ (ಸಿಬಿಎಂಡಿ) ಅಂದರೆ ಭಾರತೀಯ ಮಾರುಕಟ್ಟೆ ಅಭಿವೃದ್ಧಿ ಕೇಂದ್ರ ಒಂದು ಸ್ವದೇಶೀ ಮೇಳವನ್ನು ನವದೆಹಲಿಯಲ್ಲಿ ಏರ್ಪಡಿಸಿತ್ತು.

ಈ ಮೇಳವನ್ನು ಪ್ರಧಾನ ಮಂತ್ರಿ ಅಟಲ ಬಿಹಾರಿ ವಾಜಪೇಯಿಯವರೇ ಉದ್ಘಾಟಿಸಿದರು ಮೇಳದ ಉದ್ಘಾಟನೆ ಮಾಡುತ್ತ ಅವರು ಭಾರತವನ್ನು ಯಾರೂ ಕೊಳ್ಳಲಾರರು ಹಾಗೆಯೆ ಭಾರತವನ್ನು ಯಾರೂ ಮಾರಾಟ ಮಾಡಲಾರರು ಎಂಬ ವೀರಾವೇಶದ ಮಾತುಗಳನ್ನಾಡಿದರು ಭಾರತ ಈ ವಿಷಯಗಳಲ್ಲಿ ಯಾವುದೇ ಒತ್ತಡಕ್ಕೆ ಮಣಿಯದು ಎಂದೂ ಅವರು ಹೇಳಿದರು. ಅಮೇರಿಕವಾಗಲಿ ವಿಶ್ವ ವ್ಯಾಪಾರ ಸಂಸ್ಥೆಯಾಗಲಿ ಭಾರತದ ಮೇಲೆ ವಿಮೆಯಾ ಪೇಟೆಂಟ್ಸ್ ವಿಷಯದಲ್ಲಿ ಒತ್ತಡ ಹೇರಿಲ್ಲ ಎಂದು ಹೇಳಿದ ವಾಜಪೇಯಿ ದೇಶದ ಹಿತದೃಷ್ಟಿಯಿಂದಲೇ ತಮ್ಮ ಸರಕಾರ ಈ ಕ್ರಮಗಳನ್ನು ಕೈಗೊಂಡಿದೆ ಎಂದು ಪೋಸು ನೀಡಿದರು.

ಅಲ್ಲದೆ ಪೋಖ್ರಾನ್ ಸ್ಫೋಟಗಳತ್ತ ಗಮನ ಸೆಳೆದು ಭಾರತ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ ಎಂದರಂತೆ. ಈ ದೇಶದ ಜನ ಸಾಮಾನ್ಯರು ಹೇಗೆ ಈ ಪೋಖ್ರಾನ್ ಸ್ಫೋಟದ ನೋವು ಅನುಭವಿಸುತ್ತಿದ್ದಾರೆ, ದೇಶಕ್ಕೆ ಎಂತಹ ಹಾನಿಯಾಯಿತು ಎಂದು ಯಾರಾದರೂ ಇವರಿಗೆ ತಿಳುವಳಿಕೆ ಹೇಳಬೇಕಾಗುತ್ತದೆಯೇ? ಅಥವಾ ಅದನ್ನು ಒಪ್ಪದೇ ಪೋಖ್ರಾನ್‌ನಿಂದ ದೇಶಕ್ಕೆ ಅನುಕೂಲವಾಗಿದೆ ಎಂಬ ವಾದವನ್ನು ಅವರು ಹೂಡಿಯಾರು ಅಲ್ಲವೆ?

ರೇಷ್ಮೆಯ ನುಣುಪು ತೆಗೆದ ಬಿಜೆಪಿ ಸರ್ಕಾರ

ದೇಶದಲ್ಲಿ ಬೆಳೆವ ಮೂರನೇ ಎರಡು ಭಾಗದಷ್ಟು ರೇಷ್ಮೆಯನ್ನು ಕರ್ನಾಟಕ ರಾಜ್ಯವೊಂದೇ ಬೆಳೆಯುತ್ತದೆ. ರೇಷ್ಮೇ ಆಮದನ್ನು ಮುಕ್ತಗೊಳಿಸಿದರೆ ದೇಶೀ ಉದ್ದಿಮೆ ತೀವ್ರ ಸಂಕಟಕ್ಕೆ ಗುರಿಯಾಗುತ್ತದೆ. 1998 ರ ಅಕ್ಟೋಬರ್ 30 ರ ವರೆಗೆ 1.32 ಕೆಜಿ ಕಚ್ಚಾ ರೇಷ್ಮೆಯನ್ನು ಆಮದು ಮಾಡಿದರೆ 1.ಕೆ.ಜಿ. ರೇಷ್ಮೆಯನ್ನು ರಫ್ತು ಮಾಡ ಬೇಕಾಗುತ್ತಿತ್ತು. 1998 ರ ಅಕ್ಟೋಬರ್‌ನಿಂದ ಕೇಂದ್ರ ಸರ್ಕಾರದ ಆಜ್ಞೆಯ ಪ್ರಕಾರ ರೇಷ್ಮೆ ಆಮದು ಮಾಡಿದ ಮೇಲೆ ರಫ್ತು ಮಾಡಲೇ ಬೇಕೆಂಬ ನಿರ್ಬಂಧವಿಲ್ಲ.

ಇದರಿಂದಾಗಿ ದೊಡ್ಡ ಪ್ರಮಾಣದಲ್ಲಿ ರೇಷ್ಮೆಯ ಆಮದಾಗುವ ಸಾಧ್ಯತೆ ಹೆಚ್ಚಾಗಿದೆ. ಹಾಗೆ ಆಮದು ಹೆಚ್ಚಾದರೆ ಅದು ಚೀನಾ ದೇಶದಿಂದಲೇ ಆಗಬೇಕಾಗುತ್ತದೆ. ಭಾರತಕ್ಕೆ ಹೋಲಿಸಿದರೆ ಚೀನಾದಲ್ಲಿ ರೇಷ್ಮೆ ಉತ್ಪಾದನಾ ವೆಚ್ಚ ಕಡಿಮೆ ಹಾಗೂ ಅಲ್ಲಿನ ರೇಷ್ಮೆಯ ಗುಣಮಟ್ಟ ಹೆಚ್ಚಿನದಂತೆ. ಚೀನಾದಲ್ಲಿ ಉತ್ಪಾದನಾ ವೆಚ್ಚ ಕಿಲೋ ಒಂದಕ್ಕೆ ಭಾರತೀಯ 600 ರಿಂದ 700 ರೂಪಾಯಿಗಳಾದರೆ ಭಾರತದಲ್ಲಿ ಸರಾಸರಿ ವೆಚ್ಚ 800 ರಿಂದ 900 ರೂಗಳಷ್ಟಾಗುತ್ತದಂತೆ. ಇದರಿಂದಾಗಿ ಆಮದಾಗುವ ರೇಷ್ಮೆಯ ಬೆಲೆ ಕಡಿಮೆ ಇರುತ್ತದೆ. ಇದು ದೇಶೀ ಮಾರುಕಟ್ಟೆಯ ಮೇಲೆ ವಿಪರೀತ ಪರಿಣಾಮ ಬೀರುತ್ತದೆ. ರೇಷ್ಮೆ ಬೆಳೆಗಾರರು ಆ ಮೂಲಕ ಬೆಲೆ ಕುಸಿತವನ್ನು ಎದುರಿಸಬೇಕಾಗುತ್ತದೆ.

ಕೇಂದ್ರದ ಸರ್ಕಾರ ಕಚ್ಚಾ ಮಾಲಿನ ಕೊರತೆ ಅನುಭವಿಸುತ್ತಿರುವ ವಾರಣಾಸಿ ಮತ್ತು ಸೂರತ್‌ಗಳ ನೆಯ್ಗೆ ಕಾರ್ಖಾನೆಗಳ ಮಾಲಿಕರ ಒತ್ತಡಕ್ಕೆ ಮಣಿದಿದೆ ಎನ್ನಲಾಗುತ್ತಿದೆ. ಆಮದು ಸ್ವಲ್ಪ ಮಟ್ಟಿಗೆ ಅವಶ್ಯವಾದರೂ ಅನಿರ್ಬಂಧಿತ ಆಮದು ದೇಶೀ ಉದ್ದಿಮೆಯನ್ನು ಹಾಳುಗೆಡವುತ್ತದೆ.

ಭಾರತ ತನಗೆ ಸಾಕಾಗುವಷ್ಟು ರೇಷ್ಮೆಯನ್ನು ಬೆಳೆಯುವುದಿಲ್ಲವಾದ್ದರಿಂದ ಆಮದು ಮಾಡಿಕೊಳ್ಳುವುದು ಅನಿವಾರ್ಯ. ಇಲ್ಲವಾದರೆ ರೇಷ್ಮೇ ಮಗ್ಗಗಳು ಖಾಲಿ ಇರಬೇಕಾಗುತ್ತದೆ. ಭಾರತದ ರೇಷ್ಮೆ ಉತ್ಪಾದನೆಯ ಶೇ. 90 ರಷ್ಟು ಇಲ್ಲೇ ಬಳಕೆಯಾದರೆ ಬರೀ ಶೇ. 10 ರಷ್ಟು ರಫ್ತಾಗುತ್ತದೆ. ಅದೇ ಚೀನಾದಲ್ಲಿ ಉತ್ಪಾದನೆಯ ಶೇ. 90 ರಷ್ಟು ರಫ್ತಾಗಿ ಶೇ. 10 ರಷ್ಟು ಅಲ್ಲೇ ಬಳಕೆಯಾಗುತ್ತದಂತೆ.

ನಮ್ಮ ಮಗ್ಗಗಳಿಗೆ ಸಾಕಾಗುವಷ್ಟು ರೇಷ್ಮೆಯನ್ನು ಮಾತ್ರ ಆಮದು ಮಾಡಿಕೊಂಡರೆ ಸಮಸ್ಯೆ ಉದ್ಭವವಾಗುವುದಿಲ್ಲ ಆದರೆ ಕೇಂದ್ರ ಸರ್ಕಾರ ಇದರ ಬದಲು ಆಮದಿನ ಮೇಲಿನ ನಿರ್ಬಂಧವನ್ನೇ ತೆಗೆದು ಹಾಕಿ ರೇಷ್ಮೆ ಉತ್ಪಾದನೆಗೇ ಹೊಡೆತ ಬೀಳುವಂತಹ ಕ್ರಮ ಕೈಗೊಂಡಿದೆ.

ಭಾರತದ ರೇಷ್ಮೆ ಉತ್ಪಾದನೆ ಮತ್ತು ಆಮದು

ವರ್ಷ	ಉತ್ಪಾದನೆ	ಆಮದು
1990-91	11486	1379
1991-92	10658	2058
1992-93	13000	2673
1993-94	12550	3806
1994-95	13450	5143
1995-96	12884	4149
1996-97	12954	2911
1997-98	14050	2760
1998-99 ಜುಲೈವರೆಗೆ	-	577

ಕಾರುಗಳ ಮೇಲಿನ ಸುಂಕ ಕಡಿತ

ಇದು ಮುಂಬರುವ ಬಜೆಟ್‌ನಲ್ಲಿ ಆಗಬಹುದಾದ ಸಾಧ್ಯತೆ. ಕಾರುಗಳ ಮೇಲಿನ ಅಬ್ಕಾರಿ ಸುಂಕವನ್ನು ಶೇ. 10 ರಷ್ಟು ಕಡಿತ ಮಾಡುವ ಪ್ರಸ್ತಾಪ ಕೇಂದ್ರ ಹಣಕಾಸು ಮಂತ್ರಾಲಯದ ಮುಂದೆ ಇದೆಯಂತೆ. ಅಂತೆಯೇ ತಂಪು ಪಾನಿಯಗಳ ಮೇಲಿನ ಸುಂಕದಲ್ಲಿ ಕಡಿತವಾಗುವ ಲಕ್ಷಣಗಳಿವೆಯಂತೆ. ಸುಂಕ ಹೇರಿಕೆ ಪದ್ಧತಿಯನ್ನೇ ಸರಳೀಕರಿಸುವ ನೆಪದಲ್ಲಿ ಸುಂಕವನ್ನು ತೀವ್ರವಾಗಿ ಕಡಿಮೆ ಮಾಡುವ ವಿಚಾರವನ್ನು ಸರ್ಕಾರ ಮಾಡುತ್ತಿದೆ.

ಯಾರು ಉಪಯೋಗಿಸುತ್ತಾರೆ ಈ ವಸ್ತುಗಳನ್ನು? ಕಾರು ಕೊಳ್ಳುವವರು ತಂಪು ಪಾನೀಯಗಳನ್ನು ಕೋಕಾಕೋಲಾ ಪೆಪ್ಸಿಗಳನ್ನು ದುಡ್ಡಿದ್ದವರೇ ಕೊಳ್ಳಬೇಕಲ್ಲವೆ? ಹೌದು ಖಂಡಿತವಾಗಿಯೂ ದುಡ್ಡಿರುವವರೇ ಇವುಗಳನ್ನು ಕೊಳ್ಳಬೇಕು. ಶ್ರೀಮಂತರಿಗೆ ಈ ರಿಯಾಯಿತಿ ಏಕೆ? ಇದೇ ಆದಾಯ ಇದ್ದರೆ ಹಣಕಾಸು ಕೊರತೆಯನ್ನು ಕಡಿಮೆ ಮಾಡಲು ಆಗುವುದಿಲ್ಲವೆ? ಆಗುತ್ತದೆ. ಆದರೆ ಸರ್ಕಾರಕ್ಕೆ ಅದು ಬೇಡ. ಕಾರು ತಂಪು ಪಾನೀಯಗಳಂತಹ ಬೇಡದ ವಸ್ತುಗಳು ಅಗ್ಗವಾಗಬೇಕು. ಅಕ್ಕಿ, ಗೋಧಿ ಸಕ್ಕರೆ ಇವುಗಳೆಲ್ಲ ತುಟ್ಟಿಯಾಗಬೇಕು. ಅಂದರೆ ಬಡವರ ಕನಿಷ್ಟ ಅವಶ್ಯಕತೆಗಳೂ ತುಟ್ಟಿಯಾಗಬೇಕು. ಅದೇ ಸಮಯದಲ್ಲಿ ಶ್ರೀಮಂತರ ಭೋಗದ ವಸ್ತುಗಳು ಅಗ್ಗವಾಗಬೇಕು - ಇದೇ ಕೇಂದ್ರ ಸರ್ಕಾರದ ನೀತಿ-ಉದಾರೀಕರಣ ನೀತಿ

ಇಂಡಿಕಾ ಕಾರುಗಳಿಗೆ ಭಾರೀ ಬೇಡಿಕೆ

ಟಾಟಾಗಳ ಟೆಲ್ಕೊ ಎಂಬ ಕಂಪನಿ ಇಂಡಿಕಾ ಎಂಬ ಹೊಸ ಕಾರನ್ನು ಕೆಲ ದಿನಗಳ ಹಿಂದೆ ಬಿಡುಗಡೆ ಮಾಡಿತು. ಈ ಕಾರಿಗೆ 1 ಲಕ್ಷಕ್ಕೂ ಹೆಚ್ಚು ಜನ ಬುಕ್ಕಿಂಗ್ ಮಾಡಿದ್ದಾರಂತೆ ಅಂದರೆ ಒಂದು ಲಕ್ಷಕ್ಕೂ ಹೆಚ್ಚು ಜನ ಈ ಕಾರು ಕೊಳ್ಳಲು ಮುಂದೆ ಬಂದಿದ್ದಾರೆ ಮಾರುತಿ ಹ್ಯೂಂಡಾಯ್‌ನ ಸಾಂತ್ರೊ ದೇವೂ ಕಂಪನಿಯ ಮಾಟಿಝ್‌ಗಳೆಲ್ಲ ಮಾರುಕಟ್ಟೆಗೆ ಬಂದು ಬೇಡಿಕೆ ಕಂಡಿವೆ. ಇದರ ಜೊತೆಗೆ ಒಂದು ಲಕ್ಷಕ್ಕೂ ಹೆಚ್ಚು ಜನ ಇಂಡಿಕಾ ಕಾರು ಕೊಳ್ಳಲು ಮುಂದೆ ಬಂದಿರುವುದೆಂದರೆ ಹಣವಿರುವ ಶ್ರೀಮಂತರ ಸಂಖ್ಯೆ ಅಪಾರವಿದೆ ನಮ್ಮ ದೇಶದಲ್ಲಿ ಎಂದಾಯಿತು. ಕರ ತಪ್ಪಿಸಿ ಕಪ್ಪು ಹಣ ಹೊಂದಿರುವವರೇ ಇದರಲ್ಲಿ ಬಹಳ ಜನ ಇರಲು ಸಾಧ್ಯ ಹೀಗಿರುವಾಗ ಈ ಕಪ್ಪು ಹಣವನ್ನು ಸರ್ಕಾರ ಹೊರಗೆಳೆಯಬಹುದಾಗಿತ್ತು. ಜೊತೆಗೆ ಈ ಶ್ರೀಮಂತರ ಮೇಲೆ ತೆರಿಗೆ ಹೇರಬಹುದಾಗಿತ್ತು. ಬದಲಿಗೆ ಬಡವರು ಉಣ್ಣುವ ಅನ್ನದ ಮೇಲೆ ಹೊರೆ ಹೇರುತ್ತದೆ ಸರ್ಕಾರ ಹೇಗಿದೆ ಈ ನೀತಿ?

ಮೈಕೊ ಕ್ಯಾಂಟೀನ್ ಚುನಾವಣೆಯಲ್ಲಿ ಕಾಂ. ಸೂರಿ ನೇತೃತ್ವದ ತಂಡಕ್ಕೆ ಭಾರಿ ಜಯ

ಇದೇ ಫೆಬ್ರವರಿ 2 ರಂದು ನಡೆದ ಮೈಕೊ ಕಾರ್ಖಾನೆಯ ಕ್ಯಾಂಟೀನ್ ಚುನಾವಣೆಯಲ್ಲಿ ಕಾಮ್ರೇಡ್ ಸೂರ್ಯನಾರಾಯಣ ರಾವ್ ನೇತೃತ್ವದ ತಂಡ 5 ಸ್ಥಾನಗಳಲ್ಲಿ 4 ರಲ್ಲಿ ಜಯಿಸಿ ಜಯಭೇರಿ ಬಾರಿಸಿದೆ. ಒಂದು ಸ್ಥಾನದಲ್ಲಿ (ಕಾಂಪ್ಲೆಕ್ಸ್) 5 ಮತಗಳ ಅಲ್ಪ ಅಂತರದಲ್ಲಿ ಪರಾಭವಗೊಂಡಿದೆ.

ಕಳೆದ ಏಪ್ರಿಲ್‌ನಲ್ಲಿ ನಡೆದ ಕಾರ್ಮಿಕ ಸಂಘದ ಚುನಾವಣೆಯಲ್ಲಿ ಜಿಂಕೆ ತಂಡ ಎಂದು ಹೇಳಿಕೊಳ್ಳುವ ಗುಂಪು ಬೇಡಿಕೆ ವಿಚಾರದಲ್ಲಿ ಕಾರ್ಯಗತವಾಗದ ಆಶ್ವಾಸನೆ ನೀಡಿ ಯುವ ಕಾರ್ಮಿಕರ ಮಧ್ಯೆಯಲ್ಲಿ ಆಸೆ ಹುಟ್ಟಿಸಿ ಸಂಘದ ಅಧಿಕಾರ ಹಿಡಿಯಿತು.

ಯಾವ ಯುವ ಕಾರ್ಮಿಕರು ಇವರ ಪೊಳ್ಳು ಆಶ್ವಾಸನೆಗೆ ಮರುಳಾಗಿದ್ದರೊ ಇವರ 9 ತಿಂಗಳ ಅವಧಿಯ ಕಾರ್ಯ ವೈಖರಿ, ಕೊಟ್ಟ ಭರವಸೆ ಈಡೇರಿಸದಿರುವುದು, ಇವರ ನಡವಳಿಕೆಯಿಂದ ಬೇಸತ್ತು ಕಾರ್ಖಾನೆಯ ಆಡಳಿತಮಂಡಳಿ ಎಲ್ಲಾ ಕಾರ್ಮಿಕರಿಗೂ ಮಿಕ್ಸಿ ಬಹುಮಾನ ಕೊಡುವ ಭರವಸೆಯನ್ನು ಚುನಾವಣೆಗೆ 3 ದಿನಗಳ ಮುನ್ನ ಘೋಷಿಸಿದರೂ ಆನೆ ತಂಡಕ್ಕೆ ಮತ ನೀಡಿ ಜಯಗೊಳಿಸಿದ್ದಾರೆ.

ಫೆಬ್ರವರಿ 8 ರಂದು ಅಭಿನಂದನಾ ಸಭೆ ಕರೆಯಲಾಗಿದ್ದು, ಆ ಸಭೆಯಲ್ಲಿ ಸಂಘದ ನಾಯಕತ್ವ ಬದಲಾವಣೆಯಾಗಬೇಕೆಂಬ ಒತ್ತಡ ಬರಬಹುದು.

ಹುತಾತ್ಮ ದಿನ ಜನವರಿ 30 ರಂದು ಬೆಂಗಳೂರಿನಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿಯ ಕರೆಯ ಮೇರೆಗೆ ಮಹಾತ್ಮಗಾಂಧಿ ಪ್ರತಿಮೆಯಿಂದ ಸೈಂಟ್ ಮೇರಿ ಬ್ಯಾಸಿಲಿಕಾದವರೆಗೆ ಕೋಮು ಸೌಹಾರ್ದಕ್ಕಾಗಿ ನೂರಾರು ಜನರು ಕೈಕೈ ಹಿಡಿದು ನಡೆಸಿದ ಮಾನವ ಸರಪಳಿಯ ಒಂದು ದೃಶ್ಯ



ಕಾರ್ಖಾನೆ ಖಾಸಗೀಕರಣದ ನಂತರ ತತ್ತರಿಸಿ ಹೋದ ವಿಕ್ರಾಂತ್ ಕಾರ್ಮಿಕರು

1979 ರಲ್ಲಿ ಪ್ರಾರಂಭವಾದ ಮೈಸೂರು ವಿಕ್ರಾಂತ್ ಟೈರ್ಸ್ ಕಾರ್ಖಾನೆ 1997 ರ ವರೆಗೆ ಸರ್ಕಾರಿ ಒಡೆತನದಲ್ಲಿ ನಡೆದುಕೊಂಡು ಬಂದಿತ್ತು. ಒಂದೆರಡು ವರ್ಷಗಳು ನಷ್ಟವುಂಟಾಯಿತು ಎಂಬ ನೆಪವೊಡ್ಡಿ ಜನತಾ ದಳ ಸರ್ಕಾರ 800 ಕೋಟಿ ರೂ ಬೆಲೆ ಬಾಳುವ ಕಾರ್ಖಾನೆಯನ್ನು ಕೇವಲ 34 ಕೋಟಿ ರೂಗಳ ಕೆ.ಎಸ್.ಐ.ಡಿ.ಸಿ.ಯ ಶೇರುಗಳನ್ನು ಜೆ.ಕೆ. ಇಂಡಸ್ಟ್ರೀಸ್ ಕಂಪನಿಗೆ ಮಾರಾಟ ಮಾಡುವುದರ ಮೂಲಕ ಸ್ಟ್ರಾಟೇಜಿಕ್ ಅಲಿಯೆನ್ಸ್ ಪಾರ್ಟನರ್ (ಸಿ.ಎ.ಪಿ.) ಎಂಬ ಹೆಸರಲ್ಲಿ ಮೂರು ವರ್ಷ ಅವಧಿಗೆ ಒಪ್ಪಂದದಡಿಯಲ್ಲಿ ಆಡಳಿತ ಹಸ್ತಾಂತರಿಸಿತು.

1996 ರಲ್ಲಿ ಕಾರ್ಮಿಕರು ಕಾರ್ಖಾನೆ ಖಾಸಗೀಕರಣದ ವಿರುದ್ಧ ಮೈಸೂರಿನಲ್ಲಿ ಜಾಥಾ ಮಾಡಿ ಜಿಲ್ಲಾಧಿಕಾರಿಯವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಕಾರ್ಮಿಕರು ಮತ್ತು ಕಾರ್ಮಿಕ ಮುಖಂಡರು ರಕ್ತ ಕೊಟ್ಟೇವು ಖಾಸಗೀಕರಣ ಒಲ್ಲೆವು ಎಂದರು.

ಆದರೆ ಅಂದು ಎಂ.ಡಿ.ಯಾಗಿದ್ದ ಮಿಶ್ರಾ ಮೊದಲ ಸರ್ವ ಸದಸ್ಯರ ಸಭೆಯಲ್ಲಿ ವಿಫಲಗೊಂಡು ಎರಡನೇ ಸಭೆಯನ್ನು 500 ಕ್ಕೂ ಹೆಚ್ಚು ಪೋಲಿಸರ ಬೆಂಗಾವಲಿನಲ್ಲಿ ನಡೆಸಿ ಕಂಪನಿ ಖಾಸಗೀ ಕರಿಸುವುದರಲ್ಲಿ ಯಶಸ್ವಿಯಾದರು. ಕಂಪನಿ ಖಾಸಗೀಕರಿಸುವ ತಮ್ಮ ನೇಮಕ ಸಫಲಗೊಂಡಿತೆಂದು ಬೀಳ್ಕೊಡುಗೆ ಸಮಾರಂಭದಲ್ಲಿ ಹೇಳಿ ನಗೆ ಬೀರಿ ಹೋದರು.

1997 ರ ಮೇ ನಲ್ಲಿ ಜೆ.ಕೆ. ಇಂಡಸ್ಟ್ರೀಸ್ ಕಂಪನಿ ವಹಿಸಿಕೊಂಡಿತು. ನಂತರ ಮೂರು ತಿಂಗಳು ತುಂಬುವುದರೊಳಗಾಗಿ ಕಾರ್ಮಿಕರ ಮೇಲೆ ದಬ್ಬಾಳಿಕೆ ಆರಂಭಗೊಂಡಿತು. 15 ದಿನಗಳ ಕಾಲ ಕಾರ್ಮಿಕರು ಬೀದಿ ಪಾಲಾಗಿ ವೇತನ ಕಳೆದುಕೊಳ್ಳಬೇಕಾಯಿತು.

1997-98 ನೆ ಸಾಲಿನಲ್ಲಿ 16 ಕೋಟಿ ರೂ ಲಾಭಗಳಿಸಿ ಕಳೆದ 9 ತಿಂಗಳ ಅವಧಿಗೆ 30 ಕೋಟಿ ರೂ ಲಾಭ ಗಳಿಸಿದೆ. ಕಾರ್ಖಾನೆಯನ್ನು ಆಧುನೀಕರಣ ಗೊಳಿಸುವ ಹೆಸರಲ್ಲಿ ಹೊಸ ಯಂತ್ರಗಳನ್ನು ಸ್ಥಾಪಿಸಿ, ಹೆಚ್ಚು ಉತ್ಪಾದನೆಗಳಿಸುತ್ತೇನೆಂದು ಹೇಳಿ ಕಾರ್ಮಿಕರ ಮೇಲೆ ಒತ್ತಡ ತಂದಿರುವ ಹೊಸ ಆಡಳಿತ ಕಾರ್ಮಿಕರನ್ನು ಗುಲಾಮರಂತೆ ದುಡಿಸಿ ಕೊಳ್ಳಲು ಯತ್ನಿಸುತ್ತಿದೆ. ಇದು ಕಾರ್ಮಿಕ ಸಂಘ ಒಡೆಯುವ ಸಂಚಾಗಿ ಕಾರ್ಮಿಕ ಸಂಘದೊಂದಿಗೆ ಚರ್ಚಿಸುವುದನ್ನು ಬಿಟ್ಟಿದೆ.

ಈಗಾಗಲೇ 16 ಕಾರ್ಮಿಕರನ್ನು ಅಮಾನತ್ತಿನಲ್ಲಿಡಲಾಗಿದೆ. ಜನವರಿಯಿಂದ ಕಾರ್ಖಾನೆಯಲ್ಲಿ ಗೊಂದಲವನ್ನು ಮಾಡುತ್ತಿರುವ ಬಗ್ಗೆ ಕಾರ್ಮಿಕ ಉಪ ಆಯುಕ್ತರಾದ ಗುರುದಾಸ್ ಭಟ್ ರವರು ವಿಚಾರಣೆ ನಡೆಸಿ ಆಡಳಿತ ವರ್ಗಕ್ಕೆ ವಿವರಣೆ ಕೇಳಿದರೆ ಆಡಳಿತ ವರ್ಗ ಅದನ್ನು ಧಿಕ್ಕರಿಸಿದೆ. ಕಾರ್ಮಿಕ ಆಯುಕ್ತ ಲ್ಯೂಕೊಸ್ ವಲ್ಲತ್ತರೈ ಜನವರಿ 25 ರಂದು ಕಾರ್ಮಿಕರಿಗೆ ಮಧ್ಯಂತರ ಪರಿಹಾರ ನೀಡುವಂತೆ ಸಲಹೆ ನೀಡಿದರೆ ಅವರ ಸಲಹೆಗೆ ಮನ್ನಣೆ ನೀಡದೆ ಧಿಕ್ಕರಿಸಿದೆ. ಸರ್ಕಾರದ ಕಾರ್ಮಿಕ ಇಲಾಖೆಯ ಯಾವ ನಿಯಮಗಳಿಗೂ ಮನ್ನಣೆ ನೀಡದ ಈ ಬಂಡವಾಳ ಶಾಹಿ ಮಾಲಿಕನಿಗೆ ಬಂಡವಾಳವೆ ಮಂತ್ರವಾಗಿದೆ.

ಕಾರ್ಖಾನೆಯನ್ನು ಖಾಸಗೀಯವರಿಗೆ ಮಾರಿದ ಉಸ್ತುವಾರಿ ಸಚಿವ ಸಿದ್ದರಾಮಯ್ಯನವರ ಹೆಗಲಿಗೆ ಈ ಸಮಸ್ಯೆ ಬಗೆಹರಿಸುವ ಹೊಣೆ ಇದೆ. ಮೈಸೂರಿನ ಶಾಸಕರು, ಸಂಸದರು ಈ ವಿಷಯದ ಬಗ್ಗೆ ಕಿವುಡರು ಮೂಗರೂ ಆಗಿದ್ದಾರೆ.

ಶುಭಾಶಯ

ಪಕ್ಷದ ಉಮೇದುವಾರು ಸದಸ್ಯ, ವೃತ್ತಿಯಲ್ಲಿ ಕೈಮಗ್ಗದ ನೇಕಾರ ನಾಗರಾಜ್ ಕದರಮಂಡಲಗಿ ಅವರು ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಗದಗ ಬೆಟಗೇರಿಯ ಲಕ್ಷ್ಮೀಯವರನ್ನು ಮದುವೆಯಾಗಿದ್ದಾರೆ.

ಈ ಮದುವೆಯ ಸವಿನೆನಪಿಗಾಗಿ ಐಕ್ಯರಂಗಕ್ಕೆ ರೂ. 101 ಕಾಣಿಕೆ ನೀಡಿದ್ದಾರೆ.

ಇವರಿಗೆ ಹಾರ್ದಿಕ ಶುಭಾಶಯಗಳು ಮತ್ತು ಕೃತಜ್ಞತೆಗಳು.

ಬಹುದಿನಗಳ ಬೇಡಿಕೆಗಳಿಗೆ ಒತ್ತಾಯಿಸಿ ಪಂಚಾಯತ್ ನೌಕರರ ಚಾರಿತ್ರಿಕ ಹೋರಾಟ

"ಪಂಚಾಯತ್ ನೌಕರರಿಗೆ ವೇತನ ಹೆಚ್ಚಳ ಆಗಲೇಬೇಕು" ಸೇವಾ ನಿಯಮಾವಳಿ ಜಾರಿಯಾಗಲೇಬೇಕು; ಮಾತಿಗೆ ತಪ್ಪಿದ ಪಂಚಾಯತ್ ರಾಜ್ ಸಚಿವ ಎಂ.ಪಿ.ಪ್ರಕಾಶ್‌ಗೆ ಧಿಕ್ಕಾರ'' ಈ ಘೋಷಣೆಗಳು ಗಗನಕ್ಕೆ ಮುಟ್ಟುತ್ತಿದ್ದಂತೆ ಸುಮಾರು 600 ನೌಕರರು ಪಾಲ್ಗೊಂಡ ಪಂಚಾಯತ್ ನೌಕರರ ಮುಖಂಡರ ಆಮರಣ ಸತ್ಯಾಗ್ರಹ ಬೆಂಗಳೂರಿನಲ್ಲಿ 1-2-99 ರಿಂದ ಆರಂಭವಾಯಿತು.

4-1-99 ರಂದು ಬೆಂಗಳೂರಿನಲ್ಲಿ ನಡೆದ ಪಂಚಾಯತ್ ನೌಕರರ ಸಮ್ಮೇಳನದಲ್ಲಿ ಸುಮಾರು 6000 ನೌಕರರು ಪಾಲ್ಗೊಂಡಿದ್ದ ಸುದ್ದಿಯನ್ನು ಐಕ್ಯರಂಗದ ಓದುಗರು ನೆನಪಿಸಿಕೊಳ್ಳ ಬಹುದು. ಈ ಸಮ್ಮೇಳನದಲ್ಲಿ ಪಂಚಾಯತ್ ನೌಕರರಿಗೆ ತಾತ್ಕಾಲಿಕ ವೇತನ ಹೆಚ್ಚಳ (ರೂ 1500; ರೂ 1200; ರೂ 900) ಸೇವಾ ನಿಯಮಾವಳಿ ಜಾರಿ, ಬಡ್ತಿ ಪ್ರಮಾಣದಲ್ಲಿ ಹೆಚ್ಚಳ ಇವುಗಳ ಕುರಿತು ಪ್ರಕಟಣೆ ನೀಡುವುದಾಗಿ ಪಂಚಾಯತ್ ರಾಜ್ ಸಚಿವ ಎಂ.ಪಿ.ಪ್ರಕಾಶ್ ಒಪ್ಪಿ ಕೊಂಡಿದ್ದರು.

ಆದರೆ ಈ ಸಮ್ಮೇಳನಕ್ಕೆ ಹಾಜರಾಗದೇ ಎಂ.ಪಿ. ಪ್ರಕಾಶ್ ರಾಜ್ಯದ 30,000 ಪಂಚಾಯತ್ ನೌಕರರಿಗೆ ವಿಶ್ವಾಸದ್ರೋಹ ಮಾಡಿದರು. ಸಚಿವರ ಕಾರ್ಮಿಕರ ದ್ರೋಹ ನೀತಿಯನ್ನು ಪ್ರತಿಭಟಿಸಿ ಫೆಬ್ರವರಿ 1,1999 ರಂದು ಆಮರಣ ಉಪವಾಸ ಸತ್ಯಾಗ್ರಹ ಹಾಗೂ ರಾಜ್ಯದ ಎಲ್ಲ ಜಿಲ್ಲಾ ಪಂಚಾಯತ್‌ಗಳೆದುರು ಆಯಾ ಜಿಲ್ಲೆಯ ನೌಕರರು ಧರಣಿ ಸತ್ಯಾಗ್ರಹ ಆರಂಭಿಸಬೇಕೆನ್ನುವ ಠರಾವನ್ನು ಬೆಂಗಳೂರಿನ ಸಮ್ಮೇಳನದಲ್ಲಿ ನೌಕರರು ಸರ್ವಾನುಮತದಿಂದ ಅಂಗೀಕರಿಸಿದರು.

ಬೆಂಗಳೂರಿನ ಕೆ.ಆರ್.ಸರ್ಕಲ್‌ನಲ್ಲಿ ನಿಗದಿಯಾದಂತೆ ಪಂಚಾಯತ್ ನೌಕರರ ಸಂಘದ ಅಧ್ಯಕ್ಷ ಮಾರುತಿ ಮಾನಪಡೆ, ಸಂಘದ ಖಜಾಂಚಿ ಸಿ.ಆರ್.ಭಟ್ ಮತ್ತು ಕೋಲಾರದ ಮುಖಂಡ ಗಾಂಧೀನಗರ ನಾರಾಯಣಸ್ವಾಮಿ ಈ ಮೂವರು ಮುಖಂಡರು ಆಮರಣ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಸಂಘದ ಗೌರವ ಅಧ್ಯಕ್ಷ ಎನ್.ಕೆ. ಉಪಾಧ್ಯಾಯರು ಆಮರಣ ಸತ್ಯಾಗ್ರಹ ಕಾರ್ಯಕ್ರಮವನ್ನು ಉದ್ಘಾಟಿಸಿದರು ಸಂಘದ. ಪ್ರಧಾನ ಕಾರ್ಯದರ್ಶಿ ವಿ.ಪಿ. ಕುಲಕರ್ಣಿ ಮಾತನಾಡಿ ಸತ್ಯಾಗ್ರಹ ಆರಂಭಿಸಬೇಕಾದ ಅನಿವಾರ್ಯತೆಗಳನ್ನು ವಿವರಿಸಿದರು.

ಮೊದಲೆರಡು ದಿನ ದೊಡ್ಡ ಸಂಖ್ಯೆಯಲ್ಲಿ ಬೆಂಗಳೂರಿನ ಹಾಗೂ ಕೋಲಾರದ ನೌಕರರು ಧರಣಾ ಸತ್ಯಾಗ್ರಹದಲ್ಲಿ. ಪಾಲ್ಗೊಂಡಿದ್ದರು 3 ಮತ್ತು 4ನೇ ದಿನ ಬೆಂಗಳೂರು, ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳ ನೌಕರರು ಪಾಲ್ಗೊಂಡಿದ್ದರು. ಐದನೇ ದಿನ ಮತ್ತೆ ಬೆಂಗಳೂರಿನ ನೌಕರರು ಪಾಲ್ಗೊಂಡಿದ್ದಾರೆ.

ರಾಜ್ಯಾದ್ಯಂತ ಬೃಹತ್ ಧರಣಾ ಸತ್ಯಾಗ್ರಹ

ಸಿ.ಐ.ಟಿ.ಯು.ಗೆ ಸಂಯೋಜಿತ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ ಚಟುವಟಿಕೆ ಆರಂಭಿಸಿದ ಕಳೆದ 11 ವರ್ಷಗಳ ಅವಧಿಯಲ್ಲೇ ಇದೇ ಮೊದಲ ಸಲ ಬೃಹತ್ ಪ್ರಮಾಣದಲ್ಲಿ ರಾಜ್ಯವ್ಯಾಪ್ತಿ ಧರಣಾ ಸತ್ಯಾಗ್ರಹ 1-2-99 ರಿಂದ ಆರಂಭವಾಯಿತು.

ಬೀದರ್‌ನಲ್ಲಿ ಸುಮಾರು 500 ನೌಕರರು ಮೆರವಣಿಗೆ ನಡೆಸಿ ಧರಣಾ ಸತ್ಯಾಗ್ರಹ ಹಾಗೂ ಸಂಘದ ಜಿಲ್ಲಾ ಮುಖಂಡರು ಆಮರಣ ನಿರಶನ ಆರಂಭಿಸಿದ್ದಾರೆ. ಗುಲ್ಬರ್ಗದಲ್ಲಿ 400 ಜನ ನೌಕರರು ಮೆರವಣಿಗೆ ಹಾಗೂ ಧರಣಾ ನಡೆಸಿದ್ದಾರೆ. ತಾಲೂಕಿನ ಮುಖಂಡರು ಪ್ರತಿದಿನ ಸರದಿ ಉಪವಾಸ ಆರಂಭಿಸಿದ್ದಾರೆ. ರಾಯಚೂರಿನಲ್ಲಿ 300 ನೌಕರರು ಧರಣಾ ಆರಂಭಿಸಿದ್ದಾರೆ. ಬಿಜಾಪುರದಲ್ಲಿ 300 ನೌಕರರು ಧರಣಾ ಹಾಗೂ ಸಂಘದ ಜಿಲ್ಲಾ ಮುಖಂಡರು ಆಮರಣ ಉಪವಾಸ ಆರಂಭಿಸಿದ್ದಾರೆ.

ಬೆಳಗಾವಿಯಲ್ಲಿ ಬೃಹತ್ ಪ್ರಮಾಣದಲ್ಲಿ 1200 ನೌಕರರು, ಉತ್ತರ ಕನ್ನಡದಲ್ಲಿ 200 ನೌಕರರು, ಧಾರವಾಡದಲ್ಲಿ 300, ಗದಗದಲ್ಲಿ 250, ಹಾವೇರಿಯಲ್ಲಿ 300, ದಾವಣಗೆರೆಯಲ್ಲಿ 150, ಶಿವಮೊಗ್ಗದಲ್ಲಿ 100, ಚಿಕ್ಕಮಗಳೂರಿನಲ್ಲಿ 500, ತುಮಕೂರಿನಲ್ಲಿ 500, ಮಂಡ್ಯದಲ್ಲಿ 600, ಬಾಗಲಕೋಟೆಯಲ್ಲಿ 1000, ಉಡುಪಿಯಲ್ಲಿ 350 ಜನ, ಕೋಲಾರದಲ್ಲಿ 300 ನೌಕರರು ಪಾಲ್ಗೊಂಡಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಮೊದಲದಿನ 50 ನೌಕರರು ಪಾಲ್ಗೊಂಡಿದ್ದು 4-2-99 ರಿಂದ ಬೆಂಗಳೂರಿಗೆ ಆಗಮಿಸಿ ಇಲ್ಲಿಯ ಧರಣಾ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದಾರೆ.

ಇಡೀ ರಾಜ್ಯದಲ್ಲಿ ಹಾಸನ, ಮೈಸೂರು ಚಾಮರಾಜನಗರ ಮತ್ತು ಕೊಡಗು ಈ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ನೌಕರರು ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿಲ್ಲ.

ನಾಲ್ಕು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 22 ಜಿಲ್ಲೆಗಳಲ್ಲಿ ಧರಣಾ ಸತ್ಯಾಗ್ರಹ ಮುಂದುವರಿದಿದೆ. ಎಲ್ಲ ಜಿಲ್ಲೆಗಳಲ್ಲಿ ಸರಕಾರಿ ನೌಕರರ ಸಂಘ, ಕಾರ್ಮಿಕ ಸಂಘಟನೆಗಳು ಸಾಮೂಹಿಕ ಸಂಘಟನೆಗಳು, ಈ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿವೆ. ಬೇಡಿಕೆಗಳನ್ನು ಪಡೆದೇ ತೀರಬೇಕೆನ್ನುವ ಛಲದಿಂದ ಹೋರಾಟದ ಕಣದಲ್ಲಿದ್ದಾರೆ. ಕೆಲವು ಕಡೆ ಪಂಚಾಯತ್‌ಗಳ ಸದಸ್ಯರು (ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ತಾಲೂಕಿನಲ್ಲಿ ಹಾಗೂ ದೊಡ್ಡ ಬಳ್ಳಾಪುರ ತಾಲೂಕಿನ ಹಳ್ಳಿಯಲ್ಲಿ) ನೀರು ಬಿಡುವ ನೌಕರರನ್ನು ದೈಹಿಕವಾಗಿ ಥಳಿಸಿದ ವರದಿ ಬಂದಿದೆ. ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿ ಪಂಚಾಯತ್ ನೌಕರರನ್ನು ಬೆದರಿಸುತ್ತಿದ್ದಾರೆ. ಚಿತ್ರದುರ್ಗದಲ್ಲಿ ಅಲ್ಲಿಯ ಪಿ.ಎಸ್.ಐ. ಧರಣಾ ಸತ್ಯಾಗ್ರಹದ ಟೆಂಟ್ ಕೀಳುವ ಬೆದರಿಕೆ ಹಾಕುತ್ತಿದ್ದಾರೆ. ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಪಿ. ಕುಲಕರ್ಣಿ ಅವರು ಈ ಎಲ್ಲ ಘಟನೆಗಳನ್ನು ತೀವ್ರವಾಗಿ ಖಂಡಿಸಿದ್ದಾರೆ. ಈ ಚಳವಳಿಯಿಂದ ಗ್ರಾಮಾಂತರ ಜನತೆಗೆ ತೊಂದರೆಯುಂಟಾದುದಕ್ಕೆ ವಿಷಾದ ವ್ಯಕ್ತಪಡಿಸಿದ್ದಾರೆ.

ಇದುವರೆಗೂ ಸರಕಾರದಿಂದ, ಪಂಚಾಯತ್‌ರಾಜ್ ಇಲಾಖೆಯಿಂದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ. ಸರಕಾರದ ಧೋರಣೆಯನ್ನು ಎನ್.ಕೆ. ಉಪಾಧ್ಯಾಯ ತೀವ್ರವಾಗಿ ಖಂಡಿಸಿದ್ದಾರೆ. ಧ್ವನಿಯೇ ಇಲ್ಲದ ಪಂಚಾಯತ್ ನೌಕರರು ಸಿಡಿದೆದ್ದು ನಿಂತಿದ್ದಾರೆ. ಈ ಸಂಘ ಉತ್ತರ ಕರ್ನಾಟಕಕ್ಕೆ ಮಾತ್ರ ಸೀಮಿತ ಎನ್ನುತ್ತಿದ್ದ ಕೆಲವು ಕುಹಕಿಗಳು ದಕ್ಷಿಣ ಕರ್ನಾಟಕ, ಮಲೆನಾಡುಗಳಲ್ಲೂ ಪಂಚಾಯತ್ ನೌಕರರೂ ಹೋರಾಟಕ್ಕೆ ಜೊತೆಗೂಡಿ ದ್ದನ್ನು ಕಂಡು ದಂಗಾಗಿದ್ದಾರೆ. ಮೊದಲ ಬಾರಿಗೆ ಒಂದೇ ವೇದಿಕೆಯಲ್ಲಿ ಜೊತೆ ಗೂಡಿರುವ ಪಂಚಾಯತ್ ನೌಕರರು ತಾವು ಯಶಸ್ವಿಯಾಗುವ ಅಚಲ ವಿಶ್ವಾಸ ದಿಂದ ಹೋರಾಟ ಮುಂದುವರಿಸಿದ್ದಾರೆ. ○



ಉಪವಾಸ ಸತ್ಯಗ್ರಹ ನಡೆಸುತ್ತಿರುವ ಮುಖಂಡರು ಮಾರುತಿ ಮಾನ್ಪಡೆ, ಸಿ.ಆರ್.ಭಟ್ ಮತ್ತು ಗಾಂಧಿನಗರ ನಾರಾಯಣ ಸ್ವಾಮಿ

ಜೈಲಿನಲ್ಲಿ 633 ಬಿಪಿಎಲ್ ಕಾರ್ಮಿಕರು

ಕಳೆದ ಮೂರು ತಿಂಗಳುಗಳಿಂದ ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ನಿರಂತರ ಹೋರಾಟದಲ್ಲಿರುವ ಬಿಪಿಎಲ್ ಕಾರ್ಮಿಕರು, ಫೆಬ್ರವರಿ 4 ರಂದು ಜೈಲ್ ಭರೋ ಕಾರ್ಯಕ್ರಮ ನಡೆಸಿ 250 ಮಹಿಳೆಯರು ಸೇರಿದಂತೆ 633 ಕಾರ್ಮಿಕರು ಬಳ್ಳಾರಿ, ಗುಲ್ಬರ್ಗ, ಧಾರವಾಡ ಮತ್ತು ಬೆಳಗಾವಿ ಜೈಲಿನಲ್ಲಿದ್ದು ತಮ್ಮ ಹೋರಾಟದ ಜ್ವಾಲೆಯನ್ನು ಜೈಲಿನವರೆಗೂ ಹಬ್ಬಿಸಿದ್ದಾರೆ.

ಬಿಪಿಎಲ್ ಕಾರ್ಮಿಕರ ಜೈಲ್ ಭರೋ ಚಳುವಳಿ ಬೆಂಗಳೂರು ಜಿಲ್ಲಾ ಸಿಐಟಿಯು ಪ್ರ. ಕಾರ್ಯದರ್ಶಿ ಮಿನಾಕ್ಷಿ ಸುಂದರಂ, ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರ. ಕಾರ್ಯದರ್ಶಿ ಎಸ್. ವರಲಕ್ಷ್ಮಿ ಸಿಐಟಿಯು ಜಿಲ್ಲಾ ಮುಖಂಡ ಹೆಚ್. ಎನ್. ಗೋಪಾಲಗೌಡ, ಗೌರಮ್ಮ ಹಾಗೂ ಬಿಪಿಎಲ್ ಕಾರ್ಮಿಕರ ಸಂಘದ ಪ್ರ.ಕಾರ್ಯದರ್ಶಿ ಟಿ.ಕೆ.ಎಸ್.ಕುಟ್ಟಿ ಹಾಗೂ ಪದಾಧಿಕಾರಿಗಳ ಮುಖಂಡತ್ವದಲ್ಲಿ ನಡೆಯಿತು.

ಸಂವಿಧಾನಾತ್ಮಕವಾದ ಸಂಘ ರಚಿಸಿಕೊಳ್ಳುವ ತಮ್ಮ ಹಕ್ಕಿಗಾಗಿ ಕಳೆದ ನವೆಂಬರ್‌ನಿಂದ ಪ್ರತಿದಿನ ಹೋರಾಟದಲ್ಲಿರುವ ಕಾರ್ಮಿಕರು, ಅದರ ಭಾಗವಾಗಿ ಫೆ 4 ರಂದು ತಮ್ಮ ಬೇಡಿಕೆ ಈಡೇರಿಸುವಂತೆ ಮಧ್ಯ ಪ್ರವೇಶಿಸಲು ಮುಖ್ಯ ಮಂತ್ರಿಗಳನ್ನು ಒತ್ತಾಯಿಸಿ ಅವರ ನಿವಾಸದೆದುರು ಧರಣಿ ಸತ್ಯಾಗ್ರಹ ಹಮ್ಮಿ ಕೊಂಡಿದ್ದರು.

ಆದರೆ, ಸರ್ಕಾರ ಫೆಬ್ರವರಿ 3 ರಂದೇ ಮುಖ್ಯಮಂತ್ರಿಗಳ ನಿವಾಸದ ಸುತ್ತುಮುತ್ತು 144 ನೇ ಸೆಕ್ಷನ್ ಜಾರಿಗೊಳಿಸಿ ಶಿವಾನಂದ ವೃತ್ತದಲ್ಲೂ ಸಹ 144ನೇ ಸೆಕ್ಷನ್ ಉಲ್ಲಂಘನೆ ಕಾರಣವೊಡ್ಡಿ ಫೆ 4 ರಂದು ಬಂಧಿಸಿದರು.

ಇದಕ್ಕೆ ಮೊದಲು ಜನವರಿ 28 ರಂದು ಸಿಐಟಿಯು ರಾಜ್ಯಾಧ್ಯಕ್ಷ ಸೂರ್ಯ ನಾರಾಯಣ ರಾವ್‌ರವರು ಮುಖ್ಯ ಮಂತ್ರಿಗಳಿಗೆ ಕಾರ್ಮಿಕರ ಸಮಸ್ಯೆಗಳ ಬಗ್ಗೆ ತಿಳಿಸಿದಾಗ ಸೂಕ್ತ ಸಮಯದಲ್ಲಿ ಸಭೆ ಕರೆಯಲಾಗುವುದು ಎಂದು ತಿಳಿಸಿದ ಮುಖ್ಯಮಂತ್ರಿಗಳು ಖಾತೆಗಳ ಮರು ಹಂಚಿಕೆಯ ನಂತರ ಫೈಲುಗಳನ್ನು

ಪುಟ 7 ನೋಡಿ

ಬಂಧನಕ್ಕೆ ಸಿಪಿಐ(ಎಂ)ನ ತೀವ್ರ ಖಂಡನೆ

ತಮ್ಮ ನ್ಯಾಯಸಮ್ಮತ ಬೇಡಿಕೆಗಳಿಗಾಗಿ ಮೂರು ತಿಂಗಳಿನಿಂದ ಚಳುವಳಿ ನಡೆಸುತ್ತಿದ್ದ ಬಿ.ಪಿ.ಎಲ್ ಗ್ರೂಪ್ ಕಂಪನಿಗಳ ಸಾವಿರಾರು ಕಾರ್ಮಿಕರ ಜೀವನದ ಸಮಸ್ಯೆಯ ಪರಿಹಾರಕ್ಕಾಗಿ ಅನಿರ್ದಿಷ್ಟ ಕಾಲ ಉಪವಾಸ ಕೈಗೊಂಡಿದ್ದ ಕಾರ್ಮಿಕ ಮುಖಂಡರುಗಳನ್ನು ಬಂಧಿಸಿ, ದಬ್ಬಾಳಿಕೆ ಮಾಡಿ ಜೈಲಿಗೆ ತಳ್ಳಿರುವ ಸರ್ಕಾರದ ಕ್ರಮವನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಉಗ್ರವಾಗಿ ಖಂಡಿಸಿದೆ.

ಮುಖ್ಯಮಂತ್ರಿಗಳು ಆಡಳಿತ ಮಂಡಳಿಯೊಂದಿಗೆ ಸಮಾಲೋಚಿಸಿದ ಮರುದಿನವೇ ನಿಷೇದಾಜ್ಞೆ ಹೇರಿದ್ದು, ಉಪವಾಸ ಮುಷ್ಕರ ನಡೆಸುತ್ತಿದ್ದ ಸಂಘದ ಮುಖಂಡರುಗಳನ್ನು ಬಲವಂತವಾಗಿ ಬಂಧಿಸಿರುವುದು, ಈ ಮುಷ್ಕರ ಮುರಿಯಲು ಸರ್ಕಾರವೇ ಆಡಳಿತ ಮಂಡಳಿಯೊಂದಿಗೆ ಸಂಚು ನಡೆಸಿದೆ ಎಂಬ ಅನುಮಾನ ಉಂಟಾಗಿದೆ. ಆಡಳಿತ ಮಂಡಳಿಯೊಂದಿಗೆ ಚರ್ಚಿಸಲು ಮುಂದಾಗುವ ಮುಖ್ಯಮಂತ್ರಿ ಜೆ.ಹೆಚ್. ಪಟೇಲರಿಗೆ ಕಾರ್ಮಿಕ ಸಂಘದ ಮುಖಂಡರೊಡನೆ ಚರ್ಚಿಸಲು ಸಮಯ ಯಾಕಿಲ್ಲ ಎಂದು ಸಿ.ಪಿ.ಐ.(ಎಂ) ಪ್ರಶ್ನಿಸಿದೆ.

ಸರ್ಕಾರ ಇಂತಹ ದಬ್ಬಾಳಿಕೆಯ ಕ್ರಮಗಳನ್ನು ಕೂಡಲೇ ಕೈಬಿಡಬೇಕು! ಜೈಲ್ ಭರೋ" ಚಳುವಳಿ ನಡೆಸಿ ಬಂಧಿತರಾದ ಸಾವಿರಾರು ಯುವ ಕಾರ್ಮಿಕರು ಅದರಲ್ಲಿಯೂ ತರುಣಿಯರು ಬಹಳವಾಗಿದ್ದು, ಈ ಕಾರ್ಮಿಕರ ಸಂಕಷ್ಟಕ್ಕೆ ಈಗಲಾದರೂ ಸರ್ಕಾರ ಸ್ಪಂದಿಸಬೇಕು. ಮೂರು ತಿಂಗಳಿನಿಂದ ಮುಷ್ಕರ ನಡೆಸುತ್ತಾ ಆದಾಯವಿಲ್ಲದೆ ಕಂಗೆಟ್ಟ ಕಾರ್ಮಿಕರ ನ್ಯಾಯಯುತ ಸಮಸ್ಯೆಗಳ ಪರಿಹಾರಕ್ಕೆ ಮುಖ್ಯಮಂತ್ರಿಗಳು ನಿಷ್ಪಕ್ಷಪಾತವಾಗಿ ಮಧ್ಯ ಪ್ರವೇಶಿಸಿ ಸೌಹಾರ್ದಯುತ ಮಾತುಕತೆ ಮೂಲಕ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಮುಷ್ಕರ ನಿರತ ಬಿ.ಪಿ.ಎಲ್. ಕಾರ್ಖಾನೆಗಳ ನೌಕರರಿಗೆ ಅವರ ಹೋರಾಟಗಳಿಗೆ ಪೂರ್ಣ, ಬೆಂಬಲವನ್ನು ವ್ಯಕ್ತ ಪಡಿಸಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸರಕಾರದ ದಮನಕಾರಿ ಕ್ರಮಗಳನ್ನು ವಿರೋಧಿಸಿ ಪ್ರತಿಭಟಿಸಲು ಕರೆ ನೀಡಿದೆ.

ಕರ್ನಾಟಕದಲ್ಲಿ ಕಳೆದವಾರ

ಶರತ್‌ಚಂದ್ರ

ಪಡಿತರ ಅಕ್ಕಿ, ಗೋಧಿ, ಯೂರಿಯಾ, ಅಡುಗೆ ಗ್ಯಾಸ್, ಹಾಲು ಬೆಲೆ ಏರಿಕೆ

ಕಳೆದ ವಾರ ಬೆಲೆ ಏರಿಕೆಗಳ ವಾರವಾಗಿತ್ತು. ಕೇಂದ್ರ ಸರ್ಕಾರ ಪಡಿತರ ಅಕ್ಕಿ, ಗೋಧಿ, ಸಕ್ಕರೆ, ಯೂರಿಯಾಗಳ ಬೆಲೆ ಏರಿಕೆಯ ಬಿಸಿ ನಮ್ಮ ರಾಜ್ಯಕ್ಕೂ ತಟ್ಟಿದೆ. ರಾಜ್ಯ ಸರ್ಕಾರ ಸಾಗಾಣಿಕೆಯ ಸಂಪೂರ್ಣ ವೆಚ್ಚವನ್ನು, ಗೋಧಿಯ ಬೆಲೆಯಲ್ಲಿ 25 ಪೈಸೆ, ಅಕ್ಕಿ ಬೆಲೆಯಲ್ಲಿ 80 ಪೈಸೆ ವಹಿಸಿಕೊಳ್ಳಲು ನಿರ್ಧರಿಸಿದೆ. ಈಗಿನ ಬೆಲೆ ಏರಿಕೆಯಿಂದ ರಾಜ್ಯ ಸರ್ಕಾರಕ್ಕೆ 121 ಕೋಟಿ ರೂ. ಹೆಚ್ಚುವರಿ ಹೊರೆ ಬೀಳುತ್ತದೆ. ಹಸಿರು ಕಾರ್ಡಿಗೆ ವಿತರಿಸುವ ಅಕ್ಕಿ ಬೆಲೆಯನ್ನು ಕೆ.ಜಿ.ಗೆ ರೂ.4, ಗೋಧಿ ಬೆಲೆಯನ್ನು ಕೆ.ಜಿ.ಗೆ ರೂ. 3. ರೂ, ಸಕ್ಕರೆ ಕೆ.ಜಿ.ಗೆ 12 ರೂ. ನಿಗದಿಪಡಿಸಲಾಗಿದೆ. ಉಳಿದಂತೆ ಕೇಂದ್ರ ಸರ್ಕಾರದ ಬೆಲೆಯನ್ನು ನೇರವಾಗಿ ಬಳಕೆದಾರರಿಗೆ ವರ್ಗಾಯಿಸಲಾಗಿದೆ.

ಈಗಾಗಲೇ ಗಾಡಿ ಸೀಮೆಎಣ್ಣೆ ನಿಲ್ಲಿಸಲು ರಾಜ್ಯ ಸರ್ಕಾರದ ನಿರ್ಧಾರ ರಾಜ್ಯದ ಬಡವರಿಗೆ ಇನ್ನಷ್ಟು ಸಂಕಷ್ಟ ತರಲಿದೆ. ಗಾಡಿ ಸೀಮೆಎಣ್ಣೆ ವಿತರಣೆಯ ಮುಖ್ಯ ವಿಧಾನವಾಗಿದ್ದು ಅದಕ್ಕೆ ಸರಿಯಾದ ಬದಲಿ ರೂಪಿಸದೆ ನಿಲ್ಲಿಸಿದ್ದು ಒಳ್ಳೆಯ ನಿರ್ಧಾರವಲ್ಲ.

ಅಡುಗೆ ಅನಿಲ ಬೆಲೆ ಬೆಂಗಳೂರಿನಲ್ಲಿ ರೂ. 174.41 ಆಗಿದೆ. ಇದು ಸಾಲದೆಂಬಂತೆ ನಂದಿನಿ ಹಾಲಿನ ಬೆಲೆ 50 ಪೈಸೆ ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾರ ಬೆಲೆ ಏರಿಕೆಯನ್ನು ಬಲವಾಗಿ ವಿರೋಧಿಸುವುದು ಸ್ವಾಗತಾರ್ಹವಾದರೂ ಈ ಬಗ್ಗೆ ಜನರ ಚಳುವಳಿ ರೂಪಿಸದಿರುವುದು ಆತಂಕಕಾರಿ.

ಗ್ರಾಮೀಣಾಭಿವೃದ್ಧಿ ಹಣ ನಿಲ್ಲಿಸುವ ಬೆದರಿಕೆ - ಬಾಬಾಗೌಡ ಪಾಟೀಲ ಕೂಗಾಟ

ಗ್ರಾಮ ಪಂಚಾಯತ್ ಚುನಾವಣೆಯನ್ನು ಸಕಾಲಕ್ಕೆ ನಡೆಸದೆ ಹೋದರೆ, ಕುಡಿಯುವ ನೀರಿನ ಕಾರ್ಯಕ್ರಮವೊಂದನ್ನು ಬಿಟ್ಟು ಬೇರೆ ಎಲ್ಲಾ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಿಗೆ ಹಣವನ್ನು ನಿಲ್ಲಿಸುವುದಾಗಿ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಬಾಬಾಗೌಡ ಪಾಟೀಲ್ ಸಾರ್ವಜನಿಕವಾಗಿ ಕೂಗಾಡಿ ಬೆದರಿಕೆ ಹಾಕಿದ್ದು ಮಾತ್ರವಲ್ಲ, ಈಗ ಅಧಿಕೃತವಾಗಿ ಪತ್ರ ಬರೆದಿದ್ದಾರೆ. ಗ್ರಾಮ ಪಂಚಾಯತ್ ಚುನಾವಣೆಗಳನ್ನು ಮುಂದೂಡಿದ್ದು ಅಪ್ರಜಾಸತ್ತಾತ್ಮಕ ಕ್ರಮವಾದರೂ, ಅದಕ್ಕೂ ಗ್ರಾಮೀಣಾಭಿವೃದ್ಧಿ ಹಣ ಒದಗಿಸುವುದಕ್ಕೂ ತಳುಕು ಹಾಕುವುದು ಸರಿಯಲ್ಲ. ಈಗಾಗಲೇ ಕುಂಟುತ್ತಿರುವ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಿಗೆ ಇದು ಮಾರಕವಾದೀತು, ಕೇಂದ್ರ -ರಾಜ್ಯ ಸಂಬಂಧಗಳ ದೃಷ್ಟಿಯಿಂದ ಫೆಡರಲ್ ತತ್ವಗಳಿಗೆ ವಿರುದ್ಧವಾದದ್ದು. ಇದು ರಾಜಕೀಯ ಪಕ್ಷಪಾತದ ನೀತಿ ಅಲ್ಲದೆ ಬೇರೆ ಅಲ್ಲ.

ಈ ಮಧ್ಯೆ, ರಾಜ್ಯ ಚುನಾವಣಾ ಆಯೋಗ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಮುಂದೂಡುವ ಪ್ರಕಟಣೆ ಹೊರಡಿಸಿದೆ. ಮಳೆಗಾಲ, ರಾಜ್ಯ ವಿಧಾನಸಭಾ ಚುನಾವಣೆ ಇವೆಲ್ಲಾ ಸೇರಿ ಇದು ಇನ್ನಷ್ಟು ಮುಂದೆ ಹೋಗುವ ಸಾಧ್ಯತೆ ಇದೆ. ಇದಕ್ಕೆ ಪ್ರತಿಭಟನಾರ್ಥವಾಗಿ ಪಂಚಾಯತ್ ಮಂತ್ರಿ ಎಂ.ಪಿ.ಪ್ರಕಾಶ್ ರಾಜೀನಾಮೆ ಕೊಟ್ಟಿದ್ದು, ಅದನ್ನು ಸ್ವೀಕರಿಸದೆ ಹಿಂದಿರುಗಿಸದೆ ಅನಿಶ್ಚಿತತೆ ಅವರ ವೈಯಕ್ತಿಕ ಹಾಗೂ ಪಕ್ಷದ ವರ್ಚಸ್ಸಿಗೆ ಧಕ್ಕೆ ಬಂದಿದೆ.

ಶಂಕರ್ ಕಾರ್ಮಿಕ ಮಂತ್ರಿ - ದಳದ ಬಿಕ್ಕಟ್ಟಿಗೆ ಹೊಸ ತಿರುವು

ಕೆಲವು ದಿನಗಳ ಹಿಂದೆ ರಾಜ್ಯ ಜನತಾದಳದ ಗುಂಪು ಜಗಳಕ್ಕೆ ತಾತ್ಕಾಲಿಕವಾಗಿಯಾದರೂ ಪರಿಹಾರ ತಂದಿದ್ದ ರಾಜೀ ಸೂತ್ರದಲ್ಲಿ ಈಗಾಗಲೇ ಬಿರುಕು ಕಂಡಿದೆ. ರಾಜೀ ಸೂತ್ರದ ಪ್ರಕಾರ ಬಿ.ಎಲ್.ಶಂಕರ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗಿದ್ದು ಈಗಾಗಲೇ ಅತೃಪ್ತಿಗೆ ಕಾರಣವಾಗಿತ್ತು. ಈಗ ಜೆ.ಹೆಚ್.ಪಟೇಲ್ ಮಂತ್ರಿಮಂಡಲದ ಪುನರ್‌ರಚನೆಗೆ ಮುಂದಾಗಿ ಶಂಕರ್ ಅವರನ್ನು ಕಾರ್ಮಿಕ ಮಂತ್ರಿ ಆಗಿ ತೆಗೆದುಕೊಂಡದ್ದು ಇನ್ನಷ್ಟು ಸಮಸ್ಯೆಗೆ ಕಾರಣವಾಗಿದೆ. ಚುನಾವಣೆಯಲ್ಲಿ ಸೋತವರಿಗೆ ವರ್ಷದಲ್ಲಿ ಡಬ್ಬಲ್ ಪ್ರಮೋಶನ್ ಎಂದು ದೇವೇಗೌಡರು ಸಾರ್ವಜನಿಕವಾಗಿ ಮೂದಲಿಸುವ ಮಟ್ಟಕ್ಕೆ ಹೋಗಿದೆ. ಶಂಕರ್‌ಗೆ ಸಚಿವ ಸ್ಥಾನ ಪ್ರತಿಭಟಿಸಿ ನಿಗಮ ಅಧ್ಯಕ್ಷತೆಗೆ ಇಬ್ಬರ ರಾಜೀನಾಮೆ, ಸಚಿವ ಸಂಪುಟದ ಸಭೆಯಲ್ಲಿ ರೇವಣ್ಣ-ಬೈರೇಗೌಡ ನಡುವೆ ಚಕಮಕಿ - ಇವೆಲ್ಲಾ ಈ ವರ್ಷ ಚುನಾವಣೆ ಎದುರಿಸಬೇಕಾದ ಜನತಾದಳಕ್ಕೆ ಆರೋಗ್ಯಕರವಲ್ಲ. ಈಗ ಅನುಕೂಲ ಪರಿಸ್ಥಿತಿಯಲ್ಲಿ ಮೂಡಿಬರುತ್ತಿರುವ ಮೂರನೇ ರಂಗದ ಪ್ರಜಾಸತ್ತಾತ್ಮಕ ಶಕ್ತಿಗಳ ಬೆಳವಣಿಗೆಗೆ ಆರೋಗ್ಯಕರವೂ ಅಲ್ಲ.

ರೇಷ್ಮೆ ಆಮದು ನೀತಿ ಬೆಂಬಲಿಸಿ ಸಮಾವೇಶ

ಕೇಂದ್ರದ ರೇಷ್ಮೆ ಆಮದು ನೀತಿಯನ್ನು ಬೆಂಬಲಿಸಿ, ಕರ್ನಾಟಕ ರಾಜ್ಯ ನೇಕಾರರ ಕೇಂದ್ರ ಸಮಿತಿ ಆಶ್ರಯದಲ್ಲಿ ಸಮಾವೇಶ ನಡೆಯಿತು. ರೇಷ್ಮೆ ನೇಕಾರರ ಉದ್ಯಮದ ಅಗತ್ಯ ಕಚ್ಚಾರೇಷ್ಮೆ ಪೂರೈಕೆಯಲ್ಲಿ (ದೇಶೀಯ ಉತ್ಪಾದನೆಯಿಂದ) ಕೊರತೆ ಇರುವಷ್ಟು ಆಮದು ಮುಂದುವರೆಸಬೇಕು ಎಂದು ಅವರ ವಾದವಾಗಿತ್ತು. ಆಮದು ಬಿಡದಿದ್ದರೆ, ಕಳ್ಳ ಸಾಗಾಣಿಕೆ ಆಗುತ್ತದೆ ಎಂದೂ ಅವರ ವಾದ. 'ಪೂರೈಕೆ ಕೊರತೆ ಇರುವುದು ನಿಜವಾದರೂ (25 ಸಾವಿರ ಟನ್ ಕಚ್ಚಾರೇಷ್ಮೆ ಬೇಡಿಕೆ ಹಾಗೂ 15 ಸಾವಿರ ಟನ್ ಉತ್ಪಾದನೆ) ಆ ಕೊರತೆ ನೀಗಿಸಲು ಆಮದು ಒಂದೇ ವಿಧಾನವಲ್ಲ. ದೇಶೀಯ ಉತ್ಪಾದನೆಗೆ ಉತ್ತೇಜನ ನೀಡಿ ಅದನ್ನು ಹೆಚ್ಚಿಸುವುದು ಸಾಧ್ಯವಿದೆ. ಅದೇ ರೀತಿ ಕಚ್ಚಾರೇಷ್ಮೆ ಆಮದು ನೀತಿಯಿಂದ ದೇಶಿಯ ಕಚ್ಚಾರೇಷ್ಮೆ ಬೆಲೆಗೆ ಏನೂ ಪರಿಣಾಮ ಬೀರುವುದಿಲ್ಲ ಎಂಬ ನೇಕಾರರ ವಾದವೂ ಒಪ್ಪುವಂತಹದ್ದಲ್ಲ. ಇದೇ ಆಮದು ನೀತಿ ಮುಂದುವರೆದರೆ ದೇಶೀಯ ಬೆಳೆಗಾರರು ನಾಶವಾಗಿ, ಅಂತಿಮವಾಗಿ ರೇಷ್ಮೆ ನೇಕಾರರ ಉದ್ಯಮಕ್ಕೆ ಹಾನಿಯಾಗುವುದು ಖಚಿತ. ಅಲ್ಲದೆ ನೇಕಾರರು ಬಲವಾಗಿ ವಿರೋಧಿಸಿರುವ ರೇಷ್ಮೆ ಬಟ್ಟೆಗಳ ಆಮದು ಆರಂಭವಾದರೆ ಇಡೀ ಉದ್ಯಮಕ್ಕೆ ಧಕ್ಕೆ. ಸಾಧ್ಯವಿರುವಲ್ಲೆಲ್ಲಾ ದೇಶೀಯ ಕಚ್ಚಾ ವಸ್ತು ಆಧಾರಿತ ಉತ್ಪಾದನೆ ಆರೋಗ್ಯಕರ. ಆಗ ಜಾಗತೀಕರಣದ, ಅಂತರ್ರಾಷ್ಟ್ರೀಯ ಹಣಕಾಸು-ವ್ಯಾಪಾರದ ಏರುಪೇರುಗಳಿಂದ ಮುಕ್ತವಾಗಿರುತ್ತದೆ ನಮ್ಮ ಉದ್ಯಮ.

ರೇಷ್ಮೆ ಬೆಳೆಗಾರರು ಮತ್ತು ನೇಕಾರರ

ಪುಟ 7 ನೋಡಿ





“ಬಡತನ, ನಿರುದ್ಯೋಗಗಳ ಬಗ್ಗೆ ಚರ್ಚೆ ನಡೆಯಲಿ, ಮತಾಂತರಗಳ ಬಗೆಗಲ್ಲ”

- ದ್ವೇಷವನ್ನು ಸುಡಿ, ಮಕ್ಕಳನ್ನಲ್ಲ
- ಇಂದು ಮೌನ, ನಾಳೆ ಫ್ಯಾಸಿಸಂ
- ಕುಷ್ಠರೋಗಿಗಳಿಗಾಗಿ ಕೆಲಸ ಮಾಡಿ ಕುಷ್ಠರೋಗಿಗಳಿಗಾಗಿ ಕೆಲಸ ಮಾಡುವವರನ್ನು ಸುಡಬೇಡಿ
- ಚರ್ಚೆ ಬೇಡ - ಕೋಮುವಾದಿ ಕೊಲೆಗಡುಕರನ್ನು ಗಲ್ಲಿಗೇರಿಸಿ
- ಈ ಧಾಳಿಗಳು ಅಲ್ಪಸಂಖ್ಯಾತರ ಮೇಲಲ್ಲ ಈ ಧಾಳಿಗಳು ದೇಶದ ಮೇಲೆ
- ಹಿಂಸೆಯ ಬಗ್ಗೆ ಇನ್ನು ಮೌನ ಬೇಡ

ಇವು ಜನವರಿ 30 ರಂದು ನವ ದೆಹಲಿಯಲ್ಲಿ ಕೇಳಿಬಂದ ಘೋಷಣೆಗಳು. ಕಾವಿಪಡೆಗಳ ವಿಭಿನ್ನ ಭಾಗಗಳು ದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿರುವ ಧಾಳಿಗಳು ತೀವ್ರಗೊಂಡು ಒರಿಸ್ಸಾದ ಮನೋಹರ ಪುರದಲ್ಲಿ ಆಸ್ಟ್ರೇಲಿಯನ್ ಧರ್ಮ ಪ್ರಚಾರಕ ಸ್ಟೇನ್ಸ್ ಮತ್ತು ಆತನ ಇಬ್ಬರು ಮುಗ್ಧ ಮಕ್ಕಳ ಸಜೀವ ದಹನದೊಂದಿಗೆ ತಾರಕಕ್ಕೇರಿರುವ ಸಂದರ್ಭದಲ್ಲಿ ಇದರ ವಿರುದ್ಧ ಬಲವಾದ ಪ್ರತಿಭಟನೆಯನ್ನು ದಾಖಲಿಸಲು ದೇಶದ ರಾಜಧಾನಿ ದೆಹಲಿಯಲ್ಲಿ ಮಹಾತ್ಮಗಾಂಧಿಯವರು ಕೋಮುವಾದಿಯ ಗುಂಡಿಗೆ ಬಲಿಯಾದ 51ನೇ ವಾರ್ಷಿಕದ ದಿನವಾದ ಜನವರಿ 30 ರಂದು ಒಂದು ಬೃಹತ್ ಪ್ರತಿಭಟನೆಯನ್ನು ಸಂಘಟಿಸಿತ್ತು. ಆ ಮೆರವಣಿಗೆಯಲ್ಲಿ ಕೇಳಿಬಂದ, ಕಂಡುಬಂದ ಘೋಷಣೆಗಳಿವು.

‘ಕೋಮು ಸಾಮರಸ್ಯಕ್ಕಾಗಿ ಮತ್ತು ಅಲ್ಪಸಂಖ್ಯಾತರ ಮೇಲೆ ಧಾಳಿಗಳ ವಿರುದ್ಧ ನಾಗರಿಕರ ಮೆರವಣಿಗೆ’ ಎಂಬ ಬ್ಯಾನರ್‌ನಡಿ ನಡೆದ ಈ ಕಾರ್ಯಕ್ರಮದಲ್ಲಿ ಸಾವಿರಾರು ರಾಜಕಾರಣಿಗಳು, ಧಾರ್ಮಿಕ ಮುಖಂಡರು, ಇತಿಹಾಸಕಾರರು, ಅಧ್ಯಾಪಕರು, ಕಲಾವಿದರು, ಲೇಖಕರು, ಸಾಮಾಜಿಕ ಹಾಗೂ ಕಾನೂನು ಕಾರ್ಯಕರ್ತರು, ವಿದ್ಯಾರ್ಥಿಗಳು ಅದರಲ್ಲೂ ದೊಡ್ಡ ಸಂಖ್ಯೆಯಲ್ಲಿ ಶಾಲಾ ಮಕ್ಕಳು ಭಾಗವಹಿಸಿದರು. ಮಾಜಿ ಪ್ರಧಾನಿಗಳಾದ ವಿ.ಪಿ.ಸಿಂಗ್ ಮತ್ತು ಐ.ಕೆ.ಗುಜ್ರಾಲ್, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್; ಸಿಪಿಐ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್ ಮತ್ತಿತರ ಮುಖಂಡರ ನೇತೃತ್ವದಲ್ಲಿ ನಾಗರಿಕರು. ಮಹಾತ್ಮ ಗಾಂಧಿಯವರ ಸಮಾಧಿ ರಾಜಘಾಟ್‌ನಿಂದ ಫಿರೋಜ್ ಶಾ ಕೋಟ್ಲಾ ಮೈದಾನದವರೆಗೆ ಮೆರವಣಿಗೆಯಲ್ಲಿ ಪಾಲ್ಗೊಂಡರು. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್, ಎಸ್.ರಾಮಚಂದ್ರನ್ ಪಿಳ್ಳೈ, ಇ.ಬಾಲಾನಂದನ್ ಹಾಗೂ ಎಂ.ಕೆ.ಪಂಧೆ, ಸಿಪಿಐ ಮುಖಂಡರಾದ ಡಿ.ರಾಜಾ ಮತ್ತು ಅತುಲ್ ಕುಮಾರ್ ಅಂಜನ್, ಮಾಜಿ ಲೋಕಸಭಾಧ್ಯಕ್ಷರಾದ ರಬಿರಾಯ್, ಹಿರಿಯ ಸಮಾಜವಾದಿಗಳಾದ ಸುರೇಂದ್ರ ಮೋಹನ್ ಮತ್ತು ಮಧುದಂಡವತೆ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಇತರ ಮುಖಂಡರು.

ನಿನ್ನೆ ರಾಷ್ಟ್ರಪಿತನ ವಿರುದ್ಧ - ಇಂದು ಇಡೀ ರಾಷ್ಟ್ರದ ವಿರುದ್ಧ

ಮಾಜಿ ಪ್ರಧಾನಿ ವಿ.ಪಿ.ಸಿಂಗ್ “ಸಾಂಸ್ಕೃತಿಕ ವರ್ಣ ದ್ವೇಷವನ್ನು ನಿಲ್ಲಿಸಿ” ಎಂಬ ಘೋಷಣಾ ಫಲಕ ಹಿಡಿದಿದ್ದರೆ ಸುರ್ಜಿತ್‌ರವರು ‘ನಮ್ಮ ನಂಬಿಕೆಯನ್ನು ಅಮಾನವೀಯಗೊಳಿಸ ಬೇಡಿ’ ಎಂಬ ಫಲಕ ಹಿಡಿದಿದ್ದರು. ಮೆರವಣಿಗೆಕಾರರು ಪ್ರಸಕ್ತ ಬಿಜೆಪಿ ಸರಕಾರವನ್ನು ಹಾಗೂ ಅದರ ದುರ್ದೆಸೆಯನ್ನು ಸುಯೋಗ್ಯ ರೀತಿಯಲ್ಲಿ ಬಿಂಬಿಸಿದರು. ಬೇರೆ ಬೇರೆ ಮುಖವಾಡ ಧರಿಸಿದ್ದ ಬಿಜೆಪಿ ಮುಖವಾಡದ ಹಿಂದಿನ ನಿಜ ಮುಖಗಳನ್ನು ಬಯಲಿಗೆಳೆದರು. ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ ಶಾಲಾ ಮಕ್ಕಳು ಕ್ರೈಸ್ತ ಅಲ್ಪಸಂಖ್ಯಾತರ ಸ್ಥಿತಿಯನ್ನು ಬಿಂಬಿಸಿದರು. ಹಿಂದುತ್ವ ಶಕ್ತಿಗಳ ಧಾಳಿಗಳ ಭಾರದಿಂದ ಹಾಗೂ ಅವರಿಗೆ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರದ ನೇರ-ಪರೋಕ್ಷ ಬೆಂಬಲದಿಂದ ಅಲ್ಪಸಂಖ್ಯಾತರು ನಲುಗುತ್ತಿರುವುದನ್ನು ಮಕ್ಕಳು ಖಂಡಿಸಿದರು.

ಪತ್ರಕರ್ತ ಮತ್ತು ರಾಜತಾಂತ್ರಿಕ ಕುಲದೀಪ್ ನಯ್ಯರ್, ಇತಿಹಾಸಕಾರರಾದ ಸುಮಿತ್ ಸರ್ಕಾರ್ ಮತ್ತು ಮುಷರುಲ್ ಹಸನ್, ಕಲಾವಿದರಾದ ವಿವಾನ್ ಸುಂದರಂ ಮತ್ತು ಅರ್ಪಿತಾ ಸಿಂಗ್ ಭಾಗವಹಿಸಿದ್ದರು.

ಫಿರೋಜ್ ಶಾ ಕೋಟ್ಲಾ ಮೈದಾನ ತಲುಪಿದ ಮೇಲೆ ಅಲ್ಲಿ ಕೋಮುವಾದಿಗಳಿಗೆ ಬಲಿಯಾದ ಮಹಾತ್ಮ ಗಾಂಧಿ, ಗ್ರಹಾಂ ಸ್ಟೇನ್ಸ್ ಮತ್ತು ಅವರ ಇಬ್ಬರು ಎಳೆ ಮಕ್ಕಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕ್ರೈಸ್ತರ ಮೇಲಿನ ಧಾಳಿಗಳನ್ನು ಖಂಡಿಸುವ ನಿರ್ಣಯವೊಂದನ್ನು ಅಂಗೀಕರಿಸಲಾಯಿತು. ಹಿಂದೀ ಭಾಷೆಯಲ್ಲಿ ಖ್ಯಾತ ಗಾಂಧಿವಾದಿ ಹಾಗೂ ಸಾಮಾಜಿಕ ಕಾರ್ಯಕರ್ತೆ ನಿರ್ಮಲಾ ದೇಶಪಾಂಡೆ ಹಾಗೂ ಇಂಗ್ಲೀಷಿನಲ್ಲಿ ದಿಲ್ಲಿ ಹೈಕೋರ್ಟಿನ ಮಾಜಿ ಮುಖ್ಯ ನ್ಯಾಯಾಧೀಶ ರಾಜೀಂದರ್ ಸಚಾರ್ ಓದಿದರು.

ಬಾಬ್ರಿ ಮಸೀದಿಯ ಧ್ವಂಸದಿಂದ ಹುಟ್ಟಿದ ದ್ವೇಷದ ಕಿಚ್ಚು ದೇಶದ ಅಲ್ಪಸಂಖ್ಯಾತರಲ್ಲಿ ಭಯೋತ್ಪಾದನೆ ಉಂಟು ಮಾಡುವ ಮಟ್ಟಕ್ಕೆ ತಲುಪಿದೆ ಎಂದಿರುವ ಈ ನಿರ್ಣಯ *‘ಈ ದೇಶದ ಜನತೆ ಅಲ್ಪಸಂಖ್ಯಾತರ ಮೇಲೆ ಇಂತಹ ಸತತ ಧಾಳಿಗಳು ಹಾಗೂ ಪೂಜಾ ಸ್ಥಳಗಳ ಧ್ವಂಸದ ಎದುರು ಮೌನರಾಗಿರುವುದಿಲ್ಲ. ಐವತ್ತು ವರ್ಷಗಳ ಹಿಂದೆ ಏರ್ಪಟ್ಟ ಈ ದ್ವೇಷ ಹಾಗೂ ಅಸಹನೆಯ ವಾತಾರವಣವೇ ಮಹಾತ್ಮ ಗಾಂಧಿಯವರ ಹತ್ಯೆಗೆ ಕಾರಣವಾಯಿತು. ನಿನ್ನೆ ರಾಷ್ಟ್ರಪಿತನ ಮೇಲೆ ಧಾಳಿ ಮಾಡಿದರು, ಇಂದು ಇಡೀ ದೇಶದ ಮೇಲೆ ಧಾಳಿ ನಡೆಸಿದ್ದಾರೆ. ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಆದರ್ಶಗಳ ಮೇಲೆ ಕಟ್ಟಿದ ಈ ದೇಶದ ಸಂವಿಧಾನವನ್ನು ಸಂಘ ಪರಿವಾರದ ಕೃತ್ಯಗಳು ನಾಶ ಮಾಡಲು ಬಿಡುವುದಿಲ್ಲ ಎಂದು ಪ್ರತಿಜ್ಞೆ ಮಾಡೋಣ”* ಎಂದಿದೆ

(ಐಎನ್‌ಎನ್)

ಕ್ರೈಸ್ತ ಮಿಶನರಿಯ ಸಜೀವ ದಹನ : ಭಜರಂಗದಳದ ಪ್ರಯತ್ನದ ಭಾಗ

ಕ್ರೈಸ್ತ ಮಿಶನರಿ ಗ್ರಹಾಂ ಸ್ಟೀವರ್ಟ್ ಸ್ಟೇನ್ಸ್ ಹಾಗೂ ಅವರ ಇಬ್ಬರು ಮಕ್ಕಳನ್ನು ಜೀವಂತ ಸುಟ್ಟ ಒರಿಸ್ಸಾದ ಮನೋಹರಪುರ್‌ಗೆ ಸಿಪಿಐ(ಎಂ) ನ ನಿಯೋಗವೊಂದು ಜನವರಿ 25 ರಂದು ಭೇಟಿ ನೀಡಿ ವರದಿಯನ್ನು ಸಲ್ಲಿಸಿದೆ.

ಸಿಪಿಐ(ಎಂ) ರಾಜ್ಯಸಭಾ ಸದಸ್ಯರಾದ ಪ್ರೊ. ಚಂದ್ರಕಲಾ ಪಾಂಡೆ, ಒರಿಸ್ಸಾ ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಂತೋಷ್ ದಾಸ್ ಹಾಗೂ ಪಕ್ಷದ ಜಜ್‌ಪುರ ಸಮಿತಿಯ ಸಂಯೋಜಕ ಪ್ರಫುಲ್ಲ ನಾಯಕ್‌ರವರಿದ್ದ ಈ ನಿಯೋಗ ಬುಡಕಟ್ಟು ಕ್ರೈಸ್ತರಲ್ಲಿ ಭಯೋತ್ಪಾದನೆ ಉಂಟುಮಾಡಲು ಹಾಗೂ ಅವರ ಮರು ಮತಾಂತರ ಏರ್ಪಡಿಸುವ ಪ್ರಯತ್ನದಲ್ಲಿ ಭಜರಂಗ ದಳ ಈ ಆಸ್ಟ್ರೇಲಿಯನ್ ಮಿಶನರಿ ಹಾಗೂ ಆತನ ಮಕ್ಕಳನ್ನು ಕೊಂದಿದ್ದಾರೆ ಎಂಬ ತೀರ್ಮಾನಕ್ಕೆ ಬಂದಿದೆ.

ಕಿಯೋಂಜಾರ್ ಮತ್ತು ಮಯೂರ್ ಭಂಜ್ ಸಂಸದೀಯ ಕ್ಷೇತ್ರಗಳಲ್ಲಿ ಬಿಜೆಪಿಯ ವಿಜಯ ಹಾಗೂ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರದ ರಚನೆಯೊಂದಿಗೆ ಇಲ್ಲಿ ಕೋಮುವಾದಿ ಶಕ್ತಿಗಳಿಗೆ ಹಿಂಸಾಕೃತ್ಯಗಳನ್ನು ನಡೆಸಲು ಧೈರ್ಯ ಬಂದಂತಾಗಿದೆ. ಕೇಂದ್ರದ ಬಿಜೆಪಿ ಸರಕಾರ ಅವರಿಗೆ ಈ ಕೃತ್ಯಗಳಲ್ಲಿ ಸ್ಫೂರ್ತಿಯ ಸೆಲೆಯಾಗಿದ್ದಾರೆ. ರಾಜ್ಯದ ಕಾಂಗ್ರೆಸ್ ಸರಕಾರ ಕೋಮುವಾದದ ಅಪಾಯವನ್ನು ಕಾಣದೇ ಹೋದುದರಿಂದ ಅವರು ಈ ಎರಡು ಜಿಲ್ಲೆಗಳಲ್ಲಿ ಮನ ಬಂದಂತೆ ವರ್ತಿಸಲು ಅವಕಾಶವಾಗಿದೆ ಎಂದಿರುವ ಸಿಪಿಐ(ಎಂ) ತಂಡ ಕಳೆದ ಒಂದು ವರ್ಷದಲ್ಲಿ ಈ ಶಕ್ತಿಗಳು ಎಸಗಿರುವ ಅಪರಾಧಗಳ ಪಟ್ಟಿ ಮಾಡಿದ್ದಾರೆ.

1. ಹತ್ತು ತಿಂಗಳ ಹಿಂದೆ ಕೇಶ್‌ದಿಹಾದಲ್ಲಿ ಚರ್ಚನ್ನು ಭಾಗಶಃ ಧ್ವಂಸ ಮಾಡಲಾಯಿತು. ಇದಕ್ಕೆ ಮೊದಲು ಸ್ಥಳೀಯ ಪತ್ರಿಕೆಯಲ್ಲಿ ಭಜರಂಗದಳದ ಹೆಸರಲ್ಲಿ ಈ ಬಗ್ಗೆ ಬೆದರಿಕೆ ಪ್ರಕಟವಾಗಿತ್ತು.
2. ಲೋಕಸಭಾ ಚುನಾವಣೆಗಳ ಸ್ವಲ್ಪವೇ ಮೊದಲು ಥಾಕುರ್ ಮುಂಡಾದಲ್ಲಿ ಆರ್.ಎಸ್.ಎಸ್. ಕಾರ್ಯಕರ್ತರು ಕ್ರಿಶ್ಚಿಯನ್ನರ ಮೇಲೆ ಧಾಳಿ ಮಾಡಿದ್ದರು.
3. ಆರ್.ಎಸ್.ಎಸ್. - ಭಜರಂಗ ದಳದ ಬೆದರಿಕೆಗಳ ನಂತರ ಬಸಂತ್‌ಪುರ-ನಿಪಾನಿಯಾ ಚರ್ಚಿನಲ್ಲಿ ಪ್ರಾರ್ಥನೆಗಳನ್ನು ನಿಲ್ಲಿಸಲಾಗಿದೆ.
4. ಮಯೂರ ಭಂಜ್ ಜಿಲ್ಲೆಯ ಅಖಿಪಾಲನ್ ಎಂಬಲ್ಲಿ ರಾಸುಗಳನ್ನು ಒಯ್ಯುತ್ತಿದ್ದ ಟ್ರಕ್ಕನ್ನು ಲೂಟಿ ಮಾಡಲಾಯಿತು. (ರಾಸುಗಳ ಮಾರಾಟ-ಸಾಗಾಟ ಮಾಡಬಾರದು ಎಂದು ವಿಹೆಚ್‌ಪಿ-ಭಜರಂಗ ದಳ ತಾಕೀತು ಮಾಡಿವೆ).
5. ಕೆಂಡುಮಂಡಿ ಮತ್ತು ಅಶಾನಬಾನಿ ನಡುವೆ ಇನ್ನೊಂದು ಟ್ರಕ್ಕಿಗೆ ಬೆಂಕಿ ಹಚ್ಚಿ ಲೂಟಿ ನಡೆಸಲಾಯಿತು.
6. ಶತಕೋಶಿಯಾ ಘಾಟಿಯಲ್ಲಿ ಎಮ್ಮೆಗಳನ್ನು ಒಯ್ಯುತ್ತಿದ್ದ ಟ್ರಕ್ಕಿಗೆ ಬೆಂಕಿ ಹಚ್ಚಿ ಸಿಬ್ಬಂದಿಯನ್ನು ಥಳಿಸಲಾಯಿತು. ಒಬ್ಬ ಹೆಲ್ಪರ್ ಪ್ರಾಣನೀಗಿದ.
7. ಕೆಂಡುಮಂಡಿ ಮಾರ್ಕೆಟ್‌ನಲ್ಲಿ ಮುಸ್ಲಿಮರ ಅಂಗಡಿಗಳನ್ನು ಲೂಟಿ ಮಾಡಲಾಯಿತು.
8. ದಮ್ಮಹೋಡಾದಲ್ಲಿ ಒಬ್ಬ ಮುಸ್ಲಿಂ ವ್ಯಾಪಾರಿಗೆ ಇರಿದು ಆತನ ಸರಕುಗಳನ್ನು ಲೂಟಿ ಮಾಡಲಾಯಿತು.

ಉನ್ನತ ಪೋಲೀಸ್ ಅಧಿಕಾರಿಗಳಲ್ಲಿ ಕೆಲವರು ಕೋಮುವಾದಕ್ಕೆ ಬೆಂಬಲವಾಗಿ ನಿಂತದ್ದು ಹಾಗೂ ಈ ಪ್ರದೇಶದಲ್ಲಿ ಪೋಲೀಸ್ ವ್ಯವಸ್ಥೆಯ ಅಭಾವ ಕೋಮುವಾದಿ ಶಕ್ತಿಗಳಿಗೆ ತಮ್ಮ ದುಷತ್ಯಗಳನ್ನು ನಡೆಸಲು ಇನ್ನಷ್ಟು ಕುಮ್ಮಕ್ಕು ಒದಗಿಸಿದವು. ಮಯೂರ್ ಭಂಜ್‌ನ ಮಾಜಿ ಎಸ್.ಪಿ. ಸಂತೋಷ್ ಉಪಾಧ್ಯಾಯ ಈ ಶಕ್ತಿಗಳಿಗೆ ಪೋಷಣೆ ನೀಡುತ್ತಿದ್ದ. ವರ್ಗವಾದ ಮೇಲೂ ಆತ ನಾಲ್ಕು ತಿಂಗಳು ಇಲ್ಲೇ ಉಳಿದಿದ್ದರಿಂದ ಥಾಕೂರ್‌ಮುಂಡಾ ಕೋಮುವಾದಿ ಚಟುವಟಿಕೆಗಳ ಆಗರವಾಯಿತು. ಇದು ಆಸ್ಟ್ರೇಲಿಯನ್ ಮಿಶನರಿಯನ್ನು ಸಜೀವ ದಹನ ಮಾಡಿದ ಮನೋಹರಪುರಕ್ಕೆ ಅತೀ ಸಮೀಪದ ಪಟ್ಟಣ. ಕೇಂದ್ರ ಗೃಹಮಂತ್ರಿ ಅಡ್ವಾಣಿ ಹಾಗೂ ಉಕ್ಕು ಮಂತ್ರಿ ನವೀನ್ ಪಟ್ನಾಯಕ್ ಭಜರಂಗ ದಳ, ಆರ್.ಎಸ್.ಎಸ್. ಈ ಕೃತ್ಯದಲ್ಲಿ ಇಲ್ಲ ಎಂದು ಸರ್ಟಿಫಿಕೇಟ್ ನೀಡಿರುವುದು ಈ ಶಕ್ತಿಗಳಿಗೆ ಹಾಗೂ ಅವರಿಗೆ ರಕ್ಷಣೆ ನೀಡುತ್ತಿರುವ ಪೋಲೀಸ್ ಅಧಿಕಾರಿಗಳಿಗೆ ಇನ್ನಷ್ಟು ಪ್ರೋತ್ಸಾಹ ನೀಡಬಹುದು ಎಂದು ಸಿಪಿಐ(ಎಂ) ನಿಯೋಗ ಭಯ ವ್ಯಕ್ತಪಡಿಸಿದೆ.

ಭಜರಂಗ ದಳ, ವಿಹೆಚ್‌ಪಿ ಮತ್ತು ಬಿಜೆಪಿ ಇದು ಮತಾಂತರದ ಫಲಿತಾಂಶ ಎಂದು ಬಿಂಬಿಸಲು ದೊಡ್ಡ ಪ್ರಚಾರವನ್ನೇ ಹರಿಯ ಬಿಟ್ಟಿದ್ದಾರೆ. ಸಂಬಂಧಪಟ್ಟ ಪ್ರದೇಶಗಳಲ್ಲಿ ಪತ್ರಕರ್ತರನ್ನು ಹಾಗೂ ರಾಜಕೀಯ ನಿಯೋಗಗಳನ್ನು ದಾರಿ ತಪ್ಪಿಸಲು ಏಜೆಂಟರನ್ನು ನೇಮಿಸಿದ್ದಾರೆ. ಅವರು ಮತಾಂತರದ ಬಗ್ಗೆ ಕಾಗಕ್ಕ-ಗುಬ್ಬಕನ ಕಥೆಗಳನ್ನು ಹರಡಿಸುತ್ತಿದ್ದಾರೆ ಎಂದಿರುವ ಸಿಪಿಐ(ಎಂ) ನಿಯೋಗ ರಾಜ್ಯ ಸರಕಾರ ತಕ್ಷಣ ಒಂದು ಸರ್ವಪಕ್ಷ ಸಭೆಯನ್ನು ಕರೆಯಬೇಕು, ಕೋಮು ಸೌಹಾರ್ದಕ್ಕೆ ಪ್ರಚಾರ-ಪ್ರಕ್ಷೋಭೆಯನ್ನು ಕೈಗೆತ್ತಿಕೊಳ್ಳಬೇಕು ಹಾಗೂ ಕೋಮುವಾದಿ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ನಾಗರೀಕ ಮತ್ತು ಪೋಲೀಸ್ ಆಡಳಿತವನ್ನು ಸೂಕ್ತವಾಗಿ ದುರಸ್ತಿ ಮಾಡಬೇಕು ಎಂದು ಆಗ್ರಹಿಸಿದೆ.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಪಕ್ಕದ ಮಯೂರ ಭಂಜ್ ಜಿಲ್ಲೆಯಲ್ಲಿ 35 ವರ್ಷದ ಕ್ರೈಸ್ತ ಸನ್ಯಾಸಿನಿಯೊಬ್ಬಳ ಮಾನಭಂಗ ಮಾಡಿದ ಇನ್ನೊಂದು ಕರಾಳ ಘಟನೆ ವರದಿಯಾಗಿದೆ. ಬಸ್ ನಿಲ್ದಾಣದಲ್ಲಿ ಕಾಯುತಿದ್ದ ಆಕೆಯ ಬಳಿ ಕಾರೊಂದು ಬಂದು ನಿಂತು ಆಕೆಗಾಗಿ ಕೆಲವು ಮಹಿಳೆಯರು ಕಾಯುತ್ತಿದ್ದಾರೆ ಎಂದು ಸುಳ್ಳು ಹೇಳಿದ ಸ್ತ್ರೀ ವೇಷಧಾರಿಗಳು ಕಾರಿನಲ್ಲಿ ಆಕೆಯನ್ನು ಕೂರಿಸಿ ಮಾನಭಂಗ ಮಾಡಿದರೆಂದು ವರದಿಯಾಗಿದೆ.

ಇದನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ “ಇದರರ್ಥ ಕೋಮುವಾದಿ ಮತಾಂಧರು ಇನ್ನೂ ಸಕ್ರಿಯರಾಗಿದ್ದಾರೆ. ಒರಿಸ್ಸಾ ಸರ್ಕಾರ ಇನ್ನೂ ಇಂತಹ ಘಟನೆಗಳು ಹೇಗೆ ನಡೆಯುತ್ತಿವೆ, ಈ ಕ್ರಿಮಿನಲ್‌ಗಳ ಮೇಲೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದು ವಿವರಿಸಬೇಕಾಗುತ್ತದೆ” ಎನ್ನುತ್ತಾ ಈ ಪ್ರದೇಶದಲ್ಲಿ ದ್ವೇಷವನ್ನು ಹರಡಿಸುತ್ತಿರುವ ಸಂಘಟನೆಗಳನ್ನು ನಿಷೇಧಿಸಬೇಕೆಂದು ಮತ್ತೊಮ್ಮೆ ಆಗ್ರಹಪಡಿಸಿದೆ.

(ಐಎನ್‌ಎನ್)



ಸರಕಾರದ ಪ್ರತಿಗಾಮೀ ಮುಖವನ್ನು ತೋರಿಸಿರುವ ರಾಕ್ಷಸೀ ಕ್ರಮ

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಜನವರಿ 30-31 ರಂದು ನಡೆಸಿದ ಸಭೆಯ ನಂತರ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಹೀಗಂದಿದೆ.

'ಅಧಿಕಾರದಲ್ಲಿದ್ದ ಹತ್ತೇ ತಿಂಗಳಲ್ಲಿ ಬಿಜೆಪಿ ನೇತೃತ್ವದ ಸರಕಾರ ಆರ್ಥಿಕವನ್ನು ಸಂಪೂರ್ಣವಾಗಿ ಹಾಳುಗೆಡವಿ ಬಿಟ್ಟಿದೆ. ಆರ್ಥಿಕ ತೊಂದರೆಗಳನ್ನು ಎದುರಿಸಲು ಅದರ ಬಳಿಯಿರುವ ಏಕೈಕ ಪರಿಹಾರ ಎಂದರೆ ಜನರ ಬದುಕನ್ನು ಇನ್ನಷ್ಟು ಹೊರೆಯಾಗಿಸುವುದು. ಚುನಾವಣೆಯ ವೇಳೆ 'ಸ್ವದೇಶಿ' ವೇದಿಕೆಯನ್ನು ಮೆರೆಸಿದ ನಂತರ ಬಿಜೆಪಿ ನೇತೃತ್ವದ ಸರಕಾರ ವಿದೇಶೀ ಬಂಡವಾಳಕ್ಕೆ ತೆರೆಯುವಲ್ಲಿ, ಖಾಸಗೀಕರಣದಲ್ಲಿ ಹಿಂದಿನ ಸರಕಾರಗಳಿಗಿಂತಲೂ ಬಹಳ ಮುಂದೆ ಹೋಗಿದೆ.

ಬಡತನದ ರೇಖೆಯ ಕೆಳಗಿರುವ ಬಳಕೆದಾರರಿಗೆ ಗೋಧಿ ಮತ್ತು ಅಕ್ಕಿ ಬೆಲೆಗಳಲ್ಲಿ 30% ಹೆಚ್ಚಳ, ಹಾಗೂ ಬಡತನದ ರೇಖೆಯ ಮೇಲಿರುವ ಬಳಕೆದಾರರಿಗೆ ಗೋಧಿ ಬೆಲೆಯಲ್ಲಿ 44% ಹೆಚ್ಚಳ, ಅಕ್ಕಿ ಬೆಲೆಯಲ್ಲಿ 29% ಹೆಚ್ಚಳ ಸಮಾಜದ ಅತಿ ಬಡ ವಿಭಾಗಗಳ ಬದುಕಿನ ಮೇಲೆ ಒಂದು ತೀವ್ರ ಧಾಳಿ. ಸಾರ್ವಜನಿಕ ವಿತರಣಾ ವ್ಯವಸ್ಥೆ ಪರಿಣಾಮಕಾರಿಯಾಗಿರುವ, ಬಹಳ ಜನರನ್ನು ತಟ್ಟುತ್ತಿರುವ ಹಾಗೂ ಅಗ್ಗದ ಅಕ್ಕಿ ಒದಗಿಸಲು ಬೆಲೆಗಳನ್ನು ಕೆಳಮಟ್ಟದಲ್ಲಿರಿಸಿರುವ ರಾಜ್ಯಗಳಲ್ಲಿ ರಾಜ್ಯ ಸರ್ಕಾರಗಳು ಇದರಿಂದ ಹೆಚ್ಚಿನ ಹೊರೆ ಹೊರಬೇಕಾಗಿದ್ದು ಆ ಸರಕಾರಗಳಿಗೆ ಅವನ್ನು ಹೊರಲು ಸಾಧ್ಯವಾಗುವುದಿಲ್ಲ.

ವಾಜಪೇಯಿ ಸರಕಾರ ಯೂರಿಯಾ ಗೊಬ್ಬರದ ಬೆಲೆಗಳನ್ನು ಚೀಲಕ್ಕೆ 17 ರೂ. ಗಳಂತೆ ಹಾಗೂ ಅಡುಗೆ ಅನಿಲದ ಬೆಲೆಯನ್ನು ಸಿಲಿಂಡರಿಗೆ 14 ರೂ. ನಂತೆ ಏರಿಸಿದೆ. ಇವು ಜನಗಳು ಎಲ್ಲಾ ಸರಕುಗಳ ಬೆಲೆಗಳಲ್ಲಿ ಸರ್ವತೋಮುಖ ಏರಿಕೆಗಳಿಂದ ಈಗಾಗಲೇ ನರಳುತ್ತಿರುವ ಜನಗಳ ಮೇಲೆ ಮಾಡಿರುವ ಒಂದು ಅತ್ಯಂತ ದುಷ್ಟ ದಾಳಿ. ಈ ರಾಕ್ಷಸೀ ಕ್ರಮದಿಂದ ಬಿಜೆಪಿ ನೇತೃತ್ವದ ಸರಕಾರ ತನ್ನ ಪ್ರತಿಗಾಮಿ ಮುಖವನ್ನು ತೋರಿಸಿದೆ".



ನ್ಯೂ ದೆಹಲಿಯಲ್ಲಿ ಹಣಕಾಸು ಸಚಿವಾಲಯದ ಎದುರು ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತರು ಫೆಬ್ರವರಿ 3 ರಂದು ಪ್ರತಿಭಟನೆ ನಡೆಸಿದರು

ಕಳೆದ ಬಜೆಟ್‌ನಲ್ಲಿ ಆಹಾರದ ನೆರವು ಧನ(ಸಬ್ಸಿಡಿ)ಕ್ಕೆಂದು 9000 ಕೋಟಿ. ರೂ. ಅಂದಾಜು ಮಾಡಲಾಗಿತ್ತು. ಆದರೆ ಅದು ಈಗ 10500 ಕೋಟಿ ರೂ.ಗಳಿಗೆ ಏರಿದೆ ಎಂದು ಅಂದಾಜು ಮಾಡಿರುವುದರಿಂದ ಈ ಬಜೆಟ್ ಕೊರತೆ ಏರಿಕೆಯುನ್ನು ತಗ್ಗಿಸಲು ಪಡಿತರ ವ್ಯವಸ್ಥೆಯಲ್ಲಿ ಅಕ್ಕಿ, ಗೋಧಿ, ಸಕ್ಕರೆಗಳ ಬೆಲೆ ಏರಿಸಬೇಕಾಯಿತು ಎಂಬುದು ಹಿಂದಿನ ಕಾಂಗ್ರೆಸ್ ಸರಕಾರದಂತೆ ಈಗಿನ ಬಿಜೆಪಿ ನೇತೃತ್ವದ ಸರಕಾರದ ಸಮರ್ಥನೆ. ಯೂರಿಯಾ, ಅಡುಗೆ ಅನಿಲ ಬೆಲೆ ಏರಿಕೆಗೂ ಈ ಸಬ್ಸಿಡಿಯುದೇ ಸಮರ್ಥನೆ.

ಆದರೆ ಬಜೆಟ್ ಕೊರತೆ ಏರಿಸುವುದು ರೈತರಿಗೆ ಹೆಚ್ಚಿನ ಬೆಲೆ ಕೊಟ್ಟದ್ದರಿಂದ ಆಗಿರುವ ಆಹಾರ ನೆರವು ಧನದ ಹೆಚ್ಚಳದಿಂದ ಮಾತ್ರವೇ ಅಲ್ಲ. ವಾಸ್ತವವಾಗಿ ಇದರ ಪ್ರಮಾಣ ನಗಣ್ಯವೆನ್ನಬಹುದು. ರಿಝರ್ವ್ ಬ್ಯಾಂಕ್ ಪ್ರಕಟಿಸಿದ ಇತ್ತೀಚಿನ ಅಂಕೆ-ಸಂಖ್ಯೆಗಳನ್ನು ನೋಡಿ -

	1998-1999 ಬಜೆಟ್ ಅಂದಾಜು	ಏಪ್ರಿಲ್-ಅಕ್ಟೋಬರ್‌ನಲ್ಲಿ ನಿಜವಾಗಿ ಆದದ್ದು
ರೆವಿನ್ಯೂ ಖರ್ಚು	15.0	28.5
ರೆವಿನ್ಯೂ ಆದಾಯ	17.0	11.7
ಒಟ್ಟು ಖರ್ಚು	13.9	29.0
ತೆರಿಗೆ ಆಮದು	17-8	8.6
ಕೈಗಾರಿಕಾ ಉತ್ಪಾದನೆ	10 ರಿಂದ 11	3.6
ಹಣಕಾಸು ಕೊರತೆ	5.6	ಸುಮಾರು 7
ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ	6.5 ರಿಂದ 7	6 ಕ್ಕಿಂತ ಕಮ್ಮಿ

ಮೇಲಿನ ಕೋಷ್ಟಕದಿಂದ ಕಾಣುವಂತೆ ಖರ್ಚಿನ ಬಾಬ್ತುಗಳೆಲ್ಲಾ ದ್ವಿಗುಣಗೊಂಡಿವೆ. ಆದಾಯದ ಬಾಬ್ತೆಲ್ಲಾ ಅರ್ಧಕ್ಕಿಳಿದಿದೆ. ಬಜೆಟ್ಟಿನಲ್ಲೇ ಸಿರಿವಂತರಿಗೆ 9000 ಕೋಟಿ ರೂ.ಗಳ ರಿಯಾಯ್ತಿಯ ನಂತರವೂ ತೆರಿಗೆ ಆದಾಯ ಅರ್ಧಕ್ಕಿಳಿದಿದೆ ಏಕೆ?

ಹಲವು ಕಾರಣಗಳಿಂದಾಗಿ ಹೀಗಾಗಿದೆ ಎಂಬುದು ತಜ್ಞರ ವಿಶ್ಲೇಷಣೆ. ಖರ್ಚು ದ್ವಿಗುಣಗೊಳ್ಳಲು ಮುಖ್ಯ ಕಾರಣಗಳಲ್ಲೊಂದು ಪರಮಾಣು ಪರೀಕ್ಷಣೆ ಹಾಗೂ ಅದರಿಂದ ಹೆಚ್ಚಿರುವ ಖರ್ಚು, ಜತೆಗೆ ಸರಕಾರದ ಅರಾಜಕ ಆರ್ಥಿಕ ನಿರ್ಣಯಗಳೂ ಇದಕ್ಕೆ ತಮ್ಮ 'ಕೊಡುಗೆ' ನೀಡಿವೆ. ಕಳೆದ ಏಪ್ರಿಲ್ 1ರಿಂದ ಡಿಸೆಂಬರ್ 8 ರ ವರೆಗೆ ಈ ಸರಕಾರ ಪ್ರತಿದಿನ 319 ಕೋಟಿ ರೂ. ಸಾಲ ತಂದಿದೆ. ಈ ಎಲ್ಲಾ ಸಾಲಗಳಿಗೆ ಅದು ತೆರಬೇಕಾದ ಬಡ್ಡಿ 75000 ಕೋಟಿ ರೂ.ಗಳು ಎಂದು ಅಂದಾಜು ಮಾಡಲಾಗಿತ್ತು. ಈಗ ಅದು ಇನ್ನಷ್ಟು ಹೆಚ್ಚಿದೆ.

ಬಜೆಟ್ ಕೊರತೆ ಇಳಿಸಲು ಒಂದೋ ಆದಾಯ ಹೆಚ್ಚಿಸಬೇಕು ಅಥವಾ ಖರ್ಚು ಇಳಿಸಬೇಕು. ಆದಾಯ ಹೆಚ್ಚಿಸಬೇಕಾದರೆ ತೆರಿಗೆ ತೆರುವ ಸಾಮರ್ಥ್ಯ ಇರುವವರಿಂದ ಅದನ್ನು ವಸೂಲು ಮಾಡಬೇಕು. ಬದಲು ಸರಕಾರ ಕಳೆದ ಬಜೆಟ್ಟಿನಲ್ಲಿ ಸಿರಿವಂತರಿಗೆ 9000 ಕೋಟಿ ರೂ. ರಿಯಾಯ್ತಿಯನ್ನೇ ನೀಡಿತ್ತು. ಈ ಬಾರಿಯೂ ಸಿರಿವಂತರ ಮೇಲಿನ ನೇರ ತೆರಿಗೆಗಳನ್ನು ಏರಿಸುವುದಿಲ್ಲ ಎಂದು ಪರೋಕ್ಷವಾಗಿ ಹಣಕಾಸು ಮಂತ್ರಿಗಳು ಭರವಸೆಯನ್ನು ನೀಡಿದ್ದಾರೆ. ಇನ್ನು ಖರ್ಚಿನಲ್ಲಿ 75% ರಷ್ಟು ಹಿಂದಿನ ಸಾಲಗಳ ಮರುಪಾವತಿ ಮತ್ತು ಬಡ್ಡಿಗೆ ಹೋಗುತ್ತದೆ. ಇದನ್ನು ಇಳಿಸುವಂತಿಲ್ಲ. ಅಂದರೆ ಉಳಿದ 25% ದಲ್ಲಿ ಮಾತ್ರವೇ ಕಡಿತ ಮಾಡಬೇಕು. ಈ 25% ದಲ್ಲೇ ಶಿಕ್ಷಣ, ಆರೋಗ್ಯ, ಆಹಾರ ಇತ್ಯಾದಿಗಳು ಬರುತ್ತವೆ. ಬಿಜೆಪಿ ಸರಕಾರ ಇದನ್ನೇ ಮಾಡಹೊರಟಿದೆ. ಸಿರಿವಂತರಿಗೆ ಆಗಲೇ 9000 ಕೋಟಿ ರೂ.ಗಳಷ್ಟು ರಿಯಾಯ್ತಿ ನೀಡಿರುವ ಸರಕಾರ ಆಹಾರ ಸಬ್ಸಿಡಿಯಲ್ಲಿ 1500 ಕೋಟಿ ರೂ.ನಷ್ಟು ಹೆಚ್ಚಳವನ್ನು ಸಹಿಸಿಕೊಳ್ಳಲು ಸಿದ್ಧವಿಲ್ಲ! ಅದನ್ನು ತುಂಬಲು ಪಡಿತರ ಬೆಲೆಗಳನ್ನು ಏರಿಸಿ 2900 ಕೋಟಿ ರೂ. ಗಳಷ್ಟು ಸಬ್ಸಿಡಿ ಉಳಿಸಲು ಪ್ರಯತ್ನಿಸಿದೆ. ತನ್ನ ಮಿತ್ರ ಪಕ್ಷಗಳನ್ನು ತಣ್ಣಗೆ ಮಾಡಲು ಕೈಗೊಂಡ ನಿರ್ಧಾರದ ನಂತರವೂ ಈ ಸಬ್ಸಿಡಿ ಉಳಿತಾಯ 2200 ಕೋಟಿ ರೂ. ಅಂದರೆ ಇದು ಯಾರಿಗಾಗಿ ಇರುವ ಸರಕಾರ ಎಂಬುದು ಸ್ಪಷ್ಟವಾಗುತ್ತದಲ್ಲವೇ?

"ರಸಗೊಬ್ಬರಗಳ ಮೇಲೆ ಸಬ್ಸಿಡಿ ಇಳಿಸಿ ಆದರಿಂದ ಕೃಷಿ ಉತ್ಪಾದನಾ ಖರ್ಚು ಹೆಚ್ಚಿದರೆ ರೈತರಿಂದ ಅವನ್ನು ಕೊಳ್ಳುವ ಬೆಲೆಯನ್ನು ಹೆಚ್ಚಿಸಿ, ಆದರಿಂದ ಹೆಚ್ಚುವ ಖರ್ಚನ್ನು, ಜತೆಗೆ ಅದನ್ನು ಸಾಗಿಸುವ, ದಾಸ್ತಾನು ಮಾಡುವ ಖರ್ಚಿನ ಆಗುವ ಹೆಚ್ಚಳವನ್ನು ಸಂಪೂರ್ಣವಾಗಿ ಬಳಕೆದಾರರ ಹೆಗಲಿಗೇ ದಾಟಿಸಿ"- ಇದು ಐಎಂಎಫ್-ವಿಶ್ವಬ್ಯಾಂಕ್‌ನ ಆದೇಶ. ಆಹಾರ ಸಬ್ಸಿಡಿ ಏರಿಕೆ ಮಾತ್ರ ಯಾವುದೇ ಕಾರಣಕ್ಕೂ ಸಲ್ಲ - ಇದು ನಮ್ಮ ಬಿಜೆಪಿ ಆಳರಸರಿಗೆ ವೇದವಾಕ್ಯ - 'ಸ್ವದೇಶಿ' ಯೆಲ್ಲಾ ಅಧಿಕಾರಕ್ಕೆ ಬರಲು ಮಾತ್ರ.

1991 ರಲ್ಲಿ ನರಸಿಂಹರಾಯರ ಕಾಂಗ್ರೆಸ್ ಸರಕಾರ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ಹೊಸ ಆರ್ಥಿಕ ನೀತಿಗಳನ್ನು ಆರಂಭಿಸಿದಾಗ ಬಿಜೆಪಿ ಅಧ್ಯಕ್ಷರು ಕಾಂಗ್ರೆಸ್ ತಮ್ಮ ನೀತಿಗಳನ್ನು ಅಂಗೀಕರಿಸಿದೆ ಎಂದರು ಹೆಮ್ಮೆಯಿಂದ. ಆದರೆ ಆಗಲೇ ಜನ-ಪರ ಮನೋಭಾವದ ಆರ್ಥಿಕ ತಜ್ಞರು ಎಚ್ಚರಿಸಿದ್ದು - *"ನಾವೀಗ ರೈತರಿಂದಕೊಳ್ಳುವ ಬೆಲೆಗಳು ಹಾಗೂ ಬಳಕೆದಾರರಿಂದ ವಸೂಲು ಮಾಡುವ ಬೆಲೆಗಳು ಸದಾ ಏರುವ, ಆದಕ್ಕೆ 'ಸಹಾನುಭೂತಿ' ತೋರಿ ಬಹಿರಂಗ ಮಾರುಕಟ್ಟೆಯ ಬೆಲೆಗಳೂ ಏರುತ್ತಲೇ ಇರುವ, ಈ ಮೂಲಕ ಖಾಸಗೀ ವ್ಯಾಪಾರಸ್ಥರಿಂದ ಆಹಾರ ಧಾನ್ಯಗಳ ಕಳ್ಳ ದಾಸ್ತಾನಿಗೆ ಅವಕಾಶ ಕಲ್ಪಿಸುವ ಒಂದು ಯುಗವನ್ನು ಪ್ರವೇಶಿಸುತ್ತಿದ್ದೇವೆ"* ಎಂದಿದ್ದರು. ಅದೀಗ ನಿಜವಾಗಿದೆ. ಬಿಜೆಪಿ-ನೇತೃತ್ವದ ಸರಕಾರದ ಪಡಿತರ ಬೆಲೆಯೇರಿಕೆಯ ಸಮರ್ಥನೆಯ ಹಿಂದಿರುವ ವರ್ಗಗುಣವನ್ನು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು. ○

ಸರಕಾರ ವಿಫಲತೆ ಬಜೆಟ್ ಕೊರತೆ ಹೆಚ್ಚಿಸಿದರೆ ಬಡ ಜನಗಳೇಕೆ ಬೆಲೆತೆರಬೇಕು? - ಸಿಐಟಿಯು ಪ್ರಶ್ನೆ

ಜನವರಿ 30 ರಂದು ಸಿಐಟಿಯು ಕೇಂದ್ರ ಕಾರ್ಯದರ್ಶಿ ಮಂಡಳಿ ನೀಡಿದ ಹೇಳಿಕೆ

ಬಜೆಟ್‌ನ ಎರಡು ವಾರಗಳ ಮೊದಲಷ್ಟೇ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಆಹಾರ ಧಾನ್ಯಗಳ ಮತ್ತು ಸಕ್ಕರೆ ಬೆಲೆಗಳಲ್ಲಿ ಅಪಾರ ಏರಿಕೆ ಹಾಗೂ ಯೂರಿಯಾ ಬೆಲೆಗಳಲ್ಲೂ ಏರಿಕೆಯನ್ನು ಇದ್ದಕ್ಕಿದ್ದಂತೆ ಮಾಡಿರುವುದನ್ನು ಕಂಡು ಸಿಐಟಿಯುಗೆ ಅಘಾತವಾಗಿದೆ. ಇದನ್ನು ಸಿಐಟಿಯು ಖಡಾಖಂಡಿತವಾಗಿ ಖಂಡಿಸುತ್ತದೆ ಹಾಗೂ ಏರಿಕೆಗಳನ್ನೆಲ್ಲಾ ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕು ಎಂದು ಸರಕಾರವನ್ನು ಆಗ್ರಹಪಡಿಸುತ್ತದೆ.

ಕಳೆದ ಒಂದು ವರ್ಷದಲ್ಲಿ ಭಾರತೀಯ ಆರ್ಥಿಕವನ್ನು ಅತ್ಯಂತ ಶೋಚನೀಯ ರೀತಿಯಲ್ಲಿ ನಿರ್ವಹಿಸಿರುವುದರಿಂದ ಉಂಟಾದ ಬಜೆಟ್ ಕೊರತೆಗಳ ಹೊರೆಯನ್ನು ಬಡಜನರು ಹೊರುವುದಿಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಸಿಐಟಿಯು ನೆನಪಿಸುತ್ತದೆ. ಆರ್ಥಿಕ ಕುಸಿದು ಬಿದ್ದಿದೆ, ರೆವಿನ್ಯೂ ಆದಾಯ ತೀವ್ರವಾಗಿ ಇಳಿಮುಖಗೊಂಡಿದೆ, ರಫ್ತು ಗುರಿ ಸಾಧನೆ ಅಸಾಧ್ಯವೆನ್ನುವಂತಾಗಿದೆ. ಇದರಿಂದ ಆದಾಯ ಮತ್ತು ಖರ್ಚಿನ ನಡುವೆ ದೊಡ್ಡ ಕಂದರ ಏರ್ಪಟ್ಟಿದೆ. ದೊಡ್ಡ ದೊಡ್ಡ ಮಾತುಗಳನ್ನಾಡುವ ಹಣಕಾಸು ಮಂತ್ರಿಗಳಿಗೆ ತನ್ನ ಕೆಲಸ ನಿರ್ವಹಿಸಲಾಗುತ್ತಿಲ್ಲ, ಜನಗಳಿಗೆ 'ಚೆನ್ನಾಗಿದೆ ಎಂದು ಭಾವಿಸಿ' ಎಂದಷ್ಟೇ ಹೇಳಬಲ್ಲರು. ಈಗ ಸರಕಾರದ ಖರ್ಚುಗಳನ್ನು ಸರಿಹೊಂದಿಸಲು ಅವರಿಗೆ ದಟ್ಟದರಿದ್ರರೇ ಸುಲಭದ ಗುರಿಯಾಗಿಬಿಟ್ಟಿದ್ದಾರೆ. ಚರಿತ್ರೆಯಲ್ಲೇ ಪಡಿತರ ವಸ್ತುಗಳ ಅತ್ಯಂತ ಹೆಚ್ಚು ಬೆಲೆಯೇರಿಕೆ ಮಾಡಿದ್ದಾರೆ.

ಬಡತನದ ರೇಖೆಯ ಕೆಳಗಿರುವ ಜನಗಳಿಗೆ ಆಹಾರಧಾನ್ಯಗಳಿಗೆ ನೀಡುವ ಸಬ್ಸಿಡಿಯನ್ನು ಕೂಡಾ ಹಿಂತೆಗೆದುಕೊಳ್ಳಬೇಕೆಂಬ ಐಎಂಎಫ್‌ನ ಸತತ ಒತ್ತಡಕ್ಕೆ ಈ ಸರಕಾರ ಕುಸಿದಿರುವುದು ಇನ್ನಷ್ಟು ಖಂಡನೀಯ. ಇದು ವಾಸ್ತವಿಕವಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಾಶ ಮಾಡುತ್ತದೆ.

ಕಳೆದ ಬಜೆಟ್‌ನಲ್ಲಿ ಮಾಡಿದ್ದ ಯೂರಿಯಾ ಬೆಲೆ ಏರಿಕೆಯನ್ನು ಎಲ್ಲಾ ಪಕ್ಷಗಳು, ಮಿತ್ರ ಪಕ್ಷಗಳು ಮತ್ತು ಪ್ರತಿಪಕ್ಷಗಳು ಎಲ್ಲರೂ ವಿರೋಧಿಸಿದ್ದರಿಂದ ಹಿಂತೆಗೆದುಕೊಳ್ಳಲಾಗಿತ್ತು. ಈಗ ಮುಂದಿನ ಬಜೆಟ್ಟಿನ ಕೇವಲ ಒಂದು ತಿಂಗಳ ಮೊದಲು ಇಂತಹುದೇ ವಿರೋಧವನ್ನು ಮನಗಂಡು ಬಿಜೆಪಿ ಪಕ್ಷದ ಪ್ರಧಾನ ಮಂತ್ರಿ ಸಂಸತ್ತನ್ನು ತಪ್ಪಿಸಿ ಮಾತ್ರವಲ್ಲ, ಸರಕಾರದಲ್ಲಿರುವ ತನ್ನ ಮಿತ್ರರನ್ನೂ ತಪ್ಪಿಸಿ ಇಂತಹ ತೀವ್ರ ಕ್ರಮ ಕೈಗೊಂಡಿದ್ದಾರೆ. ಅವರು ಸಂಸದೀಯ ವ್ಯವಸ್ಥೆಯನ್ನೇ ನಾಶ ಮಾಡಹೊರಟಿದ್ದಾರೆ.

ಈ ಏರಿಕೆಯನ್ನು ತಕ್ಷಣವೇ ಹಿಂತೆಗೆದುಕೊಳ್ಳದಿದ್ದರೆ ಅದು ಹಣದುಬ್ಬರದ ಬೆಂಕಿಗೆ ತುಪ್ಪ ಸುರಿಯುತ್ತದೆ, ಕೃಷಿ ಉತ್ಪಾದನೆಗೆ ಧಕ್ಕೆ ತರುತ್ತದೆ, ಇವೆಲ್ಲದರ ಒಟ್ಟು ಪರಿಣಾಮವಾಗಿ ಕೈಗಾರಿಕೆಯ ಮೇಲೆ ಪ್ರತಿಕೂಲ ಪ್ರಭಾವ ಬಿದ್ದು ಉದ್ಯಮದಲ್ಲಿನ ಚೇತರಿಕೆ ದೂರದ ಕನಸಾಗುತ್ತದೆ.

ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು, ಪ್ರಜಾಪ್ರಭುತ್ವವಾದೀ ಸಂಘಟನೆಗಳು ಈ ಬೆಲೆಯೇರಿಕೆಗಳ ವಿರುದ್ಧ ಚಳುವಳಿಗಳನ್ನು ಸಂಘಟಿಸಿ ಸರಕಾರ ಅದನ್ನು ಹಿಂತೆಗೆದುಕೊಳ್ಳುವಂತೆ - ಮಾಡಬೇಕು ಎಂದು ಸಿಐಟಿಯು ಕರೆ ನೀಡುತ್ತದೆ.

ಫೆಬ್ರವರಿ 2 ರಂದು ಸಿಐಟಿಯು ನೀಡಿದ ಹೇಳಿಕೆ

ಸಿಐಟಿಯು ಅಕ್ಕಿ, ಗೋಧಿ ಮತ್ತು ಸಕ್ಕರೆಯಂತಹ ಪಡಿತರ ಸರಕುಗಳ ಹಾಗೂ ಇದ್ದಕ್ಕಿದ್ದಂತೆ ಅಡುಗೆ ಅನಿಲದ ವಿಪರೀತ ಬೆಲೆಯೇರಿಕೆಯ ವಿರುದ್ಧ ದೇಶದೆಲ್ಲೆಡೆ ಫೆಬ್ರವರಿ 9 ರಂದು ಪ್ರತಿಭಟನಾ ದಿನ ಆಚರಿಸಬೇಕೆಂಬ ಎಡಪಕ್ಷಗಳ ನಿರ್ಣಯವನ್ನು ಸ್ವಾಗತಿಸುತ್ತದೆ. ಈ ಬೆಲೆಯೇರಿಕೆಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕುಸಿಯುವಂತೆ ಮಾಡುತ್ತವೆ.

ಈ ಬೆಲೆಯೇರಿಕೆ ಅನಗತ್ಯವಾಗಿತ್ತು. ಇದು ಎಲ್ಲಾ ದುಡಿಯುವ ವರ್ಗದ ಜನ ವಿಭಾಗಗಳನ್ನು ಹಾಗೂ ಜನಸಾಮಾನ್ಯರನ್ನು ತಟ್ಟುತ್ತದೆ. ಬಿಜೆಪಿ ಸರಕಾರ ಆರ್ಥಿಕವನ್ನು ಸರಿಯಾಗಿ ನಿರ್ವಹಿಸುವಲ್ಲಿ ಸೋತಿರುವುದರಿಂದ ಹೀಗಾಗಿದೆ.

ವಿಭಿನ್ನ ರಾಜ್ಯಗಳಲ್ಲಿ ಮುಷ್ಕರವೂ ಸೇರಿದಂತೆ ವಿಭಿನ್ನ ಕಾರ್ಯಾಚರಣೆಗಳನ್ನು ಸಂಘಟಿಸಲಾಗುತ್ತಿದೆ. ದೇಶಾದ್ಯಂತ ಸಂಘಟಿಸಲಾಗಿರುವ ಈ ಎಲ್ಲಾ ಪ್ರಜಾಸತ್ತಾತ್ಮಕ ಕಾರ್ಯಾಚರಣೆಗಳಲ್ಲಿ ಭಾಗವಹಿಸಬೇಕು, ಪ್ರಚಾರ-ಪ್ರಕ್ಷೋಭೆಗಳನ್ನು ನಡೆಸಬೇಕು ಎಂದು ಎಲ್ಲಾ ಕಾರ್ಮಿಕ ಸಂಘಗಳಿಗೆ ಸಿಐಟಿಯು ಕರೆ ನೀಡುತ್ತದೆ.

ಜನ-ವಿರೋಧಿ ಮುಖವನ್ನು ಬಯಲಿಗೆಳೆದಿದೆ

ಅಖಿಲ ಭಾರತ ಕಿಸಾನ್ ಸಭಾ ಈ ಕೆಳಗಿನ ಹೇಳಿಕೆ ನೀಡಿದೆ

ಸಂಸತ್ತಿನ ಬಜೆಟ್ ಅಧಿವೇಶನದ ತುಸುವೇ ಮೊದಲು ಸರಕಾರದ ಈ ಕೃತ್ಯ ಅದರ ನಿಜವಾದ ಜನ-ವಿರೋಧಿ ಮುಖವನ್ನು ಬಯಲಿಗೆಳೆದಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಯಾವುದೇ ನಾಚಿಕೆಯಿಲ್ಲದೆ ಡಬ್ಲ್ಯು.ಟಿ.ಓ., ಐಎಂಎಫ್, ವಿಶ್ವಬ್ಯಾಂಕ್ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಆದೇಶಗಳಿಗೆ ಶರಣಾಗುತ್ತಿದೆ, ದೇಶದ ದೊಡ್ಡ ಬಂಡವಾಳಿಗರು, ಲಾಭಕೋರರು, ದಾಸ್ತಾನುಗಾರರು ದೊಡ್ಡ ರೈತರ ರಾಗಕ್ಕೆ ತಾಳ ಹಾಕುತ್ತಿದೆ. ಈ ಜನಗಳ ಒಳಿತಿನ ಬಗ್ಗೆ ಅದಕ್ಕೆ ಏನೇನೂ ಆತಂಕವಿಲ್ಲ. ಎಲ್ಲಾ ಪ್ರಜಾಪ್ರಭುತ್ವವಾದೀ ಸಂಘಟನೆಗಳು ಹಾಗೂ ವ್ಯಕ್ತಿಗಳು ಈ ರೀತಿಯ ಧಾಳಿಗಳನ್ನು ಐಕ್ಯತೆಯಿಂದ ಪ್ರತಿರೋಧಿಸಿ ಸರಕಾರದ ಜನ-ವಿರೋಧಿ ತಂತ್ರಗಳನ್ನು ಸೋಲಿಸಬೇಕು.

ಸಾರ್ವತ್ರಿಕ ಹರತಾಳಕ್ಕೆ

ಕೇರಳ ಎಲ್.ಡಿ.ಎಫ್. ಕರೆ

ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್.ಡಿ.ಎಫ್) ರಾಜ್ಯಾದ್ಯಂತ ಸಾರ್ವತ್ರಿಕ ಹರತಾಳ ನಡೆಸಲು ಕರೆ ನೀಡಿದೆ. ರಾಜ್ಯ ಸರಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ 200 ಕೋಟಿ ರೂ.ಗಳಿಗಿಂತಲೂ ಹೆಚ್ಚು ಖರ್ಚು ಮಾಡುತ್ತಿದ್ದು, ಈ ಜೀವನಾವಶ್ಯಕ ಸರಕುಗಳನ್ನು ಹಳೆಯ ಬೆಲೆಗಳಲ್ಲೇ ವಿತರಿಸಲು ಬೇಕಾಗುವ ಹೆಚ್ಚಿನ ಖರ್ಚನ್ನು ಭರಿಸುವ ಸ್ಥಿತಿಯಲ್ಲಿಲ್ಲ. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಈ ಜೀವನಾವಶ್ಯಕ ವಸ್ತುಗಳ ಬೆಲೆಗಳ ಏರಿಕೆಯನ್ನು ರದ್ದು ಮಾಡುವಂತೆ ಜನತೆ ಮತ್ತು ರಾಜ್ಯ ಸರಕಾರ ಒತ್ತಾಯತರಬೇಕು ಎಂದು ಎಲ್.ಡಿ.ಎಫ್. ಕರೆ ನೀಡಿದೆ.

ಮಿತ್ರ ಪಕ್ಷಗಳೂ ತತ್ತರಿಸಿದವು...

ಇದು ಅನೈತಿಕ. ಅವರು ಎಂದೂ ಈ ಬಗ್ಗೆ ನಮಗೆ ತಿಳಿಸಿರಲಿಲ್ಲ

- ಮಮತಾ ಬ್ಯಾನರ್ಜಿ

ಸಮನ್ವಯ ಸಮಿತಿಯ ಸಭೆಗೂ ಮುನ್ನ ಅಗತ್ಯ ವಸ್ತುಗಳ ಬೆಲೆ ಏರಿಸುವ ಅವಸರವಾದರೂ ಏನಿತ್ತು?

- ಜಯಲಲಿತಾ,

ಸರ್ಕಾರದ ಆರ್ಥಿಕ ಕೊರತೆ ನೀಗಿಸಿಕೊಳ್ಳಲು ಬೇರೆಯೇ ಮಾರ್ಗಗಳನ್ನು ಹುಡುಕಿಕೊಳ್ಳಬೇಕು

- ವೈಕೋ,
ಎಂ.ಡಿ.ಎಂ.ಕೆ. ಮುಖಂಡರು

ವಾಜಪೇಯಿ ಸರಕಾರ ದೇಶದ ಆರ್ಥಿಕ ನಿರ್ವಹಣೆಯಲ್ಲಿ ಸಂಪೂರ್ಣ ಸೋತಿದೆ. ಬಿಜೆಪಿ ನೇತೃತ್ವದ ಸರ್ಕಾರ ತನ್ನ ತಪ್ಪು ನೀತಿ, ದುರಾಡಳಿತದಿಂದಾಗಿ ಕಾಂಗ್ರೆಸ್ಸಿನ ಬಲವನ್ನು ಹೆಚ್ಚಿಸುತ್ತಿದೆ.

- ತೆಲುಗುದೇಶಂ ವಕ್ತಾರ


ತಕ್ಷಣ ಪಡಿತರ ಬೆಲೆ ಏರಿಕೆಗಳನ್ನು ಹಿಂತೆಗೆದುಕೊಳ್ಳದಿದ್ದರೆ ಬೆಂಬಲವನ್ನು ಹಿಂತೆಗೆದುಕೊಳ್ಳುತ್ತೇನೆ.


- ಓಂ ಪ್ರಕಾಶ್ ಚೌಟಾಲಾ
ಹರ್‍ಯಾಣಾ ಲೋಕದಳ ಮುಖಂಡ

ಬಿಜೆಪಿಯ ಮಿತ್ರ ಪಕ್ಷಗಳು ಮತ್ತೆ-ಮತ್ತೆ ಮುಖವುಳಿಸಿಕೊಳ್ಳುವ ಹೇಳಿಕೆಗಳನ್ನು ನೀಡುತ್ತಾರೆ, ಆದರೆ ಬಿಜೆಪಿ ಸರಕಾರದಿಂದ ದೂರವಿರಲು ಅಸಮರ್ಥರಾಗಿದ್ದಾರೆ. ಬಲವಾದ ನಿಲುವು ತಳೆಯಲು ಹೆದರುವಂತೆ ಕಾಣುವ ಮಿತ್ರಪಕ್ಷಗಳು ತಮ್ಮ ಜನಬೆಂಬಲ ಕಳೆದುಕೊಳ್ಳಲು ಸಿದ್ಧರಾಗಬೇಕಾಗುತ್ತದೆ.

- ಹರ್ಕಿಶನ್ ಸಿಂಗ್ ಸುರ್ಜಿತ್

ಕೋಮು ಸೌಹಾರ್ದತೆಗಾಗಿ ಮಂಗಳೂರಿನಲ್ಲಿ ಮಾನವ ಸರಪಳಿ





ಒಂದು ತಿಂಗಳ ಹಿಂದೆ ಕೋಮುವಾದಿಗಳ ಭಯೋತ್ಪಾದನೆಯಿಂದ ಆಘಾತಕ್ಕೆ ಒಳಗಾದ ದಕ್ಷಿಣ ಕನ್ನಡ ಜಿಲ್ಲೆಯ ಜನತೆಯಲ್ಲಿ ಸೌಹಾರ್ದತೆಯನ್ನು ಆತ್ಮವಿಶ್ವಾಸವನ್ನೂ ಮೂಡಿಸುವ ಉದ್ದೇಶದಿಂದ, ವಿವಿಧ ಜಾತ್ಯಾತೀತ ಸಂಘಟನೆಗಳು ಒಟ್ಟಿಗೆ ಸೇರಿ ರಚಿಸಲಾದ 'ಕೋಮುವಾದ ವಿರೋಧಿ ವೇದಿಕೆ, ಮಂಗಳೂರು' ಇದರ ಆಶ್ರಯದಲ್ಲಿ ಜನವರಿ 30 ರಂದು ಮಂಗಳೂರು ನಗರದಲ್ಲಿ ಬೃಹತ್ ಮಾನವ ಸರಪಳಿಯನ್ನು ರಚಿಸಲಾಯಿತು. ಸಾಂಕೇತಿಕವಾಗಿ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಪೂಜಾಸ್ಥಳಗಳನ್ನು ಜೋಡಿಸುವಂತೆ ರಚಿಸಲಾದ ಮಾನವ ಸರಪಳಿಯು ಬಾವುಟಗುಡ್ಡೆಯ ಈದ್ಗಾ ಮಸೀದಿಯ ಮುಂದಿನಿಂದ ಆರಂಭವಾಗಿ, ಮಿಲಾಗ್ರಿಸ್ ಚರ್ಚಿನ ಮೂಲಕ ಸಾಗಿ, ಶರವು ಗಣಪತಿ ದೇವಾಲಯದಿಂದಾಗಿ ಮುಂದುವರಿಯಿತು. ಅಪರಾಹ್ನ 3.30 ಕ್ಕೆ ಸಾವಿರಗಟ್ಟಲೆ ಜನರು ಪರಸ್ಪರ ಕೈಜೋಡಿಸಿ ರಚಿಸಲಾದ ಮಾನವ ಸರಪಳಿಯು 3.45 ರ ವರೆಗೆ ಮುಂದುವರಿದು, ಕೋಮು ಸೌಹಾರ್ದತೆಯ ಪ್ರತಿಜ್ಞೆಯನ್ನು ಸ್ವೀಕರಿಸಲಾಯಿತು.

ಡಿವೈಎಫ್ಐ, ಯುವ ಕಾಂಗ್ರೆಸ್, ಯುವ ಜನತಾದಳ, ಎಐವೈಎಫ್, ದಲಿತ ಸಂಘರ್ಷ ಸಮಿತಿ, ಸರ್ವ ಕಾಲೇಜು ವಿದ್ಯಾರ್ಥಿ ಸಂಘ, ಸರ್ವ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ಸಂಘ, ಎಸ್ಎಫ್ಐ, ಎನ್.ಎಸ್.ಯು.ಐ., ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಮಹಿಳಾ ಒಕ್ಕೂಟ, ಜನವಾದಿ ಮಹಿಳಾ ಸಂಘಟನೆ, ಸಿಐಟಿಯು, ಐಎನ್‌ಟಿಯುಸಿ, ಎಚ್‌ಎಂಎಸ್, ಎಐಟಿಯುಸಿ, ಅಮುಕ್ತ್, ವಿಚಾರವಾದಿ ಸಂಘ, ಶಿಕ್ಷಕೇತರರ ಸಂಘ, ಗ್ರಾಮ ಪಂಚಾಯತ್ ನೌಕರರ ಸಂಘ, ವಿಮಾ ನೌಕರರ ಸಂಘ, ದ.ಕ.ಜಿಲ್ಲಾ ಮಾಧ್ಯಮ ಒಕ್ಕೂಟ ಮೊದಲಾದ ಸಂಘಟನೆಗಳು ಸಂಘಟಿಸಿದ ಈ ಮಾನವ ಸರಪಳಿಯಲ್ಲಿ ಕರ್ನಾಟಕದ ಕಾನೂನು ಸಚಿವ ಶ್ರೀ ಎಂ.ಸಿ.ನಾಣಯ್ಯ, ಮಾಜಿ ಕಾನೂನು ಸಚಿವ ಬ್ಲೇಸಿಯನ್ ಡಿ'ಸೋಜಾ, ಸಾಹಿತಿಗಳಾದ ರಂಜಾನ್ ದರ್ಗಾ, ಸಿ.ಎನ್.ರಾಮಚಂದ್ರನ್, ಮಂಗಳೂರು ಮಹಾನಗರ ಪಾಲಿಕೆಯ ಮೇಯರ್ ಶ್ರೀಮತಿ ಹಿಲ್ಡಾ ಆಳ್ವ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್. ಶ್ರೀಯಾನ್ ಮತ್ತು ಬಿ.ಮಾಧವ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಿ.ಕೆ. ಕೃಷ್ಣಪ್ಪ, ಜನತಾ ದಳದ ಜಿಲ್ಲಾ ಅಧ್ಯಕ್ಷ ಎಂ.ಬಿ. ಸದಾಶಿವ, ಡಿವೈಎಫ್ಐ ಮುಖಂಡರಾದ ಕೃಷ್ಣಪ್ಪ ಕೊಂಚಾಡಿ, ಯಾದವಶೆಟ್ಟಿ, ರಾಮದಾಸ್, ಎಸ್ಎಫ್ಐನ ಹರಿಪ್ರಸಾದ್ ರೈ, ಎಐಐಇಎಯ ಎ.ಎಸ್.ಆಚಾರ್ಯ, ನಾಗೇಶ್ ಕುಮಾರ್, ಬಿಇಎಫ್ಐ ಯ ಬಿ.ಎಂ.ಮಾಧವ, ಯುವಕಾಂಗ್ರೆಸ್ ಜಿಲ್ಲಾಧ್ಯಕ್ಷ ಕಳ್ಳಿಗೆ ತಾರಾನಾಥ ಶೆಟ್ಟಿ, ಯುವ ಜನತಾದಳದ ಐವನ್‌ಡಿಸೋಜ, ಇಂಟಕ್‌ನ ಸದಾಶಿವ ಶೆಟ್ಟಿ, ಜನವಾದಿ ಮಹಿಳಾ ಸಂಘಟನೆಯ ಕುಮಾರಿ ವಾಣಿ ಉಚ್ಚಿಲ್, ಸಿಐಟಿಯುವಿನ ಜೆ.ಬಾಲಕೃಷ್ಣ ಶೆಟ್ಟಿ, ಯು.ಪಿ.ಲೋಕಯ್ಯ, ಸುಕುಮಾರ್, ವಸಂತ ಆಚಾರಿ ಮೊದಲಾದವರು ಭಾಗವಹಿಸಿದ್ದರು.

ಪ್ರತಿಜ್ಞಾ ಸ್ವೀಕಾರದ ನಂತರ ಮಾನವ ಸರಪಳಿಯು ಮೆರವಣಿಗೆಯಾಗಿ ಪರಿವರ್ತನೆಗೊಂಡು ನಗರದ ಮುಖ್ಯ ಬೀದಿಗಳ ಮೂಲಕ ಸಾಗಿ, ನೆಹರೂ ಮೈದಾನದಲ್ಲಿ ಸಾರ್ವಜನಿಕ ಸಭೆಯಲ್ಲಿ ಸಮಾಪನ ಗೊಂಡಿತು.

ಸಾಹಿತಿ, ಪ್ರೊಫೆಸರ್ ಸಿ.ಎನ್. ರಾಮಚಂದ್ರನ್ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಮುಖ್ಯ ಭಾಷಣಕಾರರಾಗಿ ಸಾಹಿತಿ ರಂಜಾನ್ ದರ್ಗಾ ಅವರು ಮಾತನಾಡುತ್ತಾ, ಭಾರತದಲ್ಲಿ 5000 ವರ್ಷಗಳಿಂದ ಬೆಳೆದು ಬಂದ ಕೋಮು ಸೌಮರಸ್ಯದ ಭವ್ಯ ಪರಂಪರೆಯನ್ನು ವಿವರಿಸುತ್ತಾ, ಬೈಬಲ್, ಕುರಾನ್, ಋಗ್ವೇದ, ಮಹಾಭಾರತ ಇತ್ಯಾದಿ ಗ್ರಂಥಗಳಿಂದ ಅನೇಕ ಉದಾಹರಣೆಗಳನ್ನು ನೀಡಿದರು. ಕೋಮುಗಲಭೆಗಳಲ್ಲಿ ಬಡವರು ಮತ್ತು ಕೂಲಿಕಾರರು ಸಾಯುತ್ತಾರೆಯೇ ಹೊರತು, ಉದ್ರೇಕಕಾರಿ ಭಾಷಣ ಬಿಗಿದು ಕಾರುಗಳಲ್ಲಿ ಹೊರಟು ಹೋಗುವ ಕೋಮುವಾದಿ ಪುಡಾರಿಗಳಿಗೆ ಏನೂ ಆಗುವುದಿಲ್ಲ ಎಂದು ಎತ್ತಿ ತೋರಿಸಿದ ಸಭಾಧ್ಯಕ್ಷ ಸಿ.ಎನ್. ರಾಮಚಂದ್ರನ್ ಅವರು, ಕೋಮುವಾದಿಗಳ ವಿಧ್ವಂಸಕ ಕೃತ್ಯಗಳ ಕುರಿತು ಜನರು ಜಾಗೃತರಾಗಿರ ಬೇಕೆಂದು ಕರೆ ನೀಡಿದರು.

ಪ್ರಾರಂಭದಲ್ಲಿ ಕೆ.ಯಾದವ ಶೆಟ್ಟರು ಸ್ವಾಗತಿಸಿದರು. ರಹೀಂ ಉಚ್ಚಿಲ್ ಅವರು ವಂದಿಸಿದರು.

ಧಾರವಾಡದಲ್ಲಿ ಸೌಹಾರ್ದತಾ ಆಂದೋಲನ

ಪ್ರಸಕ್ತ ಕೋಮುವಾದದ ದಳ್ಳುರಿ ಮತ್ತೆ ಭುಗಿಲೆದ್ದಿರುವಾಗ, ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ವಿವಿಧ ಜಾತಿ, ಮತ, ಧರ್ಮ, ಭಾಷೆಗಳ ಭಾರತೀಯರಲ್ಲಿ ಮೈಗೂಡಿಸಿಕೊಂಡು ಬಂದಿದ್ದ ಸ್ನೇಹ, ಸೌಹಾರ್ದತೆ ಹಾಗೂ ಐಕ್ಯತೆ, ತ್ಯಾಗ ಬಲಿದಾನಗಳನ್ನು ಜನರಿಗೆ ನೆನಪಿಸಿಕೊಟ್ಟು ಅವುಗಳಿಂದ ಸ್ಫೂರ್ತಿ ಪಡೆದು ಸಮಕಾಲೀನ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಆತ್ಮವಿಶ್ವಾಸ ಮೂಡಿಸಲು ಹುಬ್ಬಳ್ಳಿ-ಧಾರವಾಡ ಸಮುದಾಯ ಘಟಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಜನವರಿ 17 ರಿಂದ 30 ರವರೆಗೆ ಹಮ್ಮಿಕೊಂಡಿತು. ಈ ಕಾರ್ಯಕ್ರಮಗಳನ್ನು ಸಮುದಾಯ ಘಟಕದ 20ನೇ ವರ್ಷಾಚರಣೆಯ ಮತ್ತು ಅಮರ ಕಲಾವಿದ ಸಫ್ದರ್ ಹಷ್ಮಿಯ 10ನೇ ಹುತಾತ್ಮ ದಿನಾಚರಣೆಯ ಸಂದರ್ಭದಲ್ಲಿ ರೂಪಿಸಲಾಗಿತ್ತು

ಸ್ವಾತಂತ್ರ್ಯ-50, ಬೀದಿ ನಾಟಕ ಪ್ರದರ್ಶನ: ಸಮುದಾಯ ಮತ್ತು ಇಪ್ಟಾ ಸಾಂಸ್ಕೃತಿಕ ಸಂಘಟನೆಗಳ ಆಶ್ರಯದಲ್ಲಿ ಧಾರವಾಡದ ಕೊಳಗೇರಿ ವಿದ್ಯಾರ್ಥಿ ಯುವ ಕಲಾವಿದರಿಗೆ ಒಂದು ರಂಗ ಶಿಬಿರ ನಡೆಸಿ ಸ್ವಾತಂತ್ರ್ಯ - 50 ಎಂಬ ಬೀದಿ ನಾಟಕವನ್ನು ಸಿದ್ಧಗೊಳಿಸಲಾಯಿತು. ದಿ. 17 ರಂದು ಸಂಜೆ ಹತ್ತಿಕೊಳ್ಳದಲ್ಲಿ ಈ ನಾಟಕದ ಮೊದಲ ಪ್ರದರ್ಶನ ನಡೆಯಿತು. ಉದ್ಘಾಟನಾ ಸಮಾರಂಭದಲ್ಲಿ ಪ್ರೊ. ಸಿದ್ದಲಿಂಗ ಪಟ್ಟಣ ಶೆಟ್ಟಿ, ಪ್ರೊ. ಶಿವಾನಂದ ಶೆಟ್ಟರ್, ಡಾ. ಮುರಿಗೆಪ್ಪ, ಸಿ.ಆರ್.ಭಟ್ ಮತ್ತು ಇತರ ಗಣ್ಯರು ಪಾಲುಗೊಂಡಿದ್ದರು. ಮುಂದೆ ಈ ನಾಟಕ ಶ್ರೀನಗರ, ತೇಜಸ್ವಿ ನಗರ, ದೇಶಪಾಂಡೆ ಚೌಕ, ಹೊನಯಲ್ಲಾಪುರ, ಮಾಳಮಡ್ಡಿ, ಮಣಕಿಲ್ಲಾ ಪ್ರದೇಶಗಳಲ್ಲಿ ಪ್ರತಿದಿನ ಸಂಜೆ ಪ್ರದರ್ಶನಗೊಂಡಿತು. ಮುಕ್ತಾಯವಾಗಿ ಗಣರಾಜ್ಯ ದಿನ 26 ರಂದು ಸಂಜೆ ಸಾಧನಕೇರಿಯಲ್ಲಿ ಪ್ರದರ್ಶನಗೊಂಡು ಅಪಾರ ಜನಮೆಚ್ಚುಗೆ ಪಡೆಯಿತು. ಈ ದಿನ ಗಣರಾಜ್ಯದ ಮಹತ್ವವನ್ನು ಜನರಿಗೆ ತಿಳಿಸಲಾಯಿತು.

ರಾಮ್‌ಕೆ ನಾಮ್ ವಿಡಿಯೋ ಪ್ರದರ್ಶನ: ಖ್ಯಾತ ಚಲನಚಿತ್ರ ನಿರ್ಮಾಪಕರಾದ ಅಚ್ಯುತ ಪಟವರ್ಧನ ಅವರ ಟಿ.ವಿ. ಚಿತ್ರ 'ರಾಮ್ ಕೆ ನಾಮ್' ವಿಡಿಯೋ ಪ್ರದರ್ಶನವನ್ನು ಎಸ್.ಎಫ್.ಐ. ಧಾರವಾಡ ಜಿಲ್ಲಾ ಸಮ್ಮೇಳನದ ಸಂದರ್ಭ ದಿ. 20 ರಂದು ಸಂಜೆ ಹುಬ್ಬಳ್ಳಿಯಲ್ಲಿ ಪ್ರದರ್ಶಿಸಲಾಯಿತು. ಅದೇ ಚಿತ್ರವನ್ನು ಧಾರವಾಡದ ಶಕ್ತಿ ಅಪಾರ್ಟ್‌ಮೆಂಟ್ಸ್‌ನ ನಿವಾಸಿಗಳು ಗಣರಾಜ್ಯ ಆಚರಣೆಯ ಸಂದರ್ಭ ಏರ್ಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಪ್ರದರ್ಶಿಸಲಾಯಿತು. 1990 ರಲ್ಲಿ ಬಿ.ಜೆ.ಪಿ. ಮತ್ತು ಸಂಘ ಪರಿವಾರದವರು ಬಾಬ್ರಿ ಮಸೀದಿಯಲ್ಲಿ ಮಂದಿರ ಕಟ್ಟುವ ಉದ್ದೇಶದಿಂದ ಕರಸೇವಕರನ್ನು ಕೊಂಡೊಯ್ದ ಅದ್ವಾನಿಯವರ ರಥಯಾತ್ರೆಯ ಉದ್ದಕ್ಕೂ ಸಂಭವಿಸಿದ ಕೋಮು ಗಲಭೆಗಳು - ರಕ್ತಪಾತದ ಕುರಿತು ಇದು ಸಾಕ್ಷ್ಯ ಚಿತ್ರವಾಗಿದೆ. ಚಿತ್ರಕಲಾವಿದರಾದ ಮಹೇಶ್ ಪತ್ತಾರ ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಭಾರತದ ಭೂಪಟದ ಮತ್ತು ತ್ರಿವರ್ಣದ ಹಿನ್ನೆಲೆಯಲ್ಲಿ ಕಲಾತ್ಮಕವಾಗಿ ರಚಿಸಿಕೊಟ್ಟಿರುವುದನ್ನು ಹಲವು ಕಡೆಗಳಲ್ಲಿ ಪ್ರದರ್ಶಿಸಲಾಯಿತು.

'ಫಯರ್' ಚಿತ್ರದ ಕುರಿತು ವಿಚಾರ ಸಂಕಿರಣ: ದಿ. 24 ರಂದು ಸಂಜೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ 'ಫಯರ್' ಚಲನಚಿತ್ರದ ಕುರಿತು ವಿಚಾರ ಸಂಕಿರಣ ನಡೆಯಿತು. ಖ್ಯಾತ ಲೇಖಕಿ ಡಾ. ಹೇಮಲತಾ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿಗಳು, ಪತ್ರಕರ್ತರು, ಸಾಂಸ್ಕೃತಿಕ ಸಂಘಟನೆಯವರು ಕಿಕ್ಕಿರಿದು ನೆರೆದಿದ್ದರು. ಮುಖ್ಯವಾಗಿ ಹನುಮಾಕ್ಷಿ ಗೋಗಿ, ನಾಗರಾಜ, ಶೂರ್ನಾಲಿ, ಅಶೋಕ ಶೆಟ್ಟರ್, ಸಿ.ಆರ್.ಭಟ್, ರವಿ ಕುಲ್ಕರ್ಣಿ, ಬಂಟು ಕುಲಕರ್ಣಿ, ಮೋಹನ್ ನಾಗಮ್ಮನವರ ಮುಂತಾದ ಗಣ್ಯರು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಹುಬ್ಬಳ್ಳಿ, ಧಾರವಾಡ ಅವಳಿನಗರದಲ್ಲಿ ಈ ಚಿತ್ರ ಪ್ರದರ್ಶನ ಪ್ರಾರಂಭವಾದೊಡನೆ ಸ್ಥಳೀಯ ಬಿಜೆಪಿ ಮತ್ತು ಸಂಘ ಪರಿವಾರದವರು, ಅವರ ಶಾಸಕರು ಮತ್ತು ಸಂಸತ್ ಸದಸ್ಯರು ಸೇರಿದಂತೆ ಚಿತ್ರ ಮಂದಿರದ ಮಾಲಕರಿಗೆ ಬೆದರಿಕೆ ಹಾಕಿ ಪ್ರದರ್ಶನ ನಿಲ್ಲಿಸಿದರು. ಸ್ಥಳೀಯ ಸಾಂಸ್ಕೃತಿಕ ಸಂಘಟನೆಗಳು ಪೋಲೀಸ್ ಕಮಿಷನರ್ ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡ ನಂತರ, ಈ ಚಿತ್ರದ ಪ್ರದರ್ಶನ ಮತ್ತೆ ಪ್ರಾರಂಭ ಆಯಿತು. ಸಂಘ ಪರಿವಾರದವರು ಅಧಿಕಾರಿಗಳಿಗೂ ಬೆದರಿಕೆ ಒಡ್ಡಿ ಈ ಚಿತ್ರದ ಪ್ರದರ್ಶನವನ್ನು ಪುನಃ ನಿಲ್ಲಿಸಲಾಯಿತು.

ಈ ಚಲನಚಿತ್ರ ಕಾನೂನಿನಂತೆ ಸೆನ್ಸಾರ್ ಮಂಡಳಿಯ ಅಂಗೀಕಾರ ಪಡೆದಿದೆ, ದೇಶ ವಿದೇಶಗಳಿಂದ ಪ್ರಶಸ್ತಿ ಗಳಿಸಿದೆ. ಈ ಚಿತ್ರದ ಪ್ರದರ್ಶನವನ್ನು ಬಲಾತ್ಕಾರದ ಮೂಲಕ ತಡೆಯುವ ಚಿತ್ರ ನಿರ್ಮಾಪಕರ, ನಿರ್ದೇಶಕರ, ನಟ ನಟಿಯರ, ಚಿತ್ರ ಪ್ರದರ್ಶಕರ, ಅಸಂಖ್ಯಾತ ಪ್ರೇಕ್ಷಕರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಡಲಿ ಏಟು ಹಾಕಿದಂತೆ ಎಂದು ವಿಚಾರ ಸಂಕಿರಣದಲ್ಲಿ ಒಮ್ಮತದಿಂದ ಅಭಿಪ್ರಾಯ ಪಡಲಾಯಿತು. ಸೃಜನಶೀಲ ಚಿತ್ರಕಲೆಗಳನ್ನು ಹಾಳುಗೆಡವುದು, ಚಲನಚಿತ್ರಗಳ ಪ್ರದರ್ಶನಗಳನ್ನು ತಡೆಗಟ್ಟುವುದು ಮತ್ತು ಚಿತ್ರಮಂದಿರಗಳನ್ನು ಧ್ವಂಸ ಮಾಡುವುದು, ಭಾರತ-ಪಾಕಿಸ್ತಾನ ಸಂಘಗಳ ನಡುವೆ ಕ್ರಿಕೆಟ್ ಆಟಕ್ಕೆ ತಡೆ ಒಡ್ಡುವುದು ಮತ್ತು ಕ್ರಿಕೆಟ್ ಮೈದಾನ ಹಾಳುಗೆಡುವುದು, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಯುವುದು ಅವರ ಪೂಜಾಸ್ಥಳ ಗಳನ್ನು ಸೇವಾ ಸಂಸ್ಥೆಗಳನ್ನು ಧ್ವಂಸ ಗೊಳಿಸುವುದು... ಸಂಘ ಪರಿವಾರದ 'ಹಿಂದುತ್ವ ಅಜೆಂಡಾ'ವನ್ನು ಮುಂದುವರಿಸುವ ದುಸ್ಸಾಹಸ ವಾಗಿದೆ ಎಂದು ವಿಚಾರ ಸಂಕಿರಣದಲ್ಲಿ ಅಭಿಪ್ರಾಯ ಪಡಲಾಯಿತು. ಬಿ.ಜೆ.ಪಿ. ನೇತೃತ್ವದ ಕೇಂದ್ರ ಸರ್ಕಾರ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಆಧರಿತ ಜನ ವಿರೋಧಿ ಆರ್ಥಿಕ ಧೋರಣೆಯನ್ನು ತೀವ್ರವಾಗಿ ಜಾರಿಗೊಳಿಸುತ್ತಿರುವುದರ ವಿರುದ್ಧ ಜನರ ಪ್ರತಿಭಟನೆಯ ದಾರಿತಪ್ಪಿಸುವ ಕುತಂತ್ರವಾಗಿದೆ ಎಂದೂ ಅಭಿಪ್ರಾಯ ಪಡಲಾಯಿತು.

'ಗಾಂಧಿ ವಿರುದ್ಧ ಗಾಂಧಿ' ನಾಟಕ ಪ್ರದರ್ಶನ: ದಿ. 29 ರಂದು ಧಾರವಾಡದ ಕಲಾಭವನದಲ್ಲಿ ಸಮುದಾಯದ ಆಶ್ರಯದಲ್ಲಿ ರಂಗಾಯಣದವರ ಈ ಸುಪ್ರಸಿದ್ಧ ನಾಟಕದ 28ನೇ ಪ್ರದರ್ಶನ ಏರ್ಪಡಿಸಲಾಯಿತು. ನಿರ್ದೇಶನ: ಸಿ.ಬಸವಲಿಂಗಯ್ಯ, ಸಂಗೀತ: ಬಿ.ವಿ.ಕಾರಂತ, ಪ್ರದರ್ಶನದ ಮೊದಲು ನಡೆದ ಸರಳ ಸಮಾರಂಭದಲ್ಲಿ ಡಾ. ಸಂಜೀವ ಕುಲಕರ್ಣಿ, ಸಿ.ಬಸವಲಿಂಗಯ್ಯ, ಗಂಗಾಧರ ಸ್ವಾಮಿ, ವಿರೂಪಾಕ್ಷ ನಾಯಕ, ನಾಟಕಕಾರ ಡಿ.ಎಸ್.ಚೌಗಲೆ, ಸಿ.ಆರ್.ಭಟ್, ಬಿ.ಐ.ಈಳಿಗೇರ ಭಾಗವಹಿಸಿದ್ದರು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಸದ್ಯ ಧಾರ್ಮಿಕ ಮೂಲಭೂತ ವಾದಿಗಳಿಂದ ನಡೆಯುತ್ತಿರುವ ದಾಳಿಯ ವಿರುದ್ಧ ಕಲಾಭಿಮಾನಿಗಳು ತಮ್ಮ ಪ್ರತಿಭಟನಾ ಧ್ವನಿ ಎತ್ತಬೇಕೆಂದು ಸಭೆಯಲ್ಲಿ ಮಾತನಾಡಿದವರು ಅಭಿಪ್ರಾಯ ಪಟ್ಟರು.

ಕ್ರೈಸ್ತ ಬಾಂಧವರ ಪ್ರತಿಭಟನೆಗೆ ಬೆಂಬಲ: ಇತ್ತೀಚೆಗೆ ಅಲ್ಪಸಂಖ್ಯಾತರಾದ ಕ್ರೈಸ್ತರ ಮೇಲೆ ಮತ್ತು ಅವರ ದೇವಸ್ಥಾನಗಳ ಹಾಗೂ ಇತರ ಸೇವಾ ಸಂಸ್ಥೆಗಳ ಮೇಲೆ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳಾದ ಸಂಘ ಪರಿವಾರದವರು ನಡೆಸುತ್ತಿರುವ ದಾಳಿ ದೌರ್ಜನ್ಯಗಳನ್ನು ವಿರೋಧಿಸಿ ಕ್ರೈಸ್ತ ಸಮುದಾಯ ಸಮನ್ವಯ ಸಮಿತಿ ಆಶ್ರಯದಲ್ಲಿ ಧಾರವಾಡದಲ್ಲಿ ದಿ. 30 ರಂದು ಪ್ರತಿಭಟನಾ ಮೆರವಣಿಗೆ ಹಾಗೂ ಉಪವಾಸ ಸತ್ಯಾಗ್ರಹ ನಡೆಸಿದರು. ಅದರಲ್ಲಿ ಕ್ರೈಸ್ತ ಬಾಂಧವರು ಪಾಲುಗೊಂಡಿದ್ದರು. ಪ್ರತಿಭಟನಾ ಸಭೆಯಲ್ಲಿ ಇತ್ತೀಚೆಗೆ ಒರಿಸ್ಸಾದ ಮನೋಹಪುರದಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ಕುಷ್ಠ ರೋಗಿಗಳ ಸೇವಕರಾದ ಗ್ರಾಹಮ್ ಸ್ಟುವರ್ಟ್ ಸೈನ್ ಮತ್ತು ಅವರ ಪುಟ್ಟ ಮಕ್ಕಳನ್ನು ಸಂಘಪರಿವಾರದವರು ಸಜೀವ ದಹನ ಮಾಡಿರುವುದನ್ನು ತೀವ್ರವಾಗಿ ಖಂಡಿಸಲಾಯಿತು. ಸಮುದಾಯದ ಘಟಕ ಅಧ್ಯಕ್ಷರಾದ ಸಿ.ಆರ್.ಭಟ್ ಈ ದುರಂತದ ಸಂದರ್ಭ ಕ್ರೈಸ್ತ ಬಾಂಧವರಿಗೆ ಸಂಘಟನೆಯ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ ಪತ್ರಸಲ್ಲಿಸಿದರು ಸ್ಥಳೀಯ ಇಗರ್ಜಿಯಲ್ಲಿ ಕ್ರೈಸ್ತ ಸಮುದಾಯದವರ ಪ್ರತಿಭಟನಾ ಕಾರ್ಯಕ್ರಮದ ಸಿದ್ಧತಾ ಸಮಿತಿಯ ಸಭೆಯಲ್ಲಿ ಸಿ.ಆರ್ ಭಟ್ ಭಾಗವಹಿಸಿ ಕೋಮು ವಾದದ ಮೂಲ ಬೇರುಗಳನ್ನು ಪರಿಚಯಿಸಿ ದರು. ಅದಕ್ಕೆ ಸಂಬಂಧಿಸಿ ಅಗತ್ಯದ ಸಾಹಿತ್ಯ ಗಳನ್ನು ಹೆಚ್ಚಿನ ಅಧ್ಯಯನಕ್ಕೆ ಒದಗಿಸುವುದಾಗಿ ತಿಳಿಸಿದರು. ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆದಾಗ ಅಲ್ಪಸಂಖ್ಯಾತರು ಮಾತ್ರ ಪ್ರತಿಭಟಿಸದೆ ಎಲ್ಲ ಜನ ಸಮೂಹ ಪ್ರತಿಭಟಿಸಿ ದುಷ್ಟ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕೆಂದು ಕೋರಿದರು.

ರಾಷ್ಟ್ರಾಧ್ಯಕ್ಷರಿಗೆ ಮನವಿ:

ಸಮುದಾಯ ಘಟಕದ ಮುತುವರ್ಜಿಯಿಂದ ವಿವಿಧ ಸಾಂಸ್ಕೃತಿಕ ಹಾಗೂ ಸಾಮೂಹಿಕ ಸಂಘಟನೆಗಳ 220 ಪ್ರತಿನಿಧಿಗಳಿಂದ ಸಹಿ ಹಾಕಿದ ಒಂದು ಮನವಿಯನ್ನು ರಾಷ್ಟ್ರಾಧ್ಯಕ್ಷರಿಗೆ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಲಾಯಿತು.

ಮನವಿಗೆ ಸಹಿಮಾಡಿರುವ ಕೆಲವು ಗಣ್ಯರು. ಸಮುದಾಯದ ಡಾ. ಸಂಜೀವ ಕುಲಕರ್ಣಿ, ಸಿ.ಆರ್. ಭಟ್, ಬಿ.ಐ. ಈಳಿಗೇರ, ಇಪ್ಟಾದ ಡಾ|| ಸಿದ್ದನಗೌಡ ಪಾಟೀಲ್, ಶಂಕರ ಹಲಗತ್ತಿ, ಕರ್ನಾಟಕ ಸಮಾಜ ವಿಜ್ಞಾನದ ಡಾ|| ವಿ.ಎಲ್. ದೇಶಪಾಂಡೆ, ರಂಗಾಯಣದ ಸಿ. ಬಸವಲಿಂಗಯ್ಯ, ಗಂಗಾಧರ ಸ್ವಾಮಿ ಕಲಾವಿದರು ಮತ್ತು ಬರಹಗಾರರು, ಮಧು ದೇಸಾಯಿ, ಡಿ.ಎಸ್. ಚಾಗಲೆ, ಕುಲ್ಕರ್ಣಿ, ನಾಟಕ ಅಕಾಡೆಮಿಯ ಪ್ರೋ. ಸಿದ್ದಲಿಂಗ ಪಟ್ಟಣ ಶೆಟ್ಟಿ, ವಿರೂಪಾಕ್ಷ ನಾಯಕ, ಗಾಂಧಿ ಅಧ್ಯಯನ ವಿಭಾಗದ(ಕ.ವಿ.ವಿ) ಪ್ರೋ.ಶಿವಾನಂದ ಶೆಟ್ಟಿ, ಗಾಂಧಿ ಶಾಂತಿ ಪ್ರತಿಷ್ಠಾನದ ಮಹೇಶ್ ಕುಲಕರ್ಣಿ, ಮಹಿಳಾ ಜಾಗೃತ ವೇದಿಕೆಯ ಶಾರದಾ ದಾಬಡೆ, ಪಾರ್ವತಿ, ರೈತ ಸಂಘದ ಸ್ವಾತಂತ್ರ್ಯ ಹೋರಾಟಗಾರ ಎಸ್.ಎಚ್. ಕಪ್ಪಣ್ಣನವರು, ಸಾಕ್ಷರತಾ ಆಂದೋಲನದ ಹಾವೇರಿ ಜಿಲ್ಲಾ ಕಾರ್ಯದರ್ಶಿ ಡಾ|| ರಾಜನಾಯಕ್, ಸ್ಕೌಟ್ ಮತ್ತು ಗಾಡ್ಸ್‌ನ ಲೋರಡೆ, ನೆಹರು ಯುವ ಕೇಂದ್ರದ ಸಾದಾಶಿವ ವೈದ್ಯ, ಕ್ರೈಸ್ತ ಸಂಸ್ಥೆಗಳ ಡಾ|| ಜಿ.ಎಂ. ಬಳ್ಳಾರಿ, ದಾದರ್ ಜಾಕೆಬ್, ಪರ್ತಕರ್ತರಾದ (ಪ್ರಜಾವಾಣಿ, ಡೆಕನ್ ಹೆರಾಲ್ಡ್) ಪಿ.ಕೆ. ಹರಿಯಬ್ಬೆ, ವಿಮಾ ನೌಕರರ ಸಂಘದ ಆರ್.ಎಚ್.ಅಯಿ, ಬಿ.ಎಸ್.ಪೂಜಾರ್ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ.ನ ಸಮಿತಿ, ರವೀಂದ್ರ ಕುಮಾರ್ ಹೊನವಾಡ, ಸ್ವಾತಂತ್ರ್ಯ ಹೋರಾಟಗಾರರೂ ಪ್ರಸಿದ್ಧ ವಕೀಲರು ಆದ ಜಿ.ಟಿ. ಪದಕಿ.

ರಾಯಚೂರಿನಲ್ಲಿ ವಿಚಾರ ಸಂಕಿರಣ: ಶಿಕ್ಷಣದಲ್ಲಿ ಕೋಮುವಾದ

ಜನವರಿ 17 ರಂದು ರಾಯಚೂರಿನ ರೈತಭವನದಲ್ಲಿ ಶಿಕ್ಷಣದಲ್ಲಿ ಕೋಮುವಾದ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ರಾಜ್ಯ ಕಾರ್ಯದರ್ಶಿಯಾದ ಎಸ್.ವೈ. ಗುರುಶಾಂತ್ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡುತ್ತ ಯುದ್ಧವನ್ನು ಕ್ರಿಕೇಟಿಗೆ, ಧರ್ಮವನ್ನು ದೇಶಕ್ಕೆ ಹೋಲಿಸುವ ಬಿಜೆಪಿ ನಿಜವಾದ ಬಣ್ಣ ಮೊನ್ನೆ ಪಾಕಿಸ್ತಾನ, ಭಾರತ ಕ್ರಿಕೆಟ್ ಪಂದ್ಯದ ಪಿಚ್‌ನ್ನು ಧ್ವಂಸಗೊಳಿಸಿದ್ದು ನೋಡಿದರೆ ಗೊತ್ತಾಗುತ್ತದೆ ಎಂದು ಪ್ರತಿಯೊಬ್ಬರು ಅಭಿಪ್ರಾಯ ಪಟ್ಟರು ಮೂಲಭೂತವಾದ, ಮತೀಯವಾದ ಇಂದು ಎಲ್ಲಿ ನೋಡಿದಲ್ಲಿ ಅಪಾಯಕಾರಿಯಾಗಿ ಬೆಳೆದು ಶಿಕ್ಷಣ, ಸಾಂಸತಿಕ ರಂಗದಲ್ಲಿ ಬರುತ್ತಿದೆ. ಬ್ರಿಟೀಶರ ಕಾಲದಲ್ಲಿ ಇದ್ದ ಗುಮಾಸ್ತರನ್ನು ತಯಾರಿಸುವಂತಹ ಶಿಕ್ಷಣ ಇಂದೂ ಸಹ ಮುಂದುವರಿಸುದು ಖಾವಿ ಶಿಕ್ಷಣವಾಗಿದೆ. ವೈಜ್ಞಾನಿಕ ಶಿಕ್ಷಣ ಬರಬೇಕು, ಒಂದು ದೇಶ ಇನ್ನೊಂದು ದೇಶದ ಜೊತೆಗೆ ಕ್ರೀಡೆ ಆಡುವುದು ಪರಸ್ಪರ ಪ್ರೀತಿ ಸ್ನೇಹದ ಸಂಕೇತವಾಗಿದೆ. ಮತೀಯವಾದಿ ಬಿಜೆಪಿ ಕ್ರೀಡೆಯನ್ನು ಯುದ್ಧಕ್ಕೆ ಹೋಲಿಸುತ್ತಿದೆ ಎಂದು ಗುರುಶಾಂತ್ ರವರು ಹೇಳಿದರು.

ಎಸ್‌ಎಫ್‌ಐ ಅಧ್ಯಕ್ಷರಾದ ಉಮೇಶ್ ಮಾತನಾಡುತ್ತಾ ಸಂವಿಧಾನದಲ್ಲಿ ಭಾರತದಲ್ಲಿ ಪ್ರತಿಯೊಬ್ಬರಿಗೂ ತನ್ನ ವಿಚಾರಗಳನ್ನು ಹೇಳಲು ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದೆ. ಕೋಮುವಾದ ಇದನ್ನು ಹಾಳು ಮಾಡುತ್ತಿದೆ ಎಂದರು.

ಭಾರತದಲ್ಲಿ ಕ್ರಿಕೆಟ್ ಆಡಬೇಕಾದರೆ ಶಿವಸೇನೆಯ ಬಾಳಾಠಾಕ್ರೆಯನ್ನು ಕೇಳಿ ಆಡಬೇಕೆ? ಭಾರತ ದೇಶ ಇವರ ಸ್ವತ್ತೇನು? ಇವರೇನು ದೇಶದ ದೊಣ್ಣೆ ನಾಯಕರೇ ಎಂದು ಪ್ರಶ್ನಿಸಿದ ಅವರು 50 ವರ್ಷಗಳಾದರೂ ನಮ್ಮ ದೇಶದ ಭಾಷೆಯನ್ನು ಸರಿಯಾಗಿ ಆಡಲು ಬಾರದ ಇವರು ಇಂದು ವೇದ, ಉಪನಿಷತ್ತು, ಸಂಸತವನ್ನು ಕಲಿಸಲು ಹೊರಟಿದ್ದಾರೆ. ಮಾನವ ಹಕ್ಕುಗಳ ಮೇಲೆ ದಾಳಿಯನ್ನು ಎದುರಿಸಲು, ಶಿಕ್ಷಣದಲ್ಲಿ ಕೋಮುವಾದ ಸೇರಿಸಲಾರದಂತೆ ಹಿಮ್ಮೆಟ್ಟಿಸಲು ಹೋರಾಡಬೇಕೆಂದು ಜೀವ ವಿಮಾ ನೌಕರರ ಸಂಘದ ಸೋಮಶೇಖರ್ ಹೇಳಿದರು.

ಬಾಲ ಸೈನಿಕರ ಬಗ್ಗೆ ಒಪ್ಪಂದಕ್ಕೆ ಅಮೆರಿಕ, ಪಾಕಿಸ್ತಾನಗಳ ವಿರೋಧ

ಮಾನವ ಹಕ್ಕುಗಳ ಬಗ್ಗೆ ಹಗಲು ರಾತ್ರಿ ಕಣ್ಣೀರು ಸುರಿಸುವ ಅಮೆರಿಕ ಯುದ್ಧ ಸಂಬಂಧಿ ಮಾನವ ಹಕ್ಕುಗಳ ಬಗ್ಗೆ ಅಂತರ್ರಾಷ್ಟ್ರೀಯ ಒಪ್ಪಂದಗಳ ಪ್ರಶ್ನೆ ಬಂದಾಗ ಮಾತ್ರ, ಯಾವುದೇ ಮುಲಾಜಿಲ್ಲದೆ ಪ್ರಗತಿಪರ ಒಪ್ಪಂದಗಳನ್ನು ಬಲವಾಗಿ ವಿರೋಧಿಸುತ್ತದೆ. ಅಣ್ವಸ್ತ್ರ ನಿಶ್ಶಸ್ತ್ರೀಕರಣ, ಯುದ್ಧ ಅಪರಾಧಗಳ ಬಗ್ಗೆ ಅಂತರ್ರಾಷ್ಟ್ರೀಯ ಕೋರ್ಟಿನ ಸ್ಥಾಪನೆ, ಮೈನ್ ಸ್ಫೋಟಕ ಗಳನ್ನು ನಿಷೇಧಿಸುವ ಬಗ್ಗೆ - ಇದು ಈಗಾಗಗಲೇ ವ್ಯಕ್ತವಾಗಿದೆ. ಇನ್ನೊಂದು ಸಂದರ್ಭ ದಲ್ಲಿಯೂ ಇದು ಈಗ ವ್ಯಕ್ತವಾಗಿದೆ. ಮಕ್ಕಳನ್ನು ಆಂತರಿಕ ಸಶಸ್ತ್ರ ಕಲಹಗಳಲ್ಲಿ ಬಳಸುವುದರ ಬಗ್ಗೆ ಈಗ ಇರುವ ಅಂತ ರ್ರಾಷ್ಟ್ರೀಯ ಮಕ್ಕಳ ಮಾನವ ಹಕ್ಕು ಒಪ್ಪಂದದಲ್ಲಿ ಕನಿಷ್ಟ ವಯಸ್ಸನ್ನು 18ಕ್ಕೆ ಏರಿಸುವುದರ ಬಗ್ಗೆ ಜಿನಿವಾದಲ್ಲಿ ನಡೆದ 50 ದೇಶಗಳ ಸಭೆ ಯಲ್ಲಿ ಇದು ವ್ಯಕ್ತವಾಯಿತು. ಅಮೆರಿಕ ಮತ್ತು ಪಾಕಿಸ್ತಾನಗಳು ಇದನ್ನು ಬಲವಾಗಿ ವಿರೋಧಿಸಿದವು. ಬ್ರಿಟನ್ ಮತ್ತು ಇರಾನ್‌ಗಳೂ ಈ ಬಗ್ಗೆ ಅಸಮ್ಮತಿ ವ್ಯಕ್ತಪಡಿಸಿವೆ.

ಇಸ್ರೇಲಿ ರಕ್ಷಣಾಮಂತ್ರಿ ನಿರ್ಗಮನ- ಹೊಸಪಕ್ಷಕ್ಕೆ ಸೇರ್ಪಡೆ

ಇಸ್ರೇಲಿನ ರಕ್ಷಣಾ ಮಂತ್ರಿಯನ್ನು ಪ್ರಧಾನ ಮಂತ್ರಿ ನೆತನ್ಯಾಹು ಮಂತ್ರಿ ಮಂಡಲದಿಂದ ಕೈಬಿಟ್ಟಿದ್ದು ಅವರು ಇಸ್ರೇಲಿನಲ್ಲಿ ಮೂಡಿಬರುತ್ತಿರುವ ಮಧ್ಯಪಂಥೀಯ ಪಕ್ಷ ಪಕ್ಷಕ್ಕೆ ಸೇರಿದ್ದಾರೆ. ಇದರಿಂದಾಗಿ ಮೇಯಲ್ಲಿ ಆದೇಶದ ಪಾರ್ಲಿಮೆಂಟಿಗೆ ನಡೆಯಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಆಳುವ ಲಿಕುಡ್ ಪಕ್ಷದ ಗೆಲ್ಲುವ ಸಾಧ್ಯತೆಗೆ ತೀವ್ರ ಧಕ್ಕೆ ಒದಗಲಿದೆ ಎಂದು ಅಂದಾಜು ಮಾಡಲಾಗಿದೆ. ಮೊರ್ಡೆಚಾಯ ನೇತನ್ಯಾಹು ಅವರ ಮಂತ್ರಿಮಂಡಲದ ಜನಪ್ರಿಯ ಮಂತ್ರಿಗಳಲ್ಲಿ ಒಬ್ಬರಾಗಿದ್ದು, ಲಿಬರಲ್ ಶಾಂತಿ ಒಪ್ಪಂದದ ಬಗ್ಗೆ ಹೆಚ್ಚು ಮೆದು ನೀತಿ ಹೊಂದಿದವರಾಗಿದ್ದರು. ಅರಬ್ ಶಾಂತಿ ಒಪ್ಪಂದದ ಬಗ್ಗೆ ನೆತನ್ಯಾಹು ಅವರ ವಿನಾಶಕಾರಿ ಬಿಗಿ ನೀತಿಯನ್ನು ಅವರು ವಿರೋಧಿಸುತ್ತಿದ್ದು, ಇದು ಸತತ ಘರ್ಷಣೆಗೆ ಕಾರಣವಾಗಿತ್ತು. ಇಸ್ರೇಲ್‌ನ ಜನರಲ್ಲಿ ಅರಬ್ ದೇಶಗಳಿಂದ ಬಂದ ಜನಗಳು (ಅಂದರೆ ಏಶ್ಯನ್ನರು) ಮತ್ತು ಯುರೋಪಿಯನ್ ದೇಶಗಳಿಂದ ಮಹಾ ಯುದ್ಧದ ಕಾಲದಲ್ಲಿ ಬಂದ ಯಹೂದ್ಯರು ಹೀಗೆ ಎರಡು ಮುಖ್ಯ ಪಂಗಡ ಯುರೋಪಿಯನ್ನರದ್ದೆ ಮೇಲುಗೈ. ಮೊರ್ಡೆಚಾಯ ಏಶ್ಯನ್ ಯಹೂದಿಗಳಾಗಿದ್ದು ಈ ಜನರಲ್ಲಿ ಅವರು ಜನಪ್ರಿಯ ನಾಯಕ. ಏಶ್ಯನ್ ಮೂಲದವರ ಮತವನ್ನು ಮೆರ್ಡಚಾಯ ನೂತನ ಮಧ್ಯಪಂಥೀಯ ಪಕ್ಷಕ್ಕೆ ದೊಡ್ಡ ಪ್ರಮಾಣದಲ್ಲಿ ಒಯ್ಯುವ ಸಾಧ್ಯತೆ ಇರುವುದರಿಂದ ಲಿಕುಡ್ ಪಕ್ಷಕ್ಕೆ ಇದು ಏಟು ಕೊಡಲಿದೆ. ಅಲ್ಲದೆ ಇಲ್ಲಿಯ ವರೆಗೆ ಎರಡು ಪಕ್ಷ ವ್ಯವಸ್ಥೆಯಾಗಿದ್ದ ಇಸ್ರೇಲಿ ರಾಜಕೀಯ ಈ ಮೂರನೇ ಶಕ್ತಿ ರಾಜಕೀಯ ಸ್ವರೂಪವನ್ನೇ ಬದಲಾಯಿಸಬಹುದು.

ಕೋಲಂಬಿಯಾದಲ್ಲಿ ಭಾರಿ ಭೂಕಂಪ : ಎರಡು ಸಾವಿರ ಸಾವು, ಎರಡುವರೆ ಲಕ್ಷ ನಿರಾಶ್ರಿತರು

ಕೊಲಂಬಿಯಾದ ಅಮೇನಿಯ ಎಂಬ ಪಟ್ಟಣದಲ್ಲಿ ಆದ ಭಾರೀ ಭೂಕಂಪದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಎರಡುವರೆ ಲಕ್ಷಕ್ಕೂ ಹೆಚ್ಚು ಜನ ನಿರ್ಗತಿಕರಾಗಿದ್ದಾರೆ. ಅಮೇನಿಯ ಎಂಬ ಪಟ್ಟಣ ಹಾಗೂ ಸುತ್ತ ಮುತ್ತಲಿನ ಪ್ರದೇಶ ಹೆಚ್ಚು ಕಡಿಮೆ ಪೂರ್ಣವಾಗಿ ನಿರ್ನಾಮವಾಗಿದ್ದು, ಅಲ್ಲಿನ ಮೂರು ಲಕ್ಷದಷ್ಟು ಜನರ ಜೀವನದ ಮೇಲೆ ತೀವ್ರ ಪರಿಣಾಮ ಬೀರಿದೆ. ಪರಿಹಾರ ಕಾರ್ಯಗಳಲ್ಲಿ ಉಪೇಕ್ಷೆ, ವಿಪರೀತ ವಿಳಂಬದಿಂದ ರೊಚ್ಚಿಗೆದ್ದ ಜನ ಪಟ್ಟಣದ ಸೂಪರ್ ಮಾರ್ಕೆಟ್‌ಗಳನ್ನು ಲೂಟಿ ಹೊಡೆದರು. ಆಹಾರ ವಸ್ತುಗಳ ಅಭಾವ ಇನ್ನೂ ಮುಂದುವರೆಯುತ್ತಿದ್ದು, ವೈದ್ಯಕೀಯ ಸಹಾಯ, ಪುನರ್ವಸತಿ ಯಾವುದೇ ಗಂಭೀರ ಪ್ರಯತ್ನ ಕಾಣುತ್ತಿಲ್ಲ. ಅಮೇನಿಯ ಪಟ್ಟಣದಲ್ಲಿ ನಡೆದ ವ್ಯಾಪಕ ಲೂಟಿಯನ್ನು ಹತ್ತಿಕ್ಕಲು ಅಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸಿ ಎರಡು ಸಾವಿರ ಸೈನಿಕರು, ಏಳುನೂರು ಪೋಲೀಸರನ್ನು ಮಾತ್ರ ಸರ್ಕಾರ ತುರ್ತಾಗಿ ಕಳಿಸಿದೆ, ಹೆಚ್ಚಿನ ವಿಕಾಸಶೀಲ ದೇಶಗಳಂತೆ ಕೋಲಂಬಿಯ ಸಹ ಇತರ ವ್ಯಾಪಕ ಪ್ರಾಕೃತಿಕ ಪ್ರಕೋಪಗಳ ಪರಿಹಾರ ಕಾರ್ಯ ಎದುರಿಸಲು ಪೂರ್ವಸಿದ್ಧತೆ, ಪರಿಕರಗಳನ್ನು ಹೊಂದಿಲ್ಲ, ಪ್ರಾಕೃತಿಕ ಪ್ರಕೋಪಗಳ ಬಗ್ಗೆ ಸಾಕಷ್ಟು ಬೇಗ ಎಚ್ಚರಿಕೆ ನೀಡುವ ತಂತ್ರಜ್ಞಾನವನ್ನು ಸಾಕಷ್ಟು ಪರಿಣಾಮ ಕಾರಿಯಾಗಿ ಬಳಸಿಕೊಳ್ಳಲಾಗುತ್ತಿಲ್ಲ.

ಅಮೇರಿಕದಿಂದ ಸೂಪರ್- 30 ಬೆದರಿಕೆ ಪುನರುಜ್ಜೀವನ

ಅಧ್ಯಕ್ಷ ಕ್ಲಿಂಟನ್ ಇತ್ತೀಚೆಗೆ ಸೂಪರ್ 301 ಕಾಯಿದೆಯನ್ನು ಪುನ: ಜಾರಿಗೆ ತರುವ ಆಜ್ಞೆ ಹೊರಡಿಸಿದ್ದು ಹಲವು ದೇಶಗಳಲ್ಲಿ ಈ ಕ್ರಮವನ್ನು ಟೀಕಿಸಲಾಗಿದೆ ಇಲ್ಲವೆ ಆತಂಕದಿಂದ ನೋಡಲಾಗುತ್ತಿದೆ. ಸೂಪರ್ 301 ರ ಪ್ರಕಾರ ಯಾವುದೇ ದೇಶ ಅಮೇರಿಕದ ರಫ್ತಿಗೆ ನಿರ್ಬಂಧಗಳನ್ನು ಹಾಕಿದರೆ, ಆ ದೇಶವನ್ನು ಆರ್ಥಿಕ ದಿಗ್ಬಂಧನಕ್ಕೆ ಗುರಿಮಾಡಬಹುದು. ಅಂದರೆ ಸಾರ್ವಭೌಮ ದೇಶಗಳ ಕಾನೂನು ಸರಿಯೇ ಹೌದೆ ಅಲ್ಲವೆ ಎಂಬುದನ್ನು ಅಮೆರಿಕನ್ ವಾಣಿಜ್ಯ ಖಾತೆ ನಿರ್ಧರಿಸುತ್ತದೆ. ಇದನ್ನು ಏಕಪಕ್ಷೀಯ, ದೇಶಗಳ ಸಾರ್ವಭೌಮತೆಯನ್ನು ತಿರಸ್ಕರಿಸುವ, ಅಂತರ್ರಾಷ್ಟ್ರೀಯ ನೀತಿಗಳನ್ನು ಧಿಕ್ಕರಿಸುವ ಕ್ರಮ ಎಂದೆಲ್ಲಾ ಟೀಕಿಸಲಾಗಿತ್ತು. ಆದರೆ ವಿಶ್ವ ವಾಣಿಜ್ಯ ಸಂಘಟನೆ (WTO) ಯ ರಚನೆ ನಂತರ ಸೂಪರ್ 301ನ್ನು ಅಮೇರಿಕ ಸ್ಥಗಿತಗೊಳಿಸಿತ್ತು. ಈಗ ಅದನ್ನು ಪುನರುಜ್ಜೀವನಗೊಳಿಸಲಾಗಿದೆ ಯುರೋಪಿಯನ್ ಕಮೀಶನ್ ವಾಣಿಜ್ಯ ಕಾರ್ಯದರ್ಶಿ ಇದನ್ನು ಟೀಕಿಸಿದ್ದು ಈ ಬಗ್ಗೆ WTO ಗೆ ದೂರುವ ದಾಗಿ ಬೆದರಿ ಸಿದ್ದಾರೆ. ಜಪಾನ್ ಸರ್ಕಾರ ಅಧಿಕೃತವಾಗಿ ಏನನ್ನೂ ಹೇಳದಿದ್ದರೂ ಸೂಪರ್ 301 ನ್ನು ವಿರೋಧಿಸು ವುದು ಇಲ್ಲವೆ ತಿರಸ್ಕರಿಸು ವುದು ಜಪಾನಿನ ನೀತಿ. ಜಪಾನ್ ವಿಮಾಕ್ಷೇತ್ರದಲ್ಲಿ ಅಮೆರಿಕನ್ ಕಂಪನಿಗಳ ಮೇಲೆ ನಿರ್ಬಂಧ ಹೇರುತ್ತಿದೆ ಎಂದು ಅಮೇರಿಕದ ವಾಣಿಜ್ಯ ಖಾತೆ ಸಾರುತ್ತಾ ಬಂದಿದೆ. ಪರೋಕ್ಷವಾಗಿ ಇದು ಸೂಪರ್ 301ನ್ನು ಅನ್ವಯಗೊಳಿಸುವ ಬೆದರಿಕೆ ಹಾಕಿದೆ. ಭಾರತವೂ ಸೂಪರ್ 301 ಪ್ರಕಾರ ಹೆಸರಿಸಲ್ಪಟ್ಟ ದೇಶಗಳಲ್ಲಿ ಒಂದು. ಸಾಮ್ರಾಜ್ಯಶಾಹಿ ಪರ WTOದ ಕನಿಷ್ಟ ಅಂತರ್ರಾಷ್ಟ್ರೀಯ ವಾಣಿಜ್ಯ ಒಪ್ಪಂದವನ್ನು ಮುರಿದು ತೀರಾ ಏಕಪಕ್ಷೀಯ ಸೂಪರ್ 301 ಅಂತರಾಷ್ಟ್ರೀಯ ಆರ್ಥಿಕ ಸಂಬಂಧಗಳಲ್ಲಿ ಪುನ: ಕೋಲಾಹಲ ಮೂಡಿಸಿದೆ.

ಬಟ್ಲರ್ ಕಮಿಷನ್‌ನ ವರದಿ ಬಗ್ಗೆ IAEA ಟೀಕೆ - ವಿಶ್ವಸಂಸ್ಥೆಗೆ ಇನ್ನೊಂದು ಇರುಸುಮುರುಸು

IAEA ಅಂತರ್ರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿ, ವಿಶ್ವಸಂಸ್ಥೆಯ ಪರಿವಾರದ್ದೇ ಒಂದು ಸಂಘಟನೆ, ಆದರೆ ಹೆಚ್ಚು ಸ್ವತಂತ್ರವಾದ ಸಂಘಟನೆ. ಈ ಏಜೆನ್ಸಿಯ ಅಧ್ಯಕ್ಷ ಇರಾಕ್‌ನಲ್ಲಿ ನಿಶ್ಶಸ್ತ್ರೀಕರಣದ ಕೆಲಸ ಮಾಡುತ್ತಿರುವ ಅಮೆರಿಕದ ಬಟ್ಲರ್‌ನ ನಾಯಕತ್ವದ UNSCOM ಕಮಿಶನನ್ನು ಬದಲಾಯಿಸಬೇಕು ಎಂದಿದ್ದಾರೆ. ಅವರ ವರದಿಯನ್ನು ಟೀಕಿಸಿ ಭದ್ರತಾ ಸಮಿತಿಗೆ IAEA ವರದಿಯೊಂದನ್ನು ತಯಾರಿಸಿದೆ. ಬಟ್ಲರ್ ವರದಿಯಲ್ಲಿ ನಂಬಿಕಸ್ತ ಮಾಹಿತಿ ಜತೆ ಪುರಾವೆ ಇಲ್ಲದ ಆಪಾದನೆಗಳು ಮತ್ತು ತಪ್ಪು ದಾರಿಗೆಳೆಯುವ ಮಾಹಿತಿಯನ್ನು ಬೇಕೆಂದೆ ಬೆರೆಸಲಾಗಿದೆ ಎಂದು IAEA ಉದಾಹರಣೆ ಸಹಿತ ಟೀಕಿಸಿದೆ. ಬಟ್ಲರ್ ಕಮಿಷನ್ ವಿಶ್ವಸಂಸ್ಥೆ ಹಾಗು ಕೆಲವು ಸರ್ಕಾರಗಳಿಂದ ಲಭ್ಯವಿರುವ ಮಾಹಿತಿಯನ್ನು ನಿಶ್ಶಸ್ತ್ರೀಕರಣದ ಕೆಲಸಕ್ಕೆ ಬಳಸಬೇಕೆ ವಿನಹ, ಅಲ್ಲಿ ಸಿಕ್ಕಿದ ಮಾಹಿತಿಯನ್ನು ಬೇಹುಗಾರಿಕೆ ಸಂಸ್ಥೆಗಳಿಗೆ ಕೊಡುವುದು ಸಲ್ಲ, ಇಂತಹ ಕೆಲಸವನ್ನು UNSCOM ದ ಅಮೆರಿಕನ್, ಬ್ರಿಟನ್ ಸದಸ್ಯರು ಮಾಡಿದ್ದಾರೆ ಎಂದು ಟೀಕಿಸಿದ್ದು ವಿಶ್ವಸಂಸ್ಥೆಗೆ ಭದ್ರತಾ ಸಮಿತಿಗೆ ಇರುಸುಮುರುಸು ಆಗಲು ಕಾರಣವಾಗಿದೆ.


ಶ್ರೀಲಂಕಾ ಪ್ರಾಂತೀಯ ಚುನಾವಣೆ

ವಿವಾದಿತ - ಆಳುವ ರಂಗದ ವಿಜಯ

ಶ್ರೀಲಂಕಾದಲ್ಲಿ ಇತ್ತೀಚೆಗೆ ಉತ್ತರ-ಪಶ್ಚಿಮ ಪ್ರಾಂತ್ಯದ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಆಳುವ ಜನತಾ ಕೂಟ ವಿಜಯಗಳಿಸಿದ್ದರೂ ಚುನಾವಣೆಯ ನ್ಯಾಯಯುತತೆ ಬಗ್ಗೆ ತೀವ್ರ ಸಂಶಯ ವ್ಯಕ್ತಪಡಿಸಲಾಗಿದೆ. ಶ್ರೀಲಂಕಾದ ವಿರೋಧ ಪಕ್ಷಗಳು ಚುನಾವಣೆ ಸಮಯದಲ್ಲಿ ನಡೆದ ಅಭೂತ ಪೂರ್ವ ಹಿಂಸಾಚಾರ, ಅಕ್ರಮಗಳ ಬಗ್ಗೆ ದೂರು ಸಲ್ಲಿಸಿದ್ದು, ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಕೆಲವು ಸ್ವತಂತ್ರ ಗುಂಪುಗಳು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿವೆ.

ವಿಧಾನಸಭೆಯ 52 ಸೀಟುಗಳಲ್ಲಿ 30 ಸೀಟುಗಳನ್ನು ಆಳುವ ಪೀಪಲ್ಸ್ ಅಲಾಯನ್ಸ್ (PA) ಪಡೆದಿದ್ದು, 19 ಸೀಟುಗಳನ್ನು ಪ್ರಮುಖ ವಿರೋಧ ಪಕ್ಷ UNP ಪಡೆದಿದೆ.

ಇನ್ನು ಐದು ಪ್ರಾಂತ್ಯಗಳಲ್ಲಿ ಮುಂದೆ ಹೋಗಿರುವ ಪ್ರಾಂತೀಯ ವಿಧಾನಸಭಾ ಚುನಾವಣೆಗಳನ್ನು ಸರ್ಕಾರ ಇನ್ನೂ ನಡೆಸಬೇಕಾಗಿದೆ.



ಒಲಿಂಪಿಕ್ಸ್ ಕ್ರೀಡೆಗೆ ನಗರಗಳ ಆಯ್ಕೆಯಲ್ಲಿ ಭ್ರಷ್ಟಾಚಾರ ಹಗರಣ

ಕ್ರೀಡಾ ಕ್ಷೇತ್ರದಲ್ಲಿ ಭ್ರಷ್ಟಾಚಾರ ಅಪರೂಪವೇನಲ್ಲ. ಆದರೆ ಇದುವರೆಗೆ ಭ್ರಷ್ಟಾಚಾರ ಕೆಲವು ಕ್ರೀಡಾಪಟುಗಳು, ಅಂಪೈರುಗಳು, ಸಂಘಟನಾ ಸಮಿತಿಯ ಕೆಲವು ಸದಸ್ಯರಿಗೆ ಸೀಮಿತವಾಗಿದೆ ಎಂಬ ಭಾವನೆ ಇತ್ತು. ಆದರೆ ಕ್ರೀಡಾಕ್ಷೇತ್ರದ ಭಾರೀ ಹಗರಣವೆನಿಸಿಕೊಳ್ಳುವ ಒಲಿಂಪಿಕ್ಸ್ ಹಗರಣ ಬಯಲಾದ ನಂತರ ಕ್ರೀಡಾಕ್ಷೇತ್ರ ಸಂಘಟಿತ ಭ್ರಷ್ಟಾಚಾರದಿಂದ ಹೊರತಾದ್ದದ್ದೇನಲ್ಲ. ಅದರಲ್ಲೂ ಈವರೆಗೆ ಭಾರೀ ವರ್ಚಸ್ಸು ಇದ್ದ ಅಂತರ್ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯೂ ಇದಕ್ಕೆ ಹೊರತಾಗಿಲ್ಲ ಎಂಬುದು ಕ್ರೀಡಾಪ್ರೇಮಿ ಗಳನ್ನು, ಎಲ್ಲಾ ಚಿಂತನಶೀಲರನ್ನು ಸಂಕಟಕ್ಕೊಳಪಡಿಸಿದೆ.

ಆಸ್ಟ್ರೇಲಿಯಾದ ಸಿಡ್ನಿ ಹಾಗೂ ಅಮೆರಿಕದ ಸಾಲ್ಟ್‌ಲೇಕ್ ಸಿಟಿಯನ್ನು ಮುಂಬರುವ ಒಲಿಂಪಿಕ್ಸ್ ಕ್ರೀಡೆಗಳನ್ನು ಏರ್ಪಡಿಸುವ ನಗರಗಳಾಗಿ ಮಾಡುವ ಆಯ್ಕೆಯ ಸಂದರ್ಭದಲ್ಲಿ ತೀವ್ರ ಭ್ರಷ್ಟಾಚಾರ ನಡೆದಿದೆ ಎಂಬುದು ಆಪಾದನೆ. ಅಂತರ್ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಹಲವು ಸದಸ್ಯರು ಆ ನಗರಗಳ ಪರವಾಗಿ ಮತದಾನ ಮಾಡಲು ಒಂದು ಲಕ್ಷ ಡಾಲರಿನಷ್ಟು ಹಣವನ್ನು ಲಂಚವಾಗಿ ಕೊಡಲಾಯಿತು. ಇದಲ್ಲದೆ ಅವರಿಗೆ ಅವರ ಸಂಬಂಧಿಗಳಿಗೆ ಹಲವಾರು ಸವಲತ್ತುಗಳನ್ನು ಕೊಡಲಾಗಿದೆ ಎಂಬುದೂ ಆಪಾದನೆ. ಈ ಆಪಾದನೆ ಈ ಆಯ್ಕೆಯಲ್ಲಿ ಸೋತ ನಗರಗಳ ಅಧಿಕಾರಿಗಳಿಂದ ಬಂದಿದೆ ಮಾತ್ರವಲ್ಲ, ಗೆದ್ದ ನಗರಗಳ ಅಧಿಕಾರಿಗಳು ಪರೋಕ್ಷವಾಗಿ ಇದನ್ನು ಒಪ್ಪಿಕೊಂಡಿದ್ದಾರೆ.

ಒಲಿಂಪಿಕ್ಸ್ ಸಮಿತಿ ಯಾವಾಗಲೂ ಭ್ರಷ್ಟವಾಗಿತ್ತು ಎಂದು ಇದರ ಅರ್ಥವಲ್ಲ. 1984 ರ ಲಾಸ್ ಎಂಜಲೀಸ್ ಒಲಿಂಪಿಕ್ಸ್‌ನಿಂದ ಒಲಿಂಪಿಕ್ಸ್ ಕ್ರೀಡಾ ಸಮಿತಿ ಒಂದು ಭಾರಿ ಬಹುರಾಷ್ಟ್ರೀಯ ಕಂಪನಿ ರೀತಿ ತೀರಾ ವಾಣಿಜ್ಯ ದೃಷ್ಟಿಯಿಂದ ಕೆಲಸ ಮಾಡುತ್ತಿದೆ. ಕ್ರೀಡೆಯ ವಾಣಿಜ್ಯೀಕರಣ ದಾಪುಗಾಲು ಹಾಕುತ್ತಾ, ಕೋಟ್ಯಾಂತರ ಡಾಲರುಗಳ ಕಮರ್ಶಿಯಲ್ ಹಿತಾಸಕ್ತಿಗಳ ಆಟಾಟೋಪ ಈಗ ಮುಗಿಲು ಮುಟ್ಟಿದೆ. ಕ್ರೀಡಾ ಸಮಿತಿಯ ಅಧ್ಯಕ್ಷ ಈ ಬಗ್ಗೆ ತನಿಖೆ, ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಭರವಸೆ ನೀಡಿದ್ದರೂ, ಆ ಬಗ್ಗೆ ಯಾರಿಗೂ ಈಗ ನಂಬಿಕೆ ಉಳಿದಿಲ್ಲ.

ಕರ್ನಾಟಕದಲ್ಲಿ ಕಳೆದ ವಾರ

ಪುಟ 3 ರಿಂದ

ನಡುವೆ ವಿರಸ, ಘರ್ಷಣೆ ಉಂಟು ಮಾಡುವುದು ಜಾಗತೀಕರಣದ ಲಾಬ್ಬಿಯ ಕೆಲಸ. ಸಾಲದ್ದಕ್ಕೆ ದೇವೇಗೌಡ - ಹೆಗಡೆ ರಾಜಕೀಯ ಎದುರಾಡಳಿತನದ ಸೋಂಕು ಬೇರೆ. ರಾಜ್ಯದ ಪ್ರಮುಖ ಗೃಹಕೈಗಾರಿಕೆಯಾದ 35 ಲಕ್ಷ ಕುಟುಂಬಗಳಿಗೆ ಆಸರೆಯಾದ 10 ಸಾವಿರ ಕೋಟಿ ರೂ. ಬಂಡವಾಳದ ಉದ್ದಿಮೆಯನ್ನು ಈ ಅಪಾಯಗಳಿಂದ ರಕ್ಷಿಸುವ ನೀತಿ ಬೇಕಾಗಿದೆ.

'ಗರ್ಭಗುಡಿ...'ಯ ಪ್ರತಿಧ್ವನಿ- ನಂಜೇಗೌಡ ಅಮಾನತು

ರಾಜ್ಯ ಬಿಜೆಪಿಯಲ್ಲಿ ಮೂವರು ಪೂಜಾರಿಗಳಿದ್ದಾರೆ. ಅವರನ್ನು ಬಿಟ್ಟರೆ ಇತರರಿಗೆ 'ಗರ್ಭಗುಡಿ'ಯಲ್ಲಿ ಪ್ರವೇಶವಿಲ್ಲ ಎಂದು ಟೀಕಿಸಿದ್ದ ಬಿಜೆಪಿ ನಾಯಕ ನಂಜೇಗೌಡರನ್ನು ಪ್ರಾಥಮಿಕ ಸದಸ್ಯತ್ವ ಮತ್ತು ಶಾಸಕಾಂಗ ಪಕ್ಷದಿಂದ ಅಮಾನತುಗೊಳಿಸಿ ನೋಟೀಸು ಕೊಡಲಾಗಿದೆ. ಪಕ್ಷ ವಿರೋಧಿ ಚಟುವಟಿಕೆ, ನಾಯಕರ ನಿಂದನೆಯ ಆರೋಪವನ್ನು ಹೊರಿಸಲಾಗಿದೆ.

ಎಂಜಿನೀಯರುಗಳ ಮುಷ್ಕರ - ಪರಿಹಾರ ಕಾಣದೆ ಮುಂದುವರಿಕೆ

ಪರಿಶಿಷ್ಟ ಜಾತಿಯವರಿಗೆ ಹೆಚ್ಚುವರಿ ಬಡ್ತಿ ಮೀಸಲಾತಿ ವಿರೋಧಿಸಿ ನಡೆದಿರುವ ಎಂಜಿನೀಯರುಗಳ ಮುಷ್ಕರ 30 ದಿನಗಳನ್ನು ದಾಟಿದ್ದು ಇನ್ನೂ ಮುಂದುವರಿದಿದೆ. ಸರ್ಕಾರ ಇದಕ್ಕೆ ಎರಡೂ ವಿಭಾಗಗಳಿಗೆ ಒಮ್ಮತದ ಪರಿಹಾರ ಒದಗಿಸಲು ಸಾಧ್ಯವಾಗಿಲ್ಲ. ಇದರಿಂದ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಪ್ರಮುಖ ಅಡಚಣೆಯಾಗಿದೆ. ಅಲ್ಲದೆ ಜನರನ್ನು ಒಡೆಯುವ ಇಂತಹ ವಿಷಯಗಳು ಪರಿಹಾರ ಕಾಣದೆ ಮುಂದುವರಿಯುವುದು ಅಪಾಯಕರ.

ಕನ್ನಡಕ್ಕೆ ಕಂಟಕ ಕಂಪ್ಯೂಟರ್?

ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸಲು ರಾಜಕೀಯ ನಿರ್ಧಾರದ ಅಭಾವ, ಉದಾಸೀನತೆ, ತಕ್ಕ ವ್ಯವಸ್ಥೆಯ ಅಭಾವ - ಇವೆಲ್ಲ ಅಲ್ಲದೆ ಇನ್ನೊಂದು ಹೊಸ ಕಂಟಕ ಕಾಣಿಸಿಕೊಂಡಿದೆ. ಅದೆಂದರೆ ಕಂಪ್ಯೂಟರ್ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷ ಡಾ. ಎಂ.ಡಿ.ನಂಜುಂಡಪ್ಪ, ಕಂಪ್ಯೂಟರ್ ಬಳಕೆಯನ್ನು ಸಾಫ್ಟ್‌ವೇರ್‌ನ್ನು ಸರಕಾರ ಒದಗಿಸದಿರುವುದರಿಂದ ಕನ್ನಡದಲ್ಲಿ ವ್ಯವಹರಿಸಲು ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಕಚೇರಿ ಹಾಗೂ ಆಡಳಿತದಲ್ಲಿ ಬಳಕೆಗೆ ಬೇಕಾದ ಕನ್ನಡ ಸಾಫ್ಟ್‌ವೇರ್ ಈಗಾಗಲೇ ಮಾರುಕಟ್ಟೆ ಯಲ್ಲಿದೆ. ಆದರೆ ಸರ್ಕಾರ ವ್ಯಾಪಕವಾಗಿ ಇದನ್ನು ಬಳಸಲು, ಕೊಂಡುಕೊಳ್ಳಲು ವ್ಯವಸ್ಥೆ ಮಾಡಿಲ್ಲ ಎಂದಷ್ಟೆ. ಆದರೆ ಈಗಿನ ಸನ್ನಿವೇಶದಲ್ಲಿ 'ಕಂಪ್ಯೂಟರ್' ಕನ್ನಡಕ್ಕೆ ಇನ್ನೊಂದು ಕಂಟಕವಾಗಿದೆ.

ರಾಷ್ಟ್ರಪತಿಯನ್ನು ಕಾಣೆಮಾಡಿದ ದೂರದರ್ಶನ!

ಹಿಂದೆ ಕನ್ನಡವನ್ನು ಮಾತ್ರ ಕಾಣೆ ಮಾಡುತ್ತಿದ್ದ ಕನ್ನಡ ದೂರದರ್ಶನ ಇನ್ನೊಂದು ರೆಕಾರ್ಡ್ ಮಾಡಿದೆ. ರಾಷ್ಟ್ರಪತಿಯವರ ಫೋಟೋವನ್ನು 'ಕಾಣೆಯಾಗಿದ್ದಾರೆ' ತಲೆಬರಹದಲ್ಲಿ ತೋರಿಸಿದ್ದು - ಆಕಸ್ಮಿಕವೋ ಈಗಿನ ಸರ್ಕಾರದ ಆಶಯದ ಫಲವೋ ಗೊತ್ತಿಲ್ಲ. ಕೋಮುವಾದದ, ಸಾಮಾಜಿಕ ನ್ಯಾಯದ ಬಗ್ಗೆ ರಾಷ್ಟ್ರಪತಿಗಳಿಗೂ ಸರ್ಕಾರಕ್ಕೂ ಇರುವ ಅಂತರದ ಸೂಚಕವೇ ಇದು?

ಬಿಪಿಎಲ್ ಕಾರ್ಮಿಕರ ಬಂಧನ

ಪುಟ 3 ರಿಂದ

ತರಿಸಿಕೊಂಡು ಫೆ. 3 ರಂದು ಮಾಲಕನೊಡನೆ ಮಾತನಾಡಿದರೆ ಹೊರತು ಕಾರ್ಮಿಕರ ಪ್ರತಿನಿಧಿಗಳನ್ನು.ಕರೆಸಲಿಲ್ಲ. ಮರುದಿನವೇ ನಿಷೇದಾಜ್ಞೆ, ಉಪವಾಸ ಸತ್ಯಾಗ್ರಹದ ಟೆಂಟ್ ಕೀಳುವ ಪ್ರಯತ್ನ ಮತ್ತಿತರ ದೌರ್ಜನ್ಯ ನಡೆದಿರುವುದನ್ನು ಕಾಂ.ಸೂರಿ ಬಲವಾಗಿ ಖಂಡಿಸುತ್ತಾ ಸರ್ಕಾರ ಶೋಷಕರ ಪರವಹಿಸುತ್ತಿದೆ ಎಂದು ಟೀಕಿಸಿದರು. ಮೂರು ವರ್ಷದ ಹಿಂದೆ ವಳ್ಳಿಯಪ್ಪ ಕಾರ್ಖಾನೆ ಕಾರ್ಮಿಕರು ರಸ್ತೆ ತಡೆ ನಡೆಸಿದ ಮಾತ್ರಕ್ಕೆ ಮೂರು ಕಾರ್ಮಿಕರನ್ನು ಸುಟ್ಟು ಚಳುವಳಿ ಹತ್ತಿಕ್ಕಲು ಪ್ರಯತ್ನಿಸಿದರೂ ಹೋರಾಟ ಮುಂದು ವರಿಯುತ್ತಿರುವದನ್ನು ನೆನಪಿಸಿದರು. ಕೂಡಲೇ ಸರ್ಕಾರ ಮಧ್ಯೆ ಪ್ರವೇಶಿಸಿ ಕಾರ್ಮಿಕರ ಕಾನೂನು ಬದ್ಧ ಹಕ್ಕುಗಳನ್ನು ರಕ್ಷಿಸುವಂತೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿಯೂ ಆದ ಸೂರಿಯವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಸಿಐಟಿಯು ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್ ಬಿಪಿಎಲ್ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಕಾಣದಾದರೇ ಹೋರಾಟದ ಕಾವು ರಾಜ್ಯವ್ಯಾಪಿ ಹಬ್ಬಲಿದೆ ಎಂದರು. ಕಾನೂನು ಉಲ್ಲಂಘಿಸುತ್ತಿರುವ ಬಿಪಿಎಲ್ ಮಾಲೀಕ ನಂಬಿಯಾರ್‌ನನ್ನು ಜೈಲಿಗೆ ಹಾಕಿದರೆ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ಕಾಣಬಹುದಾಗಿದೆ ಎಂದರು. ರೈತ ಸಂಘದ ಪಿ. ಜಗನ್ನಾಥ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು.

ಕಾರ್ಮಿಕರ ಈ ಹೋರಾಟಕ್ಕೆ ಬೆಂಬಲವಾಗಿ ವಿವಿಧ ಕಾರ್ಖಾನೆಗಳ ಕಾರ್ಮಿಕರು ಸೇರಿದಂತೆ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

ಉಪವಾಸ ಸತ್ಯಾಗ್ರಹಿಗಳ ಬಂಧನ: ಜನವರಿ 28 ರಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಸಂಘದ ಅಧ್ಯಕ್ಷರಾದ ಆರ್. ಶ್ರೀನಿವಾಸ್. ವೀಣಾ, ಕಲ್ಪನ ಮತ್ತು ರವಿ ಇವರನ್ನು ಫೆ. 4 ರಂದು ಮುಂಜಾನೆ ಬಲವಂತವಾಗಿ ಬಂಧಿಸಿ ಆತ್ಮಹತ್ಯೆ ಯತ್ನದ ಕೇಸು ದಾಖಲಿಸಿಕೊಂಡಿದ್ದಾರೆ.

ಬಿಡುಗಡೆಗೆ ಸಿಐಟಿಯು ಒತ್ತಾಯ: ಬಂಧಿಸಿರುವ ಉಪವಾಸ ಸತ್ಯಾಗ್ರಹಿಗಳು ಹಾಗೂ ಜೈಲಿಗೆ ಕಳುಹಿಸಿರುವ ಕಾರ್ಮಿಕರನ್ನು ಬಿಡುಗಡೆಗೊಳಿಸುವಂತೆ ಆಗ್ರಹಿಸಿರುವ ಸಿಐಟಿಯು ರಾಜ್ಯ ಸಮಿತಿ ಬಂಧನದ ಕ್ರಮವನ್ನು ಖಂಡಿಸಿದೆ.

ಶಿಕ್ಷಣದಲ್ಲಿ ಕಾವಿಬಣ್ಣ ವಿರೋಧಿಸಿ ಸೌಹಾರ್ದತಾ ಬಲವರ್ಧನೆಗಾಗಿ ತೀವ್ರ ಕಾರ್ಯಾಚರಣೆ

SFI 8ನೇ ರಾಜ್ಯ ಸಮ್ಮೇಳನದ ಕರೆ

ಜಗತ್ತಿನ ಶೇ 16 ರಷ್ಟು ಜನಸಂಖ್ಯೆ ಹೊಂದಿರುವ ಭಾರತ ಜಗತ್ತಿನ ಶೇ 32.8 ರಷ್ಟು ಅನಕ್ಷರಸ್ಥರನ್ನು ತನ್ನ ಒಡಲಲ್ಲಿ ಹೊತ್ತಿರುವ ಭಾರತ ಶೈಕ್ಷಣಿಕವಾಗಿ ಜಗತ್ತಿನ 115ನೇ ಸಾಲಿನಲ್ಲಿರುವುದು ಖಂಡನೀಯ ಹಾಗೂ ಅತ್ಯಂತ ನಾಚಿಕೆಗೇಡಿನ ಸಂಗತಿ ಎಂದು ಪಶ್ಚಿಮ ಬಂಗಾಳದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಕಾಂತಿಬಿಸ್ವಾಸ್ ವಿಷಾದಿಸಿದರು.

ಅವರು ಉತ್ತರಕನ್ನಡ ಶಿರಸಿಯಲ್ಲಿ ಜನವರಿ 28 ರಿಂದ 31 ರವರೆಗೆ ನಡೆದ ಎಸ್‌ಎಫ್‌ಐ 8ನೇ ರಾಜ್ಯ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಜನವರಿ 29 ರಂದು ಉದ್ಘಾಟಿಸಿ ಮಾತನಾಡಿದರು.

ಇಂತಹ ಗಂಭೀರ ಸ್ಥಿತಿಯಲ್ಲಿರುವ ದೇಶದ ಶಿಕ್ಷಣವನ್ನು ನಿರ್ಲಕ್ಷಿಸುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ವೇದ ಪುರಾಣ, ಸಂಸ್ಕೃತದ ಮೂಲಕ ಹಿಂದುತ್ವವನ್ನು ಶಿಕ್ಷಣಧ ಮೇಲೆ ಹೇರ ಹೊರಟಿದೆ ಎಂದರು ಕಾಂತಿ ಬಿಸ್ವಾಸ್. ಆಧುನಿಕ ಶಿಕ್ಷಣದ ಅಗತ್ಯಗಳನ್ನು ವೇದ, ಪುರಾಣ, ಸಂಸ್ಕೃತಗಳು ಪೂರೈಸಲಾರವು ಎಂದ ಸಚಿವರು ಇತಿಹಾಸ ತಿರುಚುವ, ಶಿಕ್ಷಣದಲ್ಲಿ ಕೋಮುವಾದಿಕರಣದ ಪ್ರಯತ್ನ ದೇಶದ ಐಕ್ಯತೆ-ಸಮಗ್ರತೆಗೆ ಗಂಡಾಂತರಕಾರಿ ಎಂದು ಶಿಕ್ಷಣ ಸಚಿವರು ವಿದ್ಯಾರ್ಥಿ ಸಮುದಾಯವನ್ನು ಎಚ್ಚರಿಸಿದರು.

ನಾಲ್ಕು ದಿನಗಳ ಈ ಸಮ್ಮೇಳನದ ಪ್ರತಿನಿಧಿಗಳು ಉತ್ತಮ ರೀತಿಯ ಚರ್ಚೆಯಲ್ಲಿ ಪಾಲ್ಗೊಂಡು ಕರ್ನಾಟಕದ ವಿದ್ಯಾರ್ಥಿ ಚಳುವಳಿಯ ಮಹತ್ವ ಅರಿತು ನಿರ್ವಹಿಸಬೇಕಾದ ಪಾತ್ರ ಸೇರಿದಂತೆ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ರಂಗಗಳ ಬಗ್ಗೆ ಚರ್ಚಿಸಿ ಕೆಳಗಿನ ನಿರ್ಣಯಗಳ ಜತೆ ಹಲವು ನಿರ್ಣಯಗಳನ್ನು ಸಮ್ಮೇಳನ ಕೈಗೊಂಡಿತು.

ಖಾಸಗಿ ವಿ.ವಿ. ಮಸೂದೆ ವಾಪಸ್ಸಿಗೆ ಒತ್ತಾಯಿಸಿ, ಮೆಡಿಕಲ್ ಕಾಲೇಜುಗಳ ಆರಂಭಕ್ಕೆ ಅನುಮತಿ ವಿರೋಧಿಸಿ, ಶಿಕ್ಷಣದ ವ್ಯಾಪಾರೀಕರಣ, ಶಿಕ್ಷಣದಲ್ಲಿ ಕೋಮುವಾದಿ ಕರಣ ವಿರೋಧಿಸಿ, ಬಿಹಾರದ ದಲಿತರ ಸಾಮೂಹಿಕ ಕಗ್ಗೊಲೆ, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ಖಂಡಿಸಿ, ಗ್ರಾಮೀಣ ಕೃಪಾಂಕಕ್ಕೆ ಸುಗ್ರೀವಾಜ್ಞೆ ಹೊರಡಿಸಲು ಒತ್ತಾಯಿಸುವುದು ಸೇರಿದಂತೆ ಶೈಕ್ಷಣಿಕ ರಂಗ ಸೇರಿದಂತೆ ಎಲ್ಲಾ ಪ್ರಗತಿಪರ ಹೋರಾಟ ಬೆಂಬಲಿಸುವ ನಿರ್ಣಯ ಅಂಗೀಕರಿಸಿತು.

ಸಮಾರೋಪ ಸಮಾರಂಭ

ಜನವರಿ 31, 99 ರ ಸಂಜೆ ಸಮ್ಮೇಳನದ ಸಮಾರೋಪ ಸಮಾರಂಭವು ಕೆ.ಎನ್. ಉಮೇಶ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿದ್ದ ಕೃಷ್ಣ ಪ್ರಸಾದ್, ಎಸ್‌ಎಫ್‌ಐ ಅಖಿಲ ಭಾರತ ಕಾರ್ಯದರ್ಶಿ, ಮಾತನಾಡಿ ಕರ್ನಾಟಕದಲ್ಲಿ ಎಸ್‌ಎಫ್‌ಐ ಬೆಳೆಯುತ್ತಿದೆ. ಆದರೆ ಇಂದಿನ ಸಂದರ್ಭ ಸವಾಲುಗಳನ್ನು ಎದುರಿಸಲು ಇಷ್ಟು ಸಾಲದು, ಎಡ-ಪ್ರಜಾಪ್ರಭುತ್ವ ಚಳುವಳಿ ಇದ್ದ ಕಡೆ ಮಾತ್ರವೇ ಬಲಿಷ್ಠ ವಿದ್ಯಾರ್ಥಿ ಚಳುವಳಿ ಇರಲು ಸಾಧ್ಯ ಎಂಬ ನಂಬಿಕೆ ವಾಸ್ತವವಲ್ಲ ಎಡ, ಪ್ರಜಾಪ್ರಭುತ್ವ ಚಳುವಳಿ ಬಲಿಷ್ಠವಾಗಿಲ್ಲದ, ಕಾಂಗ್ರೆಸ್-ಬಿಜೆಪಿಗಳೇ ಪ್ರಮುಖ ರಾಜಕೀಯ ಶಕ್ತಿಗಳಾಗಿರುವ ಹಿಮಾಚಲ ಪ್ರದೇಶದಲ್ಲಿ ಎಸ್‌ಎಫ್‌ಐ ಸಂಘಟನೆ ಆ ರಾಜ್ಯದ ಅಗ್ರಮಾನ್ಯ ವಿದ್ಯಾರ್ಥಿ ಸಂಘಟನೆಯಾಗಿ ಮುನ್ನಡೆ ಸಾಧಿಸುತ್ತಿದೆ. ಇದು ನಮಗೆ ಮಾದರಿಯಾಗಲಿ ಎಂದರು.

ಇಡೀ ಸಮ್ಮೇಳನಕ್ಕೆ ಅತ್ಯಂತ ಸ್ಫೂರ್ತಿದಾಯಕ ಅಂತ್ಯದ ಮೆರುಗನ್ನು ಕೊಟ್ಟದ್ದು ಜಿ.ಸಿ.ಬಯ್ಯಾರೆಡ್ಡಿಯವರ ಮಾತುಗಳು. ಮಕ್ಕಳನ್ನು ಸುಡುವುದು, ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮುಂತಾದವು ಕೋಮುವಾದಿ ಶಕ್ತಿಗಳ ಪರಂಪರೆ, ದೇಶದ ಸ್ವಾತಂತ್ರ್ಯಕ್ಕಾಗಿ, ಸಮೃದ್ಧ ಸಮ ಸಮಾಜದ ನಿರ್ಮಾಣದ ಆಶಯಗಳಿಗಾಗಿ ಎದೆಗುಂದದೆ ನಗುನಗುತ್ತಾ ನೇಣುಗಂಬವನ್ನೇರಿದ ಶಹೀದ್ ಭಗತ್ ಸಿಂಗ್‌ರ ಪರಂಪರೆ ನಮ್ಮ ಆದರ್ಶ, ಕೋಟ್ಯಾಂತರ ರೈತ-ಕಾರ್ಮಿಕರ ಶೋಷಿತ ಜನರ ಬೆವರಿನ ಋಣದಲ್ಲಿ ಶಿಕ್ಷಣ ಪಡೆಯುತ್ತಿರುವ ನಾವು, ಅಮಾನುಷ ಜಾತಿ ಪದ್ಧತಿಯ ಕ್ರೌರ್ಯವನ್ನು, ಅಸಮಾನತೆಯನ್ನು ಮೆರೆಯುತ್ತಿರುವ ಈ ವ್ಯವಸ್ಥೆ ಬದಲಾವಣೆಗಾಗಿ ನಮ್ಮನ್ನು ಅರ್ಪಿಸಿಕೊಳ್ಳೋಣ ಎಂದು ಕರೆ ನೀಡಿದರು.

ಈ ಸಮ್ಮೇಳನಕ್ಕೆ ಶುಭಾಶಯಗಳನ್ನು ಕೋರಿ ಹಲವು ಸಂಗಾತಿಗಳು ಮಾತನಾಡಿದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ಕಾರ್ಮಿಕ ಮುಖಂಡರೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಎಸ್.ಸೂರ್ಯ ನಾರಾಯಣ ರಾವ್, ಎಸ್‌ಎಫ್‌ಐ ತಮಿಳುನಾಡು ಘಟಕ ಅಧ್ಯಕ್ಷರಾದ ತಂಗಮೋಹನ್, ವಿಮಾ ನೌಕರರ ಸಂಘ(AIEEA) ಪರವಾಗಿ ಸಿ.ಆರ್. ಶಾನಬಾಗ್, ಸಿಐಟಿಯು ಪರವಾಗಿ ಟಿ.ಎಸ್. ನಾಯಕ್, ಡಿವೈಎಫ್‌ಐ ಪರವಾಗಿ ಶಾಂತರಾಮ ನಾಯಕ್ ಮುಂತಾದವರು ಮಾತನಾಡಿದರು.

4 ದಿನಗಳ ಈ ಸಮ್ಮೇಳನವನ್ನು ಯಶಸ್ವಿ ಮಾಡಲು ಹಗಲಿರುಳು ಶ್ರಮಿಸಿದ ಸ್ವಾಗತ ಸಮಿತಿಯ ಮುಖಂಡರು ಸದಸ್ಯರುಗಳು ಹಾಗೂ ಸ್ವಯಂ ಸೇವಕರಿಗೆ ವಂದನೆ-ನೆನಪಿನ ಕಾಣಿಕೆ ವಿತರಣೆಯೊಂದಿಗೆ ಸಮಾರಂಭ ಮುಗಿಯಿತು.

ನೂತನ ರಾಜ್ಯ ಸಮಿತಿ ಆಯ್ಕೆ

ಎಸ್‌ಎಫ್‌ಐ 8ನೇ ರಾಜ್ಯ ಸಮ್ಮೇಳನವು 52 ಜನರ ನೂತನ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿದ್ದು ರಾಜ್ಯ ಅಧ್ಯಕ್ಷರಾಗಿ ಕೆ.ಎನ್.ಉಮೇಶ್ ಪುನರಾಯ್ಕೆಯಾಗಿದ್ದಾರೆ. ರಾಜ್ಯ ಕಾರ್ಯದರ್ಶಿಯಾಗಿ ಬೆಂಗಳೂರಿನ ಆರ್.ರಾಮಕೃಷ್ಣ ಆಯ್ಕೆಯಾಗಿದ್ದಾರೆ. ಹೊಸ ಪದಾಧಿಕಾರಿಗಳ ವಿವರ ಕೆಳಕಂಡಂತಿದೆ.

ಉಪಾಧ್ಯಕ್ಷರುಗಳು: ಕೆ.ಎಸ್.ಲಕ್ಷ್ಮಿ (ಬೆಂಗಳೂರು), ಬಸಮ್ಮ(ಬೆಂಗಳೂರು), ಕೃಷ್ಣೇಗೌಡ(ಮಂಡ್ಯ), ಯುವರಾಜ್ ಕಂಬಾಳಿ ಮಠ್(ಉತ್ತರ ಕನ್ನಡ), ಜಿ.ನಾಗರಾಜ್(ಕೊಪ್ಪಳ)

ಸಹ ಕಾರ್ಯದರ್ಶಿಗಳು: ಸುನೀಲ್ ಕುಮಾರ್ ಬಜಾಲ್(ಮಂಗಳೂರು), ಶರಣ ಬಸವ(ರಾಯಚೂರು), ಲಕ್ಷ್ಮಿನಾರಾಯಣ (ಕೋಲಾರ), ಜೈಲಾಲ್ ತೋಟದ ಮನಿ(ಗುಲ್ಬರ್ಗ)



ಹಳೇ ಬೇರು - ಹೊಸಚಿಗುರು

ಕಳೆದ 28 ವರ್ಷಗಳಲ್ಲಿ ಎಸ್‌ಎಫ್‌ಐ ಸಂಘಟನೆಯನ್ನು ಕಟ್ಟಿ ಬೆಳೆಸಲು ಶ್ರಮಿಸಿದ ಹಿರಿಯ ಸಂಗಾತಿಗಳು ಹಾಗೂ ಪ್ರಸ್ತುತ ವಿದ್ಯಾರ್ಥಿ ಮುಖಂಡರ ನಡುವಿನ ಸಂವಾದ - ಹೃದಯಸ್ಪರ್ಶಿ ಕಾರ್ಯಕ್ರಮ ಸಮ್ಮೇಳನದ ಸಂದರ್ಭದಲ್ಲಿ ನಡೆಯಿತು. ಜನವರಿ 29 ರ ಸಂಜೆ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಎಫ್‌ಐ ನ ಸಂಸ್ಥಾಪಕ ಸದಸ್ಯರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿ ವಹಿಸಿದ್ದರು. ಈ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ ದುಡಿದ ಕಾಂ. ಶಾಂತರಾಮ ನಾಯಕ್, ರಾಜ್ಯ ಉಪಾಧ್ಯಕ್ಷರಾಗಿ ದುಡಿದ ಕಾಂ. ಶ್ರೀರಾಮ್(ಕೋಲಾರ), ಕಾಂ. ಇ.ಬಸವರಾಜು(ತುಮಕೂರು) ಮುಂತಾದವರು ಅನುಭವವನ್ನು ಹಂಚಿಕೊಂಡರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಆರಂಭದ ದಿನಗಳಲ್ಲಿ ಎಸ್‌ಎಫ್‌ಐ ನಬಗ್ಗೆ ಕೋಮುವಾದಿಗಳು ನಡೆಸಿದ ಅಪಪ್ರಚಾರ, ಬೆದರಿಕೆಯನ್ನು ಸವಾಲಾಗಿ ಸ್ವೀಕರಿಸಿ ಸಂಘಟನೆಗೆ ದುಡಿದದ್ದನ್ನು ಕಾಂ. ಶಾಂತರಾಮ ನಾಯಕ್, ಹಂಪಿ-ಅಧ್ಯಯನ ಶಿಬಿರದಲ್ಲಿ ಕಾಂ. ಪಿ.ರಾಮಚಂದ್ರರಾವ್‌ರವರ ಮಾತು-ವಿಚಾರಗಳಿಂದ ಪ್ರಭಾವಿತರಾಗಿ ಸಂಘಟನೆಯಲ್ಲಿ ಮತ್ತಷ್ಟು ಗಟ್ಟಿಯಾದದ್ದನ್ನು ಇ.ಬಸವರಾಜು ನೆನಪಿಸಿಕೊಂಡರು.

ತಮ್ಮ ಸುದೀರ್ಘ ನೆನಪಿನ ಸುರುಳಿಯನ್ನು ಬಿಚ್ಚಿದ ಜಿ.ವಿ.ಶ್ರೀರಾಮರೆಡ್ಡಿಯವರು 1971 ರಲ್ಲಿ ಕರ್ನಾಟಕದಲ್ಲಿ ಎಸ್‌ಎಫ್‌ಐ ಆರಂಭವಾದ ಬಗ್ಗೆ, ಚಿಂತಾಮಣಿಯಲ್ಲಿ ಸದಸ್ಯತ್ವ ಮಾಡಿದ ಮಾರನೇ ದಿನವೇ ಪೋಲೀಸರ ಬಂಧನ, ಜೈಲುವಾಸ ಅನುಭವಿಸಬೇಕಾಗಿ ಬಂದದ್ದು, ಆರಂಭದ ಆ ದಿನಗಳ ಪೋಲೀಸರ ದೌರ್ಜನ್ಯ, ನೂರಾರು ಮೊಕದ್ದಮೆಗಳು, ಕಷ್ಟಪರಂಪರೆ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸಂಘಟನೆ ಮಾಡುವಾಗ ರಾತ್ರಿ ಬಸ್ ನಿಲ್ದಾಣಗಳಲ್ಲೆ ಉಳಿಯಬೇಕಾದ ಸನ್ನಿವೇಶ, ಬೆಂಗಳೂರಿನ ಮಿಂಟೋ ಆಸ್ಪತ್ರೆಯ ಕಾಂಪೌಂಡ್‌ನಲ್ಲಿ ಪೇಪರ್ ಹಾಕಿಕೊಂಡು ಮಲಗಿದ ತಮ್ಮ ಅನುಭವಗಳು, ಕರಾಳ ತುರ್ತು ಪರಿಸ್ಥಿತಿಯ ದೌರ್ಜನ್ಯವನ್ನು, ಸರ್ವಾಧಿಕಾರವನ್ನು ಎದುರಿಸಿ ದೇಶಾದ್ಯಂತ ಎಸ್‌ಎಫ್‌ಐ ನಡೆಸಿದ ಹೋರಾಟದ ಭಾಗವಾಗಿ ಕರ್ನಾಟಕದ ಎಸ್‌ಎಫ್‌ಐನ ಹೋರಾಟಗಳನ್ನು, ಜೈಲು ವಾಸದ ಅನುಭವಗಳನ್ನು ಅವರು ನೆನಪಿಸಿಕೊಂಡರು.

ಕಳೆದ 28 ವರ್ಷಗಳಲ್ಲಿ ಎಸ್‌ಎಫ್‌ಐ ಗುಣಾತ್ಮಕವಾಗಿ ಬೆಳೆದಿದೆ, ಇನ್ನೂ ಬೆಳೆಯಬೇಕಾಗಿದೆ ಎಂದರು.

ಎಸ್‌ಎಫ್‌ಐ ಮಾಜಿ ರಾಜ್ಯ ಅಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ, ಕಾರ್ಯದರ್ಶಿಗಳಾಗಿದ್ದ ಎಸ್.ವೈ.ಗುರುಶಾಂತ್, ಕಾಂ. ಮಹಂತೇಶ್(ದಾವಣಗೆರೆ), ಸುಭಾಶ ಕೊಪ್ಪಿಕರ್, ವಿಠಲ್ ಭಂಡಾರಿ, ವಿ.ಎನ್. ಹೆಗಡೆ, ಪ್ರಕಾಶ್ ಭಟ್, ಜಗದೀಶ್ ಬಾವೆ, ಟಿ.ಎಸ್.ಹಟ್ಟಿ, ಎಂ.ಪಿ.ಹೆಗಡೆ, ಅಶೋಕ್(ಎಲ್ಲರೂ ಉ.ಕ), ಕಾಂ. ಅಲ್ಲಾಬಕಾಷ್, ಕಾಂ. ಮುಜೀಬ್ (ತುಮಕೂರು), ಕಾಂ. ನಿಂಗಪ್ಪ, ಮಾರುತಿ, ಪ್ರಭುಗೌಡ ಪಾಟೀಲ್ (ರಾಯಚೂರು) ಮುಂತಾದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ದೇಶ ಭಕ್ತ ಗಾಂಧಿಯನ್ನು ಕೊಂದ ಕೋಮುವಾದಿಗಳಿಂದ ಧರ್ಮಕ್ಕೆ ಅಪಚಾರ - ಎಸ್.ವೈ.ಗುರುಶಾಂತ್

ಕೋಮುಸೌಹಾರ್ದತೆಯನ್ನು ಪ್ರತಿಪಾದಿಸಿದ ಧಾರ್ಮಿಕ ವ್ಯಕ್ತಿ ಗಾಂಧಿಯನ್ನು ಧರ್ಮದ ಹೆಸರಿನಲ್ಲಿ ಕೊಲೆ ಮಾಡಲಾಯಿತು. ಕೋಮುವಾದಿಗಳಿಗೆ ಬೇಕಿರುವುದು ಧರ್ಮ ರಕ್ಷಣೆಯಲ್ಲ ಅಧಿಕಾರ ಎಂದು ಡಿವೈಎಫ್‌ಐ ರಾಜ್ಯ ಅಧ್ಯಕ್ಷರಾದ ಎಸ್.ವೈ.ಗುರುಶಾಂತ್ ತಿಳಿಸಿದರು. ಅವರು ಎಸ್‌ಎಫ್‌ಐ ಲನೇ ಕರ್ನಾಟಕ ರಾಜ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಜನವರಿ ೩೦ ರಂದು ನಡೆದ 'ಕೋಮುವಾದಿ ಸವಾಲುಗಳು ಮತ್ತು ಪ್ರಸಕ್ತ ಸನ್ನಿವೇಶ' ಎಂಬ ವಿಚಾರ ಸಂಕಿರಣದಲ್ಲಿ ತಮ್ಮ ವಿಚಾರ ಮಂಡಿಸಿ ಮಾತನಾಡಿದರು.

ಇದೀಗ ಭರದಿಂದ ಜಾರಿಯಾಗುತ್ತಿರುವ ಆರ್ಥಿಕ, ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗಳು ಹಾಗೂ ಕೋಮುವಾದ ಪರಸ್ಪರ ಪೂರಕವಾಗಿವೆ. ಸಮಾಜದಲ್ಲಿ ಗುಪ್ತ ಗಾಮಿನಿಯಾಗಿ ಹರಿಯುತ್ತಿದ್ದ ಕೋಮು ವಾದ, ಈಗ ಹೊಸ ಆರ್ಥಿಕ ನೀತಿಗಳು, ಉದಾರೀಕರಣ ನೀತಿಯಿಂದ ದೇಶದಲ್ಲಿ ವಿಧ್ವಂಸಕ ಕೃತ್ಯಗಳು ನಡೆಯುತ್ತಿವೆ ಎಂದು ತಿಳಿಸಿದರು.

ತಾವು ಮಾತ್ರವೇ ದೇಶಪ್ರೇಮಿಗಳೆಂದು ಸಾರಿಕೊಳ್ಳುವ ಆರ್‌ಎಸ್‌ಎಸ್-ಬಿಜೆಪಿ ಮುಂತಾದ ಮತಾಂಧ ಶಕ್ತಿಗಳಿಗೆ, ದೇಶ ಪ್ರೇಮ ಇದ್ದದ್ದೇ ಆದಲ್ಲಿ ಅಮೆರಿಕಾ ಮತ್ತಿತರ ಸಾಮ್ರಾಜ್ಯಶಾಹಿ ದೇಶಗಳಿಗೆ ಡೊಗ್ಗು ಸಲಾಮು ಹಾಕಿ ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತ ಪ್ರವೇಶ ನೀಡಲಾಗುತ್ತಿದೆಯೇಕೆ ಎಂದು ಅವರು ಪ್ರಶ್ನಿಸಿದರು. ಅಣ್ವಸ್ತ್ರ ಸ್ಫೋಟದ ಬೆನ್ನ ಹಿಂದೆಯೇ ದೇಶದ ಗಲ ತೈಲ ಬಾವಿಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸಲಾಗಿದೆ. ದೇಶಾದ್ಯಂತ ದಲಿತರು, ಮಹಿಳೆಯರು, ಅಲ್ಪಸಂಖ್ಯಾತರ ಮೇಲೆ ವ್ಯವಸ್ಥಿತ ಧಾಳಿ ನಡೆಸುತ್ತಿರುವ ಈ ದುಷ್ಟ ಶಕ್ತಿಗಳಿಗೆ ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರಿಯುವ ಹಕ್ಕಿಲ್ಲವೆಂದು ಅವರು ಟೀಕಿಸಿದರು. ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಪ್ರಗತಿಪರ ಸಾಹಿತಿಗಳಾದ ಆರ್.ವಿ. ಭಂಡಾರಿಯವರು ಮಾತನಾಡಿ, ಸಮಾಜವನ್ನು ತಮ್ಮ ಸ್ವಾರ್ಥ ಹಿತಾಸಕ್ತಿಗೆ ತಕ್ಕಂತೆ ಇರಬೇಕೆಂದು ಬಯಸುವ ದುಷ್ಟ ಶಕ್ತಿಗಳು ಇತಿಹಾಸವನ್ನು ವಿಕೃತಗೊಳಿಸುವ ನೀತಿಗಳ ವಿರುದ್ಧ ತೀವ್ರವಾದ ಹೋರಾಟ ನಡೆಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರಾದ ಕೆ.ಎನ್.ಉಮೇಶ್ ವಿಷಯ ಪ್ರಸ್ತಾವನೆ ಮಾಡಿದರು. 'ಮುನ್ನಡೆ' ಪತ್ರಿಕೆಯ ಸಂಪಾದಕರಾದ ಕಶ್ಯಪ ಪಟಗಾರ ಅವರು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.

ದೇಶಾದ್ಯಂತ ಪ್ರತಿಭಟನೆ

ಪುಟ 1 ರಿಂದ


ಮೂಲಕ ದೇಶವನ್ನು ಅದು ಆಳ ಬಯಸುತ್ತಿದೆ ಎಂದು ಟೀಕಿಸಿದರು. ಪ್ರಧಾನ ಮಂತ್ರಿಗಳ ಹಿಂದಿನ ಭಾಷಣಗಳು ಈಗ ಪುಸ್ತಕ ರೂಪದಲ್ಲಿ ಪ್ರಕಟವಾಗಿದ್ದು ಅವರು ಪ್ರತಿಪಕ್ಷದಲ್ಲಿದ್ದಾಗ, ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಉಪದೇಶ ಝಾಡಿಸುತ್ತಿದ್ದ ಪ್ರಧಾನಿಗಳು ಈಗ ಅಧಿಕಾರದ ಗದ್ದುಗೆಗೇರಿ ಪ್ರಜಾಪ್ರಭುತ್ವವನ್ನು ಮರೆತಂತಿದೆ ಎಂದರು ಸುರ್ಜಿತ್. ಪ್ರಸ್ತುತ ಸರಕಾರದ ಆರ್ಥಿಕ ನೀತಿಗಳ ಪ್ರಸ್ತಾಪಿಸುತ್ತಾ ಸಿಪಿಐ(ಎಂ) ಮುಖಂಡರು ಈ ಸರಕಾರ ಸಾರ್ವಜನಿಕ ವಲಯವನ್ನು ನಾಶ ಮಾಡ ಬಯಸುತ್ತಿದೆ ಎಂದರು. 'ಸ್ವದೇಶಿ' ಯ ಬಗ್ಗೆ ಏನೇ ಹೇಳಿಕೊಳ್ಳಲಿ, 1991 ರಲ್ಲಿ ನರಸಿಂಹ ರಾವ್ ಸರಕಾರ ವಾಸ್ತವವಾಗಿ ತಮ್ಮ ನೀತಿಗಳನ್ನು ಅಂಗೀಕರಿಸಿದೆ ಎಂದ ಆಗಿನ ಬಿಜೆಪಿ ಅಧ್ಯಕ್ಷ ಅಡ್ವಾಣಿಯವರ ಹೇಳಿಕೆಗೆ ಅನುಗುಣವಾಗಿಯೇ ಇದೆ ಎಂದು ಸುರ್ಜಿತ್ ವ್ಯಂಗ್ಯವಾಗಿ ನುಡಿದರು.



ಹುತಾತ್ಮರ ದಿನವಾದ ಜನವರಿ 30 ರ ಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿಯು ಕೋಮು ಸಾಮರಸ್ಯವನ್ನು ಸಾರುವ 'ಸೌಹಾರ್ದಜ್ಯೋತಿ' ಕಾರ್ಯಕ್ರಮವನ್ನು ಸಂಘಟಿಸಿತ್ತು. ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳಾದ ಬಿ.ಸಿ.ರಾಮಚಂದ್ರಶರ್ಮ, ವ್ಯಾಸರಾಯ ಬಲ್ಲಾಳ, ಸುಮಂಗಲಿ ಸೇವಾಶ್ರಮದ ಸುಶೀಲಮ್ಮ ಜೆ.ಎಂ.ಎಸ್. ರಾಜ್ಯ ಅಧ್ಯಕ್ಷೆ ಕೆ.ಎಸ್.ವಿಮಲಾರವರು ಪಾಲ್ಗೊಂಡು ಕೋಮುಸಾಮರಸ್ಯದ ಮಹತ್ವವನ್ನು ವಿವರಿಸಿ ಎಲ್ಲಾ ಜಾತ್ಯಾತೀತ ಶಕ್ತಿಗಳು ಒಗ್ಗೂಡಲು ಕರೆ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಕೋಮುಸಾಮರಸ್ಯ ಸಾರುವ ಬೀದಿ ನಾಟಕವನ್ನು ಜಾನ್ ದೇವರಾಜ್ ತಂಡದವರು ಅಭಿನಯಿಸಿದರು. ನೂರಾರು ಜನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವಾರದ ವ್ಯಂಗ್ಯ ಚಿತ್ರ

'ದಿ ಹಿಂದು'ನಲ್ಲಿ ಸುರೇಂದ್ರನ್



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ